ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 9
ಮಾರ್ಚ್ 2, 2003 ಬೆಲೆ ರೂ. 3.00



ಎಸ್ಕಾಂ ಮುತ್ತಿಗೆಗೆ ಜನರ ದಂಡು


ಜಾಗತೀಕರಣದ ವಿರುದ್ಧ ಸಮರ ಹೂಡಿದ ವಿದ್ಯಾರ್ಥಿ ಸಮ್ಮೇಳನ



ಪೈಶಾಚಿಕ ಕಾರ್ಯಸೂಚಿಗೆ ರಾಷ್ಟ್ರಪತಿ ಅನುಮೋದನೆ




ಕರ್ನಾಟಕದಲ್ಲಿ ವಾಜಪೇಯಿ ಬಿಜೆಪಿ ನಿರ್ಲಜ್ಜ ನಾಟಕ



ಇರಾಕ್ ಯುದ್ಧ ಬೇಡ: ಒಂದೂವರೆ ಕೋಟಿ ಜನರ ಪ್ರತಿಭಟನೆ

ವೈಮಾನಿಕ ಸರಬರಾಜು ಕಾರ್ಯಾಚರಣೆ ಅನುಭವ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

17

ಕಳೆದ ಸಂಚಿಕೆಯಲ್ಲಿ ಚಳುವಳಿ ಹತ್ತಿಕ್ಕಲು ಭಾರತೀಯ ಪಡೆಗಳು ಬ್ರಿಟಿಷರಿಗೆ ನೆರವು ನೀಡಿದ್ದು, ಗಾಂಧೀಜಿ ಆರಂಭಿಸಿದ್ದ ಚಳುವಳಿ ಕೇವಲ 15 ದಿನಗಳಷ್ಟು ಹಳೆಯದಾದರೂ ಆಗಲೇ ದುರ್ಬಲಗೊಂಡಿದದ್ದು, ಇಡೀಯುರೋಪ್ ಫ್ಯಾಸಿಸಂನ ಪದತಲದಲ್ಲಿ ನಲುಗುತ್ತಿದ್ದಾಗ ಬೃಹತ್ ಸೇನೆಗಳು ರಷ್ಯಾದಲ್ಲಿ ಭೀಕರ ಕದನದಲ್ಲಿ ನಿರತರಾಗಿದ್ದಾಗ, ಇಡೀ ದೂರಪ್ರಾಚ್ಯ ಕ್ರಾಂತಿಕಾರಿ ಬೆಂಕಿಯಲ್ಲಿ ಸುಟ್ಟು ಹೋಗುತ್ತಿರುವಾಗ ನಮ್ಮ ದೇಶದಲ್ಲಿ ಶಸ್ತ್ರಾಸ್ತ್ರಗಳಿಗೆ ಬೇಡಿಗೆ ಇದ್ದಾಗ, ಕ್ರಾಂತಿಕಾರಿ ತಿರುವಿನ ಕಾಲಘಟ್ಟದಲ್ಲಿರುವಾಗ ಕೇವಲ ಅಹಿಂಸಾ ಚಳುವಳಿಗೆ ಕರೆ ಕೊಡುವುದರಿಂದ ಜನರನ್ನು ಶಾಂತರನ್ನಾಗಿ ಇರಿಸಬಹುದೆಂಬ ಭ್ರಮೆ ಯಾವುದೇ ಸಮಚಿತ್ತದ ವ್ಯಕ್ತಿಯು ಕಲ್ಪಿಸಲಾರ ಎಂಬುದು ಜಯಪಾಲರ ಅಭಿಪ್ರಾಯ. ಮುಂದೆ...



ಕನ್ನಡಕ್ಕೆ: **ವಿಶ್ವ ಕುಂದಾಪುರ**

ನಮ್ಮ ಸಂಘಟನೆ 1942 ರಲ್ಲಿ ಕ್ರಾಂತಿಕಾರಿ ಶಕ್ತಿಗಳಿಗೆ ಶಸ್ತ್ರಾಸ್ತ್ರಗಳು ಮತ್ತು ಹಣವನ್ನು ನೀಡಿತು. ನಮ್ಮ ಪಡೆಗಳಿಂದ ಹೊರಗಿರುವ ಶಕ್ತಿಗಳಿಗೆ ಮೂರು ಸಾವಿರಕ್ಕೂ ಹೆಚ್ಚು ಶಸ್ತ್ರಾಸ್ತ್ರಗಳನ್ನು ನೀಡಿದ್ದು ಕಲ್ಕತ್ತದಲ್ಲಿ ಅಕ್ಟೋಬರ್‌ನಲ್ಲಿ ನಡೆದ ಸಭೆಯೊಂದರಲ್ಲಿ ದೃಢಪಟ್ಟಿತು. ಈ ಶಸ್ತ್ರಾಸ್ತ್ರಗಳನ್ನು ಪಡೆದವರು ತಮ್ಮ ನೆನಪುಗಳನ್ನು ದಾಖಲಿಸಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ. ಭಾರತೀಯ ಸಶಸ್ತ್ರ ಪಡೆ ಸ್ವಾತಂತ್ರ್ಯ ಸಂಗ್ರಾಮದಿಂದ ತುಂಬಾ ದೂರ ನಿಂತಿತ್ತು ಹಾಗೂ ಬ್ರಿಟೀಷ್ ಸಾಮ್ರಾಜ್ಯಶಾಹಿಗಳಿಗೆ ನಷ್ಟವಾಗಿತ್ತು ಎಂಬ ತಪ್ಪು ಅಭಿಪ್ರಾಯವನ್ನು ತೊಡೆದುಹಾಕಲು ಇದರಿಂದ ನೆರವಾಗುತ್ತದೆ.

ನಾವು ನಿರ್ದೇಶನಗಳನ್ನು ನೀಡಿದ್ದರೂ, ಸಶಸ್ತ್ರ ಪಡೆಗಳ ಒಳಗಡೆ ಕೆಲವು ಹಠಾತ್ ವಿದ್ಯಮಾನಗಳು ನಡೆದವು. ಮೀರತ್‌ನಲ್ಲಿನ ಪದಾತಿ ದಳವೊಂದು ಯುದ್ಧದಲ್ಲಿ ಸಕ್ರಿಯ ಕಾರ್ಯಾಚರಣೆಗೆ ತೆರಳಲು ನಿರಾಕರಿಸಿತು. ಮುಂಬಯಿಯಲ್ಲಿ ಘಟಕವೊಂದು ಬ್ರಿಟೀಷ್ ಪಡೆಗಳ ಮೇಲೆ ಗುಂಡು ಹಾರಿಸಿತು. ಭಾರತೀಯ ಸೈನಿಕರು ತಮ್ಮ ಜನತೆಯ ಮೇಲೆ ಗೋಲಿಬಾರ್ ಮಾಡಲು ನಿರಾಕರಿಸಿದ ಪ್ರಕರಣಗಳು ವರದಿಯಾದವು.

1942 ರ ಬಂಡಾಯದ ಬಿಸಿ ಆಡುತ್ತಿರುವಾಗ, ಸೆಪ್ಟೆಂಬರ್ ತಿಂಗಳ ಮಳೆ ಸುರಿಯುತ್ತಿದ್ದ ಒಂದು ಸಂಜೆ ವಿಶೇಷ ರೈಲೊಂದು ಆಸ್ಸಾಂ ಹಾಗೂ ಬರ್ಮಾ ಗಡಿಗಳಿಗೆ ಕರೆದೊಯ್ಯಲು ಹೊರಟಿತು. ಹೋಗಲು ನಾನೂ ಆತುರದಿಂದಿದ್ದೆ. ನನಗೆ ತುಂಬಾ ಸಂತಸವಾಗಿತ್ತು.

ನಾನೀಗ ವಿವರವಾದ ಕತೆಯನ್ನು ಮೊಟಕುಗೊಳಿಸುತ್ತೇನೆ. ಭಾರತೀಯ ಸಶಸ್ತ್ರ ಪಡೆಗಳು ರಾಜಕೀಯವಾಗಿ ಜಾಗೃತಿಗೊಳ್ಳಲು ಹಾಗೂ ನಮ್ಮ ಸಂಘಟನೆ ಬಲಗೊಳ್ಳಲು ಮತ್ತು ನಾನು ಸಶಸ್ತ್ರ ಪಡೆಗಳನ್ನು ತೊರೆಯಲು ಕಾರಣವಾದ ವಿದ್ಯಮಾನಗಳ ಬಗ್ಗೆ ಸೀಮಿತಗೊಳಿಸುತ್ತೇನೆ.

ನಮ್ಮ ವಿಶೇಷ ರೈಲು ಕೋಲ್ಕತ್ತಾದ ಮೂಲಕ ಹಾದುಹೋಯಿತು. ಅಲ್ಲಿ ಎರಡು ದಿನ ತಂಗಿತ್ತು. ನಾನು ಕೋಲ್ಕತ್ತಾ ನಗರಕ್ಕೆ ಹೋಗಿ ಗ್ರೇಟ್ ಈಸ್ಟರ್ನ್ ಹೋಟೇಲ್‌ನಲ್ಲಿ ನನ್ನ ಸಹೋದ್ಯೋಗಿಗಳನ್ನು ಭೇಟಿಯಾದೆ. ಹೆಂಗಸರ ಜನನಾಂಗಗಳಿಗೆ ಬಂದೂಕಿನ ಬಯೋನೆಟ್‌ಗಳನ್ನು ಚುಚ್ಚಿದ, ಅತ್ಯಾಚಾರ ಹಾಗೂ ಮುಗ್ಧ ಮಕ್ಕಳ ಹತ್ಯೆಯ ಘೋರ ಘಟನೆಗಳನ್ನು ಅವರು ವಿವರಿಸಿದರು. ನಾನು ಭಾವಪರವಶನಾಗಿ ಅತ್ತುಬಿಟ್ಟೆ. ಈ ಕತೆಗಳನ್ನು ವಿವರಿಸುತ್ತಾ ಮುಂದುಗಡೆ ಕುಳಿತಿದ್ದ ಕಟ್ಟಾಳು ಸಿಖ್ ಅಧಿಕಾರಿಯ ಕಣ್ಣುಗಳಿಂದ ನೀರು ಹರಿಯಿತು. ಮುಯ್ಯಿಗೆ ಮುಯ್ಯಿ ತೀರಿಸಲು ನಾವು ಪಣ ತೊಟ್ಟೆವು.

ಗ್ರೇಟ್ ಈಸ್ಟರ್ನ್ ಹೋಟೇಲ್ ಎಂದಿನಂತೆ ಗಿಜಿಗುಡುತ್ತಿತ್ತು. ಶ್ರೀಮಂತ ಭಾರತೀಯರು ಹಾಗೂ ಅಧಿಕಾರಿಗಳು ಡೈನಿಂಗ್ ಹಾಲ್‌ನಲ್ಲಿ ತುಂಬಿದ್ದರು. ಶಾಂಪೇನ್ ನೀರಿನಂತೆ ಹರಿಯಿತು. ಸೇನೆಯ ಅಧಿಕಾರಿಗಳು ಬಾಯಾರಿದವರಂತೆ ಕುಡಿದರು, ಗಬಗಬನೆ ತಿಂದರು.

ನಮ್ಮ ಜನರ ವಿರುದ್ಧ ಬ್ರಿಟೀಷರು ನಡೆಸುತ್ತಿದ್ದ ಕ್ರೌರ್ಯಗಳನ್ನು ವಿವರಿಸುವ ಕರಪತ್ರದ ಕರಡು ಸಿದ್ಧಪಡಿಸಲು ಕುಳಿತೆವು. ನಮ್ಮ ಹೃದಯ ದುಃಖ ಹಾಗೂ ಕೋಪದಿಂದ ತುಂಬಿಹೋಗಿತ್ತು. ಈ ಕರಪತ್ರವನ್ನು ತುಂಬಾ ವ್ಯಾಪಕವಾಗಿ ಹಂಚಲಾಯಿತು. ಭಾರತೀಯ ಪಡೆಗಳು ಕಾರ್ಯಾಚರಿಸುತ್ತಿದ್ದ ಭಾರತ- ಬಾಂಗ್ಲಾ ಗಡಿಯ ಅರಣ್ಯಗಳಲ್ಲಿ ಕೂಡ ಈ ಕರಪತ್ರಗಳು ಪ್ರಚಾರಗೊಂಡವು. ರೇಷನ್ ಟಿನ್‌ಗಳಲ್ಲಿ ಇಟ್ಟು ಅವುಗಳನ್ನು ಮಧ್ಯಪೂರ್ವಕ್ಕೆ ಕೂಡಲೇ ರವಾನಿಸಲಾಯಿತು. ಭಾರತದಲ್ಲಿ ನಮ್ಮ ಸಂಘಟನೆಯ ಜಾಲದ ಮೂಲಕ ಅವುಗಳನ್ನು ವ್ಯಾಪಕವಾಗಿ ವಿತರಿಸಲಾಯಿತು.

ನನ್ನನ್ನು ಅಸ್ಸಾಮಿನ ತೇಜ್‌ಪುರದಲ್ಲಿ ನಿಯೋಜಿಸಲಾಯಿತು. ಕಚಿನ್ ಮತ್ತು ಚಿನ್ ಬೆಟ್ಟಗಳಲ್ಲಿ ಶತ್ರುಪಡೆಗಳ ಹಿಂದೆ ಕಾರ್ಯಾಚರಿಸುತ್ತಿದ್ದ ಬ್ರಿಟೀಷ್ ಬೇಹುಗಾರಿಕೆ ಪಡೆಗಳಿಗೆ ವಿಮಾನಗಳ ಮೂಲಕ ಆಹಾರ ಸರಬರಾಜು ಮಾಡುವ ಕೆಲಸವನ್ನು ನನ್ನ ವಿಭಾಗಕ್ಕೆ ವಹಿಸಲಾಯಿತು. ನಮ್ಮ ಇಡೀ ತಂಡಕ್ಕೆ ಇದು ಪೂರ್ಣವಾಗಿ ಹೊಸ ಅನುಭವವಾಗಿತ್ತು. ತೀರಾ ತಾಂತ್ರಿಕವಾದ ಈ ಕೆಲಸ ನಿರ್ವಹಿಸಲು ನಿಯೋಜಿತಗೊಂಡ ಪ್ರಪ್ರಥಮ ಭಾರತೀಯ ತಂಡ ನನ್ನದಾಗಿತ್ತು. ಪ್ರಥಮ ವೈಮಾನಿಕ ಸರಬರಾಜು ವಿಭಾಗದ ನೇತೃತ್ವ ವಹಿಸಿದ ಪ್ರಥಮ ಭಾರತೀಯ ಅಧಿಕಾರಿ ನಾನಾಗಿದ್ದೆ. ಈ ವಿಭಾಗ ಅಗರ್ತಲಾದಿಂದ ಕಾರ್ಯಾಚರಿಸಿತು. ಬರ್ಮಾದಲ್ಲಿ ಕಾರ್ಯಾಚರಣೆಗಿಳಿದ ಬ್ರಿಗೇಡಿಯರ್ ವಿನ್‌ಗೇಟ್ಸ್ ಅವರ ತಂಡಕ್ಕೆ ಆಹಾರ, ಸಶಸ್ತ್ರ, ಮದ್ದುಗುಂಡು ಮತ್ತು ಗ್ರೆನೇಡ್‌ಗಳನ್ನು ಪೂರೈಸಿದೆವು.

ತೇಜಾಪುರದಲ್ಲಿ ನಾನು ಕ್ಯಾಪ್ಟನ್ (ನಂತರ ಕರ್ನಲ್) ಕಾಥಾರ್ನ್‌ರನ್ನು ಭೇಟಿಯಾದೆ. ಅವರೊಬ್ಬ ಉತ್ತಮ ರೀತಿಯ ಆಂಗ್ಲರಾಗಿದ್ದರು ಹಾಗೂ ಒಳ್ಳೆಯ ಅಧಿಕಾರಿಯಾಗಿದ್ದರು. ವೈಮಾನಿಕ ಸರಬರಾಜು ತಂತ್ರದ ಜನಕ (ಪಯನೀರ್)ರಲ್ಲಿ ಒಬ್ಬ ಎಂದು ಕರ್ನಲ್ ಕಾಥಾರ್ನ್ ಅವರ ಹೆಸರು ಯುದ್ಧ ಇತಿಹಾಸದಲ್ಲಿ ದಾಖಲಾಗುತ್ತದೆ.

ವಿಮಾನದ ಮೂಲಕ ಸರಬರಾಜು ಮಾಡಲು ಆಗದಿರುವುದು ಯಾವುದೂ ಇಲ್ಲ ಎನ್ನುವುದು ನನ್ನ ಅಭಿಪ್ರಾಯ. ಬರ್ಮಾದಿಂದ ಭಾರತಕ್ಕೆ ಮುಕ್‌ವ್ಯಾಂಗ್ ಮತ್ತು ಶಿಬ್‌ಯಾಂಗ್ ಕಣಿವೆಗಳ ಮೂಲಕ ಬರುತ್ತಿದ್ದ ನಿರಾಶ್ರಿತರಿಗೆ ಅಕ್ಕಿ ಸರಬರಾಜು ಮಾಡುವುದನ್ನು ಆರಂಭಿಸಿದ ನಾವು ಕೊನೆ ಕೊನೆಯಲ್ಲಿ ಜೀಪುಗಳು ಹಾಗೂ ಬೃಹತ್ ಗನ್‌ಗಳನ್ನು ಒಯ್ದೆವು, ಅಲ್ಲದೆ ಮಾರ್ತಾಕ್ ಬಾಂಬ್‌ಗಳನ್ನು ಸಣ್ಣ ಸಶಸ್ತ್ರಗಳನ್ನು ವಿಮಾನದ ಮೂಲಕ ಕೆಳಗೆಸೆಯುವ ಮಟ್ಟಕ್ಕೆ ಹೋದೆವು. ಸೇನೆಯ 14ನೇ ತುಕಡಿಯ ಮುನ್ನಡೆ ಅಷ್ಟೊಂದು ತೀವ್ರವಾಗಲು ಅವುಗಳ ಮುಖ್ಯ ವಿಭಾಗಗಳನ್ನು ವಿಮಾನಗಳ ಮೂಲಕ ಸರಬರಾಜು ಮಾಡಿದ್ದೇ ಕಾರಣವಾಗಿತ್ತು. ಇದು ಕಾಥಾರ್ನರ ಕೂಸಾಗಿತ್ತು. ಅದರ ಕಾರ್ಯಾಚರಣೆಯಲ್ಲಿ ಕೈಜೋಡಿಸುವ ಅವಕಾಶ ದೊರೆತಿದ್ದು ಹೆಮ್ಮೆಯ ಸಂಗತಿಯಾಗಿತ್ತು.

ಹೃದಯದ ತುಡಿತ

ಆದರೆ ನನ್ನ ಹೃದಯ ಇನ್ನೆಲ್ಲೋ ಇತ್ತು. ಆಸ್ಸಾಮ್‌ನ ಕನಸಿನ ಲೋಕದಂಥ ಪ್ರಕೃತಿರಮ್ಯ ತಾಣದಲ್ಲಿ ನನ್ನ ಸಹೋದ್ಯೋಗಿಗಳೊಂದಿಗೆ ನಮ್ಮನ್ನು ಗಣನೆಗೆ ತೆಗೆದುಕೊಳ್ಳುವಂಥ ಕನಸು ಕಾಣುತ್ತಿದ್ದೆ. ಸಂಘಟನೆಯ ಜತೆ ದಿನನಿತ್ಯದ ಸಂಪರ್ಕ ಇಟ್ಟುಕೊಳ್ಳುವುದು ಅಸಾಧ್ಯವಾಗಿತ್ತು. ರಣರಂಗದಲ್ಲಿ ಘಟಕಗಳು ಹರಡಿಹೋಗಿದ್ದವು. ಸಮನ್ವಯದಿಂದ ಕೆಲಸ ಮಾಡಲು ಸಾಧ್ಯವಿರಲಿಲ್ಲ.

"ಯುದ್ಧದ ವೇಳೆ ಕಡಿಮೆ ಕ್ರಿಯಾಶೀಲತೆ ಇರಲಿ ಘಟಕದೊಳಗೆ ನೀವಾಗಿಯೇ ಸಂಘಟಿತರಾಗಿ ಒಳಗೆ ಇರುವ ಹೊರಗಿನವರ ಮೇಲೆ ಅವಲಂಬಿಸಬೇಡಿ. ಯುದ್ಧದ ಪರಿಸ್ಥಿತಿಗಳು ಹಾಗೂ ವಸಾಹತುಶಾಹಿಯ ಶಿಸ್ತಿನಿಂದ ನಮಗೆ ಕಿರಿಕಿರಿಯಾಗುತ್ತದೆ ಹಾಗೂ ಪ್ರಚೋದನೆ ನೀಡುತ್ತದೆ. ಅತೃಪ್ತಿಗೆ ಒಂದು ದೃಷ್ಟಿಕೋನವಿರಲಿ" 1943 ರ ಆರಂಭದಲ್ಲಿ ಸಂಘಟನೆ ನೀಡಿದ ಕೆಲವು ಸೂಚನೆಗಳಿವು. ಬರ್ಮಾ ವಲಯದಲ್ಲಿ ಮೌನ ನೆಲೆಸಿತ್ತು. ಎಸ್.ಇ.ಎ.ಸಿ ಇನ್ನೂ ಯೋಜನೆಯ ರೂಪದಲ್ಲಿತ್ತು. ಮೌಂಟ್ ಬ್ಯಾಟ್ ಇನ್ನೂ ಬಂದಿರಲಿಲ್ಲ. ರಂಗ ಸ್ಥಗಿತಗೊಂಡಿತ್ತು.

1943 ಏಪ್ರಿಲ್‌ನಲ್ಲಿ ನನ್ನನ್ನು ಪುನಃ ರಾವ್‌ಲ್ಪಿಂಡಿ ಸಮೀಪದ ಚಕ್ಲಾದಲ್ಲಿ ನಿಯೋಜಿಸಲಾಯಿತು. ಮೇಜರ್ ರಿಫೆ ಅವರ ನೇತೃತ್ವದಲ್ಲಿ ಹೊಸ ವೈಮಾನಿಕ ಸರಬರಾಜು ವಿಭಾಗವನ್ನು ರಚಿಸುವ ಕಾರ್ಯ ಈ ಘಟಕದ್ದಾಗಿತ್ತು. ಬರ್ಮಿಂಗ್‌ಹ್ಯಾಮ್‌ನ ಒಬ್ಬ ಸಾರಿಸಿಟಾರ್ ಆಗಿದ್ದ ರಿಫೆ ಉದಾರ ರಾಜಕೀಯ ಚಿಂತನೆಯ ಪ್ರತಿಪಾದಕರಾಗಿದ್ದರು ಹಾಗೂ ಭಾರತ ಸ್ವತಂತ್ರಗೊಳ್ಳಬೇಕೆಂಬ ನಿಲುವಿನ ಬೆಂಬಲಿಗರಾಗಿದ್ದರು.

ಇಲ್ಲಿಯೂ ಕಾಥಾರ್ನ್ ಕಮಾಂಡೆಂಟ್ ಆಗಿದ್ದು ನಾನು ಅವರ ಅಚ್ಚುಮೆಚ್ಚಿನ ಸೇನಾನಿಯಾಗಿದ್ದೆ.

ಚಕ್ಲಾದಲ್ಲಿದ್ದ ಸಂಕ್ಷಿಪ್ತ ಅವಧಿಯಲ್ಲಿ ನಾನು ನಮ್ಮ ಸಂಘಟನೆಯನ್ನು ಬಲಪಡಿಸಲು ಸಮಯವನ್ನು ವಿನಿಯೋಗಿಸಿದೆ. ಮಹತ್ವದ ಸಂಪರ್ಕ ಘಟಕವಾದ ಅಬ್ಸರ್ವರ್ ಕಾರ್ಪ್ಸ್‌ನಲ್ಲಿ ಈ ಕೆಲಸಕ್ಕೆ ಗಮನ ನೀಡಿದೆ. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾಗ ಇಂಡಿಯನ್ ಸೋಲ್ಜರ್ಸ್ ಲೀಗ್ (ಐಎಸ್‌ಎಲ್) ಎಂಬ ಪರ್ಯಾಯ ಸಂಘಟನೆಯೊಂದು ಇರುವುದನ್ನು ಕಂಡುಹಿಡಿದೆ. ಈ ಸಂಘಟನೆ ಮುಖ್ಯವಾಗಿ ಎನ್‌ಸಿಓಗಳು ಹಾಗೂ ಸೈನಿಕರಿಗೆ ಸೀಮಿತವಾಗಿತ್ತು. ಸಿಗ್ನಲ್ ಕಾರ್ಪ್ಸ್ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಎಡಬ್ಲ್ಯುವಿಸಿ (ಐ) ಹುಡುಗಿ ಆಗ ತಾನೇ ಜಬಲ್ಪುರದಿಂದ ಅಲ್ಲಿ ನೇಮಕಗೊಂಡಿದ್ದಳು. ಬಂಡಾಯ ಪ್ರವೃತ್ತಿಯ ಈ ಯುವತಿ ಈ ಲೀಗ್ ಪರವಾಗಿ ಕಾರ್ಯನಿರ್ವಹಿಸಲು ಬಂದಿದ್ದರು.

(ಮುಂದುವರಿಯುವುದು)

ಅಂತರಾಷ್ಟ್ರೀಯ ಮಹಿಳಾ ದಿನ ವಿಶೇಷ ಸಂಚಿಕೆ

ಮಾರ್ಚ್ 8 ರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ವಿಶೇಷ ಲೇಖನಗಳ ಸಂಚಿಕೆ ಹೊರತರಲಿದ್ದು ಹೆಚ್ಚಿನ ಪ್ರತಿಗಳಿಗಾಗಿ ಕೂಡಲೇ ತಿಳಿಸಿ

-ಸಂ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಬ್ರುವರಿ 24 - ಸೋಮವಾರ.
ಗೆಸ್ಕಾಂ ಮುತ್ತಿಗೆ - ಗುಲ್ಬರ್ಗಾದಲ್ಲಿ

ಫೆಬ್ರುವರಿ 26 - ಬುಧವಾರ.
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿ (ಹೆಸ್ಕಾಂ) ಪ್ರಧಾನ ಕಛೇರಿ ಎದುರು ಪ್ರತಿಭಟನೆ ಮಧ್ಯಾಹ್ನ 12 ಗಂಟೆಗೆ ಇಂದಿರಾ ಗಾಜಿನ ಮನೆಯಿಂದ ಮೆರವಣಿಗೆ.

ಫೆಬ್ರುವರಿ 27- ಗುರುವಾರ.
ಮಂಗಳೂರು ವಿದ್ಯುತ್ ಸರಬರಾಜು ಕಂಪೆನಿ (ಮೆಸ್ಕಾಂ) ಪ್ರಧಾನ ಕಛೇರಿ ಎದುರು ಪ್ರತಿಭಟನೆ.

ಮಾರ್ಚ್ 3 ಸೋಮವಾರ.
ಬಂಗಳೂರು (ಬೆಸ್ಕಾಂ) ಪ್ರಧಾನ ಕಚೇರಿ ಎದುರು ಪ್ರತಿಭಟನೆ.

ಫೆಬ್ರುವರಿ 26 - ಬುಧವಾರ.
ಕೇಂದ್ರ ಸರಕಾರದ ದೇಶವಿರೋಧಿ, ಜನವಿರೋಧಿ, ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಬೃಹತ್ ಪಾರ್ಲಿಮೆಂಟ್ ಚಲೋ.
ಕಾರ್ಮಿಕ ಸಂಘಗಳ ರಾಷ್ಟ್ರೀಯ ಅಸೆಂಬ್ಲಿ ಕರೆ.

ಮಾರ್ಚ್ 4 - 2003
ಅಂಗನವಾಡಿ ನೌಕರರ ಅನಿರ್ದಿಷ್ಟಾವಧಿ ಸಾಮೂಹಿಕ ಧರಣಿ ಸತ್ಯಾಗ್ರಹ, ಬೆಳಿಗ್ಗೆ 11 ಗಂಟೆಗೆ ರೈಲ್ವೆ ನಿಲ್ದಾಣದಿಂದ ಬೃಹತ್ ಮೆರವಣಿಗೆ.

ಕರ್ನಾಟಕದಲ್ಲಿ ವಾಜಪೇಯಿ - ಬಿಜೆಪಿಯ ಡೊಂಗಿ ಕಸರತ್ತು

ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರು ಕಳೆದ ವಾರ ಕರ್ನಾಟಕಕ್ಕೆ ಬಂದು ಹೋದರು. ಅವರಿಗೆ ಬಿಡುವಿರದ ಕಾರ್ಯಕ್ರಮಗಳು! 13 ರ ಸಂಜೆ 49 ಕೋಟಿ ರೂ.ವೆಚ್ಚದ ಕೇಬಲ್ ಆಧಾರಿತ ಸೇತುವೆಯನ್ನು ಕೃಷ್ಣರಾಜಪುರದಲ್ಲಿ ಉದ್ಘಾಟಿಸಿದರು. 14 ರ ಬೆಳಗ್ಗೆ ಕೋಲಾರದಲ್ಲಿ ಹೈವೋಲ್ಟೇಜ್ ಡೈರೆಕ್ಟ್ ಕರೆಂಟ್ ಬೈ ಪೋಲ್ ಲೈನ್‌ನ್ನು (ವಿದ್ಯುತ್ ನೇರ ಸರಬರಾಜು ಮಾರ್ಗ) ರಾಷ್ಟ್ರಕ್ಕೆ ಅರ್ಪಿಸಿದರು. ಅಂದು ಸಂಜೆ ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೇ ವಲಯದ ಕಛೇರಿ ಉದ್ಘಾಟನೆ.

ಈ ಕಾರ್ಯಕ್ರಮಗಳು ಸರ್ಕಾರಿ ಕಾರ್ಯಕ್ರಮಗಳು. ಆದರೆ ಇದರ ನೆನಪೇ ಬಾರದಂತೆ ಬಿಜೆಪಿ ಪಕ್ಷ ಅದು ತನ್ನದೇನೋ ಎಂಬಂತೆ ಎರ್ರಾಬಿರ್ರಿಯಾಗಿ, ಎಲ್ಲಾ ಕಡೆಗಳಲ್ಲಿಯೂ ಬ್ಯಾನರ್, ಬಾವುಟ ಹಾಕಿ ಪ್ರಚಾರಿಸಿತ್ತು. ಈ ಸಮಾರಂಭದಲ್ಲಿ ಮುಖ್ಯಮಂತ್ರಿ, ಚುನಾಯಿತ ಪ್ರತಿನಿಧಿಗಳು ಕಾಣಿಸಿಕೊಂಡಿದ್ದು ಇವೆಲ್ಲಾ ಸರ್ಕಾರದ್ದು ಎಂದು ನೆನಪಿಸಿತು. ಬಿಜೆಪಿಯ ಇಂತಹ 'ಭರ್ಜರಿ ಸ್ವಾಗತ'ದ ಹಿಂದೆ ಇವುಗಳ ಬಗೆಗಿನ ಸಾರ್ವಜನಿಕರ ಮೆಚ್ಚುಗೆ ಮುಖ್ಯವಾಗಿ ಅದೆಲ್ಲಾ ತನ್ನದೇ ಸಾಧನೆ ಎಂದು ಲಾಭ ಹೊಡೆಯಲು ಹರಸಾಹಸ ಮಾಡಿದ್ದು. ಹಾಗೆಯೇ ಬಿಂಬಿಸಿದ್ದು. ಅನಂತಕುಮಾರ್, ಸಂಕೇಶ್ವರ್, ಯಡಿಯೂರಪ್ಪನವರಿಗೆ ಇಂತಹ ಸಂಧಿಯಲ್ಲಿ ಸಮಾರಾಧನೆ ತುಂಬಾ ಹಿಡಿಸಿದಂತೆ ಕಂಡಿತು. ಸೇತುವೆ, ವಿದ್ಯುತ್ ಜಾಲ, ರೈಲ್ವೆ ವಲಯ ಇದೆಲ್ಲಾ ಹಿಂದಿನ ಸರ್ಕಾರಗಳು, ದೇವೇಗೌಡರಾದಿಯಾಗಿ ಕೈಗೊಂಡ ಕ್ರಮಗಳ ಫಲ. ಸೇತುವೆಯಂತೂ ಜನತಾದಳದ ಸರ್ಕಾರದ ಅವಧಿಯಲ್ಲಿ ರೂಪುಗೊಂಡು, ಕಾರ್ಯಾರಂಭವಾಗಿದ್ದು. ಯಾರೋ ಆರಂಭಿಸಿದ ಯೋಜನೆಗಳನ್ನು ಉದ್ಘಾಟಿಸಲು ಇನ್ನಾರೋ ಇದ್ದವರಷ್ಟೇ ಸಾಧನೆ ಎಂದು ಸಾರುವುದು ನಾಚಿಕೆಗೇಡು. ಅಂತಹ ಅಳುಕಿನ ಭಾವವೂ ಈ 'ಕಮಲಧಾರಿ'ಗಳಿಗೆ ಕಾಡಲಿಲ್ಲ. ಇಂತಹ ಯೋಜನೆಗಳು ಪೂರ್ಣವಾಗಲು ಹಲವು ವರುಷಗಳು ಬೇಕಾಗುವುದರಿಂದ ಹಿಂದೆ ಶ್ರಮಿಸಿದವರನ್ನು ನೆನಪಿಸಿಕೊಳ್ಳುವ ಕನಿಷ್ಟ ಸೌಜನ್ಯವೂ ಮರೆಯಾಗಿತ್ತು.

ಈ ಸಮಾರಂಭಗಳಲ್ಲಿ ಪ್ರಧಾನಿಯವರು ಮುತ್ಸದ್ದಿಯಂತೆ, ದಾರ್ಶನಿಕರಂತೆ ತೋರ್ಪಡಿಸಿಕೊಳ್ಳಲು ಯತ್ನಿಸಿದರು. ಸೇತುವೆ, ರಸ್ತೆಗಳು ನಮ್ಮ ಪರಂಪರೆಯಲ್ಲಿ ಮಹತ್ವದ್ದು ಎಂದು ಸಂಸ್ಕೃತ ಶ್ಲೋಕ ಉದ್ಧರಿಸಿ ಮನುಷ್ಯ ನಡುವಿನ ಸಂಬಂಧಗಳ ಗಾಢತೆ, ಪ್ರೀತಿ ಬಗ್ಗೆ ಉಸುರಿಸಿದ್ದು ಹಾಸ್ಯಾಸ್ಪದವಾಗಿ ಕಂಡಿತು. ಇಡೀ ದೇಶದಲ್ಲಿ ಮನುಷ್ಯತ್ವವನ್ನೇ ಮರೆತು, ಹತ್ಯಾಕಾಂಡಗಳನ್ನು ಸಮರ್ಥಿಸಿಕೊಳ್ಳುವ ಕಹಿ ಹೃದಯದ ಈ ಕರಸೇವಕ ಕವಿ, ತಮ್ಮ 'ಖಾವಿಪಡೆ'ಯ ಕರಾಳ ಕೃತ್ಯಗಳನ್ನು ಹೇಗೆ ಅರ್ಥೈಸಿಕೊಳ್ಳುವುದು ಎಂಬ ಕಿಂಚಿತ್ತು ಚಿಂತನೆಗೆಡೆಮಾಡದಂತೆ ಕಾಣಲಿಲ್ಲ. ದೆವ್ವದ ಬಾಯಲ್ಲಿ ಭಗವದ್ಗೀತೆ ಹೀಗೆ ಇರುತ್ತದಂತೆ!

ಇನ್ನೊಂದು ಹಾಸ್ಯಾಸ್ಪದ ಪ್ರಸಂಗ ನಡೆದಿದ್ದು ಹುಬ್ಬಳ್ಳಿಯಲ್ಲಿ. ನೈರುತ್ಯ ರೈಲ್ವೆ ವಲಯದ ಕಛೇರಿ ಆಗಬೇಕೆಂಬುದು ಹಲವು ದಶಕಗಳ ಬೇಡಿಕೆ. ಅದಕ್ಕಾಗಿ ಹೋರಾಟ. ಆಗಈ ಚಡ್ಡಿ ಪಡೆ ನಾಪತ್ತೆಯಾಗಿತ್ತು! ಬಳ್ಳಾರಿಯನ್ನು ಹುಬ್ಬಳ್ಳಿ ವಲಯಕ್ಕೇ ಸೇರಬೇಕು ಎಂದು ತಿಂಗಳುಗಳ ಹೋರಾಟ ಮತ್ತು ಅದಕ್ಕಾಗಿ ಬಂಧನ, ಮೊಕದ್ದಮೆ. ಈಗ ಕೇಂದ್ರ ಸರ್ಕಾರ ಒಪ್ಪಲೇಬೇಕಾಗಿ ಬಂತು. ಆದರೆ ಇದರ ಸುಳಿವರಿತ ಬಿಜೆಪಿ ಸಂಸದ ವಿಜಯ ಸಂಕೇಶ್ವರ ನಾಟಕ ಆರಂಭಿಸಿಯೇಬಿಟ್ಟರು. ತಮ್ಮ ಪಕ್ಷದ, ಕೇಂದ್ರ ಸರ್ಕಾರದ ವಿರುದ್ಧವೇ ಹೋರಾಡುವುದಾಗಿ, ಸಚಿವರ ಕಾರ್ಯಕ್ರಮದ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸುವುದಾಗಿ ಹೇಳಿಕೊಂಡರು. ಅವರ ಪತ್ರಿಕೆಯಲ್ಲಿ ಮುಖಪುಟದ ಸುದ್ದಿಯಾಯಿತು. ಈ ನಾಟಕಕ್ಕೆ ಸಚಿವ ಅನಂತಕುಮಾರ್ ಸಹಕರಿಸಿ ಹೊಸ ಖಳೆ ತರಲು ಯತ್ನಿಸಿದರು. ಗೆಜೆಟ್ ಪ್ರಕಟಣೆಯಾದ ಬಳಿಕ 'ತನ್ನ ಹೋರಾಟಕ್ಕೆ ಸಂದ ಜಯ' ಎಂದು ಪೇಪರ್‌ನಲ್ಲಿ ಹಾಕಿಸಿಕೊಂಡರು. ಈ ನಾಟಕ ಅರಿತ ಆ ಪ್ರದೇಶದ ಜನ ಉಗಿದು ಉಪ್ಪಿನಕಾಯಿ ಹಾಕಿದ್ದು ಮಾತ್ರ ಅಷ್ಟು ಸುದ್ದಿಯಾಗಲಿಲ್ಲ.

ಈ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ ವಾಜಪೇಯಿ 'ಪ್ರಾದೇಶಿಕ ಅಸಮಾನತೆ ತರುವ ಕೇಡಿನ ಬಗ್ಗೆ ಮಾತನಾಡಿದ್ದು. ಇದನ್ನು ತೊಲಗಿಸಲೇಬೇಕೆಂದು ಹೇಳಿದರು. ಆದರೆ ತೊಲಗಿಸಬೇಕಾದವರು ತಾವೇ ಎಂಬುದನ್ನು ಮರೆತಿದ್ದರು. ದೇಶವನ್ನೇ ದಿವಾಳಿಯೆಬ್ಬಿಸುವ, ಭೂಮಾಲಕ-ಬಂಡವಾಳಗಾರರ ಪರ, ಸಾಮ್ರಾಜ್ಯಶಾಹಿಗಳ ಪರ ಆರ್ಥಿಕ ರಾಜಕೀಯ ನೀತಿ ಅನುಸರಿಸುತ್ತಾ, ಜಾಗತೀಕರಣದ ಭರಾಟೆಯಲ್ಲಿ ದಾರಿದ್ರ್ಯ ಬೆಳೆಸುವ, ಪ್ರಾದೇಶಿಕ ಅಸಮಾನತೆ ಇನ್ನೂ ಹೆಚ್ಚಿ ಧಾರುಣಗೊಳಿಸುವ ಇವರೇ ನಿರ್ದಿಷ್ಟ ಕ್ರಿಯಾಯೋಜನೆ ಪ್ರಕಟಿಸದೇ ಮಾತನಾಡಿದ್ದು ವಂಚಕತನದ್ದು. ಇದಕ್ಕೆ ರಸ್ತೆ, ಸೇತುವೆಗಳು ಪರಿಹಾರವೆಂದು ವಾದಿಸಿದ್ದು ವಿಚಿತ್ರವಾಗಿತ್ತು.

ಕಾವೇರಿ ನದಿ ನೀರಿನ ಹಂಚಿಕೆ ಇಷ್ಟೊಂದು ಕಗ್ಗಂಟಾಗಿರುವಾಗ ಇದಕ್ಕೆ ಕೊಡುಗೆ ನೀಡಿದ 'ಮುತ್ಸದ್ಧಿ' ವಾಜ್ ಪೇಯಿಯವರೇ 'ಕಾವೇರಿ ನೀರಿನ ವಿವಾದ ಯಾರಿಗೂ ನೋವಾಗದಂತೆ ಬಗೆಹರಿಸಿದ್ದು ತಮ್ಮ ಸಾಧನೆ' ಎಂದು ಹೇಳಿಕೊಂಡದ್ದು ವಾಕರಿಕೆ ತರುವಂತಹದ್ದು.

ಡೋಂಗಿತನಕ್ಕೂ ಮಿತಿಯೆಂಬುದು ಈ ಕರಸೇವಕರಿಗೆ ಇಲ್ಲವೇ?

ಈ ವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ರೈತನ ಆತ್ಮಹತ್ಯೆ

ಮಾನವೀಯತೆ ಮರೆತ ಸರ್ಕಾರ

ಪಿ.ಎಲ್.ಡಿ. ಬ್ಯಾಂಕ್ ಅಧಿಕಾರಿಗಳ ಕಿರುಕುಳ ತಾಳದೆ ಆತ್ಮಹತ್ಯೆ ಮಾಡಿಕೊಂಡ ಗುಲ್ಬರ್ಗಾದ ಯುವರೈತ ಶರಣಪ್ಪನ ಪ್ರಕರಣದಲ್ಲಿ ಸರ್ಕಾರ ಕನಿಷ್ಠ ಮಾನವೀಯತೆಯನ್ನು ಮರೆತು ವರ್ತಿಸತೊಡಗಿದೆ.

ಈ ಸಾವಿಗೆ ಕಾರಣವಾದವರ ಮೇಲೆ ಕ್ರಮ ವಹಿಸುವುದು, ಆತ್ಮಹತ್ಯೆಗೀಡಾದ ಕುಟುಂಬಕ್ಕೆ ಪರಿಹಾರ ಧನ ನೀಡಲು ಆಗ್ರಹಿಸಿ ಚಳುವಳಿ ನಡೆಸುತ್ತಿದ್ದವರ ಮೇಲೆಯೇ ದಬ್ಬಾಳಿಕೆಯನ್ನು ಹರಿಯಬಿಟ್ಟಿದೆ ಸರ್ಕಾರ. ಅದೊಂದು ರಾಜಕೀಯ ಎಂದು ಭಾವಿಸಿದೆ! ಶಾಂತಿಯುತವಾಗಿ ಮೆರವಣಿಗೆ ನಡೆಸುತ್ತಿದ್ದ ರೈತ ಮುಖಂಡರೂ, ಸಿಪಿಐ(ಎಂ), ಜನತಾದಳ ಬಣಗಳು, ಗ್ರಾಮಸ್ಥರು, ಇತರರನ್ನು ಏಕಾಏಕಿ ಬಂಧಿಸಿದ್ದು ಖಂಡನೀಯ. ಈ ಸಂದರ್ಭದಲ್ಲಿ ಶರಣಪ್ಪನ ತಾಯಿ, ನಾಯಕರನ್ನು (ಮಾನ್ಪಡೆ, ಬಿ.ಆರ್.ಪಾಟೀಲ್ ಇತ್ಯಾದಿ) ಬಂಧಿಸಬಾರದೆಂದು, ಬಿಡುಗಡೆಗೊಳಿಸಲೇಬೇಕೆಂದು ಪೋಲೀಸ್ ವ್ಯಾನಿಗೆ ಅಡ್ಡ ಮಲಗಿದ್ದು, ಆಕೆಗೆ ತೀವ್ರ ಗಾಯಗಳಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಜನರ ದುಃಖ ದುಮ್ಮಾನಗಳನ್ನು ಕನಿಷ್ಠ ತಾಳ್ಮೆಯಿಂದ ಕೇಳದ ಕೃಷ್ಣ-ಖರ್ಗೆ ಸರ್ಕಾರ ಇದಕ್ಕೆ ತಕ್ಕ ಪ್ರತಿಫಲ ಅನುಭವಿಸಬೇಕಾಗಿ ಬರುತ್ತದೆ. ಇನ್ನಾದರೂ ದಬ್ಬಾಳಿಕೆ ಭಾಷೆ ಬಿಡಲಿ, ಸಮಸ್ಯೆ ಬಗೆಹರಿಸಲಿ.

ಹುಮ್ನಾಬಾದ್ ಚುನಾವಣೆ: ಬಿಜೆಪಿ-ಕಾಂಗ್ರೆಸ್ ಸೋಲಬೇಕು ಮೂರನೇ ಪರ್ಯಾಯ ಜೆಡಿಎಸ್ ಗೆಲ್ಲಬೇಕು

ಹುಮ್ನಾಬಾದ್‌ನ ವಿಧಾನಸಭಾ ಕ್ಷೇತ್ರದಲ್ಲೀಗ ಉಪ ಚುನಾವಣೆ. ಶಾಸಕರಾಗಿದ್ದ ಬಿಜೆಪಿಯ ಸುಭಾಷ್ ಕಲ್ಲೂರ ಆಯ್ಕೆಯನ್ನು ಅನೂರ್ಜಿತಗೊಂಡ ನಂತರ ಇದು ನಡೆಯುತ್ತಿದೆ. ಇದು ಉಪಚುನಾವಣೆಯಾದರೂ ಆ ಪ್ರದೇಶದಲ್ಲಿ ಹಾಗೂ ರಾಜ್ಯದಲ್ಲಿ ರಾಜಕೀಯ ಮಹತ್ವವಿದೆ.

ಅಲ್ಲಿ ಬಿಜೆಪಿ-ಕಾಂಗ್ರೆಸ್, ಜನತಾದಳ(ಎಸ್) ನಡುವೆ ಹಣಾಹಣಿ ಹೋರಾಟವಿದೆ. ದೇಶದ ಇಂದಿನ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿಗಳಿಗೆ ಅಡಿಯಾಳಾಗುತ್ತಿರುವ ಫ್ಯಾಸಿಸ್ಟ್ ಮನೋಭಾವದ ಕೋಮುವಾದಿ, ಭ್ರಷ್ಟ ಬಿಜೆಪಿಯನ್ನು ಸೋಲಿಸುವುದು ಅತ್ಯಂತ ತುರ್ತಾಗಿದೆ. ಹಾಗೆಯೇ ಉದಾರೀಕರಣ, ಖಾಸಗೀಕರಣ, ವಿಶ್ವಬ್ಯಾಂಕ್-ಐಎಂಎಫ್‌ನ ನಿರ್ದೇಶನಗಳನ್ನು ಜಾರಿಗೊಳಿಸುತ್ತಾ, ಜನದ್ರೋಹಿಯಾಗಿರುವ ಕಾಂಗ್ರೆಸ್‌ನ್ನು ಸೋಲಿಸಿ, ಕಾಂಗ್ರೆಸ್ಸೇತರ ಸೆಕ್ಯುಲರ್ ಮೂರನೇ ಪರ್ಯಾಯವನ್ನು ಬಲಪಡಿಸಬೇಕಿದೆ. ಈ ಹಿನ್ನೆಲೆಯಲ್ಲಿ ಹುಮ್ನಾಬಾದ್ ಕ್ಷೇತ್ರದಲ್ಲಿ ಜನತಾದಳ(ಎಸ್) ನ್ನು ಗೆಲ್ಲಿಸುವುದು ಸಹ ಪ್ರಮುಖವಿದೆ. ಜೆಡಿ(ಎಸ್) ಗೆ ಬೆಂಬಲಿಸಲು ಸಿಪಿಐ(ಎಂ) ನಿರ್ಧರಿಸಿದ್ದು, ಸ್ವತಂತ್ರ ಪ್ರಚಾರ ಕಾರ್ಯಕ್ಕೆ ಇಳಿದಿದೆ. ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಬೀದರ್‌ನಲ್ಲಿ ಪತ್ರಿಕಾಗೋಷ್ಠಿ, ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದಾರೆ.

ಬಾಲ್ಯವಿವಾಹ : ತನಿಖೆ ನಡೆದು ಕ್ರಮವಹಿಸಬೇಕು

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಸಿರವಾರ ಗ್ರಾಮದಲ್ಲಿ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಅಪ್ರಾಪ್ತ ವಯಸ್ಸಿನ ಎಳೆ ಮಕ್ಕಳ ಬಾಲ್ಯವಿವಾಹ ಜರುಗಿದ್ದು ವರದಿಯಾಗಿದೆ. ಅದೂ ಸರ್ಕಾರದ ಉನ್ನತ ಹುದ್ದೆಯಲ್ಲಿರುವ ಸಚಿವರು, ಶಾಸಕರು, ಅಧಿಕಾರಿಗಳು, ಸ್ವಾಮಿಗಳು, ಎಲ್ಲರೂ ಸೇರಿ ಆಶೀರ್ವಾದ ಮಾಡಿದ್ದು. ಕಂಡರೂ ಕಣ್ಮುಚ್ಚಿ ಹೃದಯಪೂರ್ವಕವಾಗಿ ಒಪ್ಪಿದ್ದು. ಇಂತಹ ಸಾಮಾಜಿಕ ಪಿಡುಗಿನ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳದೇ, ಕಾನೂನುಗಳನ್ನು ಗಾಳಿಗೆ ತೂರಿದ ಪ್ರಸಂಗ ದಿಗ್ಭ್ರಮೆ ಮೂಡಿಸುವಂತಹದ್ದು. ಇದು ಖಂಡನೀಯ ಸಂಗತಿ.

ಬಾಲ್ಯವಿವಾಹದಂತಹ ಅಪರಾಧಗಳು, ರಾಜ್ಯದೆಲ್ಲೆಡೆ ಆಗಾಗ ನಡೆಯುತ್ತಲೇ ಇವೆ. ಕಣ್ಣೆದುರೇ ಹಲವಾರು ದುರಂತಗಳು ಇದ್ದರೂ ಅದರತ್ತ ಗಮನವಿಲ್ಲ. ಹೊಟ್ಟೆ ತುಂಬದ ಬಡತನ, ಅಜ್ಞಾನ, ಮೂಢನಂಬಿಕೆಗಳು, ದಾರಿದ್ರ್ಯತೆ ದಟ್ಟವಾಗಿರುವ ಪ್ರದೇಶಗಳಲ್ಲಿ ಇದು ತುಂಬಾ ಜೀವಂತವಾಗಿದೆ. ಅದರಲ್ಲೂ ಹೈದ್ರಾಬಾದ್ ಕರ್ನಾಟಕ, ಉತ್ತರ ಕರ್ನಾಟಕದಲ್ಲಿ ಇಂತಹವು ಹೆಚ್ಚು. ಈ ಸಾಮಾಜಿಕ ಪಿಡುಗಿನ ವಿರುದ್ಧ ಶತಮಾನದ ಹಿಂದಿನಿಂದಲೂ ಸಮರ ಸಾರಿದ್ದರೂ ಜೀವಂತವಾಗಿರುವುದು, ನಮ್ಮ ಸಮಾಜದ ಧಾರಣ ಸ್ಥಿತಿಯ ದ್ಯೋತಕ. ಇವುಗಳ ಬಗ್ಗೆ ಎಚ್ಚರಿಸುವ, ಪರಿಸ್ಥಿತಿ ಬದಲಾಯಿಸುವವರೇ ಪಿಡುಗಿನ ಉಲ್ಬಣಕ್ಕೆ ಮುಂದಾದರೆ ಹೇಗೆ?

ಈ ವಿವಾಹದಲ್ಲಿ ಸಚಿವ ರಾಜ ಅಮರೇಶ್ ನಾಯಕ, ಅಲ್ಲದೇ ಹಲವಾರು ಶಾಸಕರು, ಅಧಿಕಾರಿಗಳು ಇರುವುದು ವರದಿಯಾಗಿದೆ. ಆದ್ದರಿಂದ ಇಡೀ ಪ್ರಕರಣವನ್ನು ಕೂಲಂಕುಷ ತನಿಖೆಗೆ ತಕ್ಷಣ ಮುಖ್ಯಮಂತ್ರಿಗಳು ಒಪ್ಪಿಸಬೇಕು. ಸಚಿವರ ರಾಜೀನಾಮೆಯನ್ನು ಒಳಗೊಂಡಂತೆ ಉಗ್ರ ಕ್ರಮ ಕೈಗೊಳ್ಳಬೇಕು. ರಾಜ್ಯ ಮಹಿಳಾ ಆಯೋಗವು ಈ ದಿಶೆಯಲ್ಲಿ ಪೂರ್ಣ ಪ್ರಮಾಣದಲ್ಲಿ ತನಿಖೆಗೆ ಮುಂದಾಗಿ ಇಂತಹ ಅಪರಾಧಗಳನ್ನು ತಡೆಗಟ್ಟಲು ಆರೋಪಿಗಳಿಗೆ ಶಿಕ್ಷಿಸಲು ಮುಂದಾಗಬೇಕು. ಜನರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕು. ಈ ದಿಶೆಯಲ್ಲಿ ಪ್ರತಿಭಟನೆ, ಆಗ್ರಹ-ಆಂದೋಲನಗಳು ಅನಿವಾರ್ಯ,ಅಗತ್ಯ.


ಸಚಿವರ ಸಮ್ಮುಖದಲ್ಲೇ ನಡೆದ ಬಾಲ್ಯವಿವಾಹವನ್ನು ವಿರೋಧಿಸಿ ಫೆ. 22 ರಂದು ಜನವಾದಿ ಮಹಿಳಾ ಸಂಘಟನೆ ಮತ್ತು ಇತರೆ ಸಂಘಟನೆಗಳ ಕಾರ್ಯಕರ್ತರ ಪ್ರತಿಭಟನೆ

ಹೆಸ್ಕಾಂ ಮುತ್ತಿಗೆಗೆ ಬಿಜಾಪುರದ ದಂಡು

ವಿದ್ಯುತ್ ದರ ಏರಿಕೆ, ವಿದ್ಯುತ್ ಖಾಸಗೀಕರಣದ ನೀತಿಗಳನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಗುಲ್ಬರ್ಗಾ, ಹುಬ್ಬಳ್ಳಿ, ಮಂಗಳೂರು, ಬೆಂಗಳೂರುಗಳಲ್ಲಿನ 'ಎಸ್ಕಾಂ' ಕಛೇರಿಗಳ ಮುತ್ತಿಗೆಗೆ ವ್ಯಾಪಕ ಸಿದ್ಧತೆ ನಡೆದಿವೆ. ಆ ತಯಾರಿಯ ಕೆಲ ವರದಿಗಳು ಇಲ್ಲಿವೆ.

ರಾಜ್ಯದ ಅಭಿವೃದ್ಧಿಗೆ ಮಾರಕವಾಗಿರುವ ರಾಜ್ಯ ಸರ್ಕಾರದ 'ವಿಶ್ವಬ್ಯಾಂಕ್' ನಿರ್ದೇಶಿತ ವಿದ್ಯುತ್ ನೀತಿಯನ್ನು ವಿರೋಧಿಸಿ, ಹಿಮ್ಮೆಟ್ಟಿಸಲು ಬಿಜಾಪುರದ ಹಳ್ಳಿ ಹಳ್ಳಿಗಳಿಂದ ನೀರಾವರಿ ಪಂಪ್‌ಸೆಟ್ ರೈತರು, ಭಾಗ್ಯಜ್ಯೋತಿ, ಫಲಾನುಭವಿಗಳು ಹಾಗೂ ಇತರ ವಿದ್ಯುತ್ ಬಳಕೆದಾರರು ಹೆಸ್ಕಾಂ ಮುತ್ತಿಗೆ' ಯಶಸ್ವಿಗೊಳಿಸಲು ಫೆಬ್ರವರಿ 26 ರಂದು ಹುಬ್ಬಳ್ಳಿಗೆ ಧಾವಿಸಬೇಕು ಎಂದು ರೈತ ಮುಖಂಡ ಭೀಮಸಿ ಕಲಾದಗಿ ಅವರು ಕರೆ ನೀಡಿದಾಗ ಬಿಜಾಪುರ ಜಿಲ್ಲಾ ಸರ್ಕಾರಿ ನೌಕರ ಭವನದಲ್ಲಿ ಕಿಕ್ಕಿರಿದು ಸೇರಿದ್ದ ವಿದ್ಯುತ್ ಬಳಕೆದಾರರು ಚಪ್ಪಾಳೆ ತಟ್ಟಿ ತಮ್ಮ ಸಹಮತ ವ್ಯಕ್ತಪಡಿಸಿದರು. ವಿದ್ಯುತ್ ರಂಗದ ಖಾಸಗೀಕರಣ ಮತ್ತು ದರ ಏರಿಕೆ ವಿರೋಧಿಸಿ ಏರ್ಪಡಿಸಲಾಗಿದ್ದ ವಿದ್ಯುತ್ ಬಳಕೆದಾರರ ಸಮಾವೇಶದ ಅಧ್ಯಕ್ಷತೆ ವಹಿಸಿ ಭೀಮಸಿಯವರು ಮಾತನಾಡುತ್ತಿದ್ದರು.

ಲೂಟಿ ಮಾಡಲು ಬಿಡಬಾರದು

ಸಮಾವೇಶ ಉದ್ಘಾಟಿಸಿ ಮಾತನಾಡಿದ ಕೈಮಗ್ಗ ನೇಕಾರರ ಮುಖಂಡರೂ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರೂ ಆಗಿರುವ ನಿತ್ಯಾನಂದಸ್ವಾಮಿ 'ವಿದ್ಯುತ್ ರಂಗದ ಸುಧಾರಣೆಗಳ ಹೆಸರಿನಲ್ಲಿ, 50 ರ ದಶಕದಿಂದ ರಾಜ್ಯದ ಜನತೆಯ ದುಡ್ಡಿನಿಂದ ಕಟ್ಟಿ ಬೆಳೆಸಿದ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ವಿದ್ಯುತ್ ರಂಗದ ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡಲು ಬಿಡಬಾರದು' ಎಂದು ಹೇಳಿದರು. ವಿದ್ಯುತ್ ವಿತರಣಾ ಕಂಪನಿಗಳ ಖಾಸಗೀಕರಣ ತಡೆಯಲು ಇಂದು ಎಲ್ಲಾ ವರ್ಗದ ವಿದ್ಯುತ್ ಬಳಕೆದಾರರು ಮುಂದಾಗದಿದ್ದರೆ ಮುಂದೆ ಶಾಶ್ವತವಾಗಿ ದೌರ್ಜನ್ಯದ ದುಬಾರಿ ದರಗಳ ಹೇರಿಕೆಯನ್ನು ದೌರ್ಜನ್ಯದ ಬಿಲ್ ವಸೂಲಿಯನ್ನು ಅನುಭವಿಸಬೇಕಾದಿತು ಎಂದು ಎಚ್ಚರಿಸಿದ ಸ್ವಾಮಿಯವರು ಹೆಸ್ಕಾಂ ಕಂಪನಿಯ ಎದುರು ಫೆಬ್ರವರಿ 26 ರಂದು ನಡೆಯುವ ಬೃಹತ್ ಪ್ರತಿಭಟನೆಯಲ್ಲಿ ಬಿಜಾಪುರ ಜಿಲ್ಲೆಯಿಂದ ವಿದ್ಯುತ್ ಬಳಕೆದಾರರನ್ನು ದೊಡ್ಡ ಸಂಖ್ಯೆಯಲ್ಲಿ ಕರೆತರಬೇಕೆಂದು ಕೋರಿದರು. ಸಮಾವೇಶದಲ್ಲಿ ಮುಖ್ಯ ಅತಿಥಿಗಳಲ್ಲಿ ಒಬ್ಬರಾಗಿ ಭಾಗವಹಿಸಿ ಕೆ.ಇ.ಬಿ. ನಿವೃತ್ತ ಇಂಜನಿಯರ್ ಚಂದ್ರಶೇಖರ ಯರನಾಳ ಮಾತನಾಡಿ ವಿದ್ಯುತ್ ಬಳಕೆದಾರರ ಹೋರಾಟಕ್ಕೆ ತಮ್ಮ ಬೆಂಬಲವನ್ನು ಘೋಷಿಸಿದರು. ಭೀಮಾ ನದಿ ನೀರು ಸಂರಕ್ಷಣಾ ಹೋರಾಟ ಸಮಿತಿಯ ಅಧ್ಯಕ್ಷರಾದ ಪಂಚಪ್ಪ ಕಲ್ಬುರ್ಗಿ ಅವರು ಮಾತನಾಡುತ್ತಾ ಇಲ್ಲಿಯವರೆಗೆ ಕರ್ನಾಟಕವನ್ನು ಆಳಿದ ಸರ್ಕಾರಗಳು ರೈತರಿಗೆ ನೀರು ಮತ್ತು ವಿದ್ಯುತ್ತನ್ನು ಒದಗಿಸಲು ವಿಫಲವಾಗಿರುವುದರಿಂದ ರಾಜ್ಯದ ಜನತೆ ಮೇಲಿಂದ ಮೇಲೆ ಭೀಕರ ಬರಕ್ಕೆ ತುತ್ತಾಗಿ ನರಳುವಂತಾಗಿದೆ ಎಂದು ಹೇಳಿದರು. ಭಾಗ್ಯಜ್ಯೋತಿ ಸೌಲಭ್ಯದ ದುರುಪಯೋಗ ನಡೆದಿದೆ ಎಂದು ಹೇಳಿಕೊಂಡು ಅರ್ಹ ಫಲಾನುಭವಿಗಳಿಗೂ ಮೀಟರ್ ಅಳವಡಿಕೆ ಮತ್ತು ದರ ಏರಿಕೆಯ ಹೊರೆಯನ್ನು ಹೇರಲು ಸರ್ಕಾರ ಹೊರಟಿರುವುದರಿಂದ ಬಡ ಕೂಲಿಕಾರರು ಕುಟುಂಬಗಳನ್ನು ಬೆಳಕಿನಿಂದ ಕತ್ತಲಿಗೆ ತಳ್ಳಿದಂತಾಗಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಹೇಳಿದರು.

ಹೋರಾಡಲು ಪಣ

ಸಮಾವೇಶದಲ್ಲಿ ಕಾಂಗ್ರೆಸ್, ಜನತಾದಳ (ಎಸ್) ಸಿಪಿಐ ಮತ್ತು ಸಿಪಿಐ(ಎಂ) ಮುಖಂಡರಲ್ಲದೆ ರಾಜ್ಯ ರೈತ ಸಂಘ, ವರ್ತಕರ ಸಂಘ, ಮೊದಲಾದ ವಿವಿಧ ಸಂಘಸಂಸ್ಥೆಗಳ ಮುಖಂಡರು ಪಕ್ಷಾತೀತವಾಗಿ ಸಮಾವೇಶದಲ್ಲಿ ಪಾಲ್ಗೊಂಡು ರಾಜ್ಯ ಸರ್ಕಾರದ ಅಭಿವೃದ್ಧಿ ವಿರೋಧಿ ವಿದ್ಯುತ್ ನೀತಿಯ ವಿರುದ್ಧ ಕೊನೆಯವರೆಗೂ ಒಟ್ಟಾಗಿ ಹೋರಾಡಲು ಪಣತೊಟ್ಟರು.

ವ್ಯಾಪಕ ಸಿದ್ಧತೆ

ಸಮಾವೇಶದಲ್ಲಿ ಗ್ರಾಮೀಣ ಪ್ರದೇಶದಿಂದ ಬಂದ ರೈತರು, ಭಾಗ್ಯಜ್ಯೋತಿ ಫಲಾನುಭವಿಗಳು, ಕೈಮಗ್ಗದ ನೇಕಾರರು, ಕೊಳಚೆ ಪ್ರದೇಶದ ನಿವಾಸಿಗಳು, ಮಹಿಳೆಯರು, ಯುವಜನರು ಭಾಗವಹಿಸಿದ್ದರು. ಆರಂಭದಲ್ಲಿ ಎಲ್ಲರನ್ನು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಿಗೇರ ಅವರು ವಿದ್ಯುತ್ ಚಳುವಳಿಗಾಗಿ ಜಿಲ್ಲೆಯಲ್ಲಿ ನಡೆಸಲಾದ ಸಿದ್ಧತೆಗಳನ್ನು ವರದಿ ಮಾಡಿದರು. ಇಂಡಿ, ಸಿಂದಗಿ ಮತ್ತು ಬಸವನ ಬಾಗೇವಾಡಿ ತಾಲೂಕುಗಳಲ್ಲಿ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳನ್ನು ರಚಿಸಲಾಗಿದೆ. ಈ ತಾಲೂಕುಗಳಲ್ಲಿ ಅಲ್ಲದೆ ಬಿಜಾಪುರ ನಗರದಲ್ಲಿ ಈಗಾಗಲೇ ಕೆ.ಪಿ.ಟಿ.ಸಿ.ಎಲ್. ಕಛೇರಿಗಳ ಮುಂದೆ ರೈತರ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಗಿದೆ. ಫೆಬ್ರವರಿ 21 ಮತ್ತು 22 ರಂದು ಎರಡು ದಿನಗಳ ವಾಹನ ಜಾಥಾವನ್ನು ಕೈಕೊಂಡು ಫೆಬ್ರವರಿ 26 ರ ಹುಬ್ಬಳ್ಳಿ ಚಲೋ ಯಶಸ್ವಿಗೊಳಿಸುವ ಕುರಿತು ಪ್ರಚಾರ ನಡೆಸಲು ನಿರ್ಧರಿಸಲಾಗಿದೆ ಎಂದು ವರದಿ ಮಾಡಿದರು. ಬಾಗಲಕೋಟೆ ಜಿಲ್ಲೆಯ ಜಮಖಂಡಿ, ಮುಧೋಳ್, ಬದಾಮಿ, ಹುನಗುಂದ ಮೊದಲಾದ ತಾಲೂಕುಗಳಲ್ಲಿ ಅಧಿಕ ಸಂಖ್ಯೆಯಲ್ಲಿರುವ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರನ್ನು ದೊಡ್ಡ ಸಂಖ್ಯೆಯಲ್ಲಿ ಹುಬ್ಬಳ್ಳಿಗೆ ಹೊರಡಿಸಲು ನಿರ್ಧರಿಸಲಾಯಿತು.

'ಹುಬ್ಬಳ್ಳಿ ಚಲೋ' ಯಶಸ್ವಿಗೊಳಿಸಲು ಹಾವೇರಿ ಜಿಲ್ಲೆಯಲ್ಲಿ ಸಿದ್ಧತೆ

ಅಸಮರ್ಪಕ ವಿದ್ಯುತ್ ಪೂರೈಕೆ, ದರ ಏರಿಕೆ, ಮೀಟರೀಕರಣ, ಖಾಸಗೀಕರಣ ವಿರೋಧಿಸಿ ಹುಬ್ಬಳ್ಳಿ ವಿದ್ಯುತ್ ವಿತರಣಾ ಕಂಪನಿಯ ಎದುರು ಫೆಬ್ರವರಿ 26 ರಂದು ನಡೆಯುವ ಭಾರೀ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಹಾವೇರಿ ಜಿಲ್ಲೆಯ ರಾಣೆಬೆನ್ನೂರ್, ಹಾನಗಲ್ಲ, ಶಿಗ್ಗಾಂವ್, ಹಾವೇರಿ ತಾಲೂಕುಗಳ ವಿದ್ಯುತ್ ಬಳಕೆದಾರರು ಉತ್ಸುಕರಾಗಿದ್ದಾರೆ. ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ ಸಂಘಟನೆಗಳು ಜಂಟಿಯಾಗಿ ಫೆಬ್ರವರಿ 14 ರಂದು ಹಾನಗಲ್‌ನಲ್ಲಿ ಏರ್ಪಡಿಸಿದ್ದ ವಿದ್ಯುತ್ ಬಳಕೆದಾರರ ಸಮಾವೇಶದಲ್ಲಿ ತಾಲೂಕಿನ ರೈತರು, ಕೂಲಿಕಾರರು, ವಿದ್ಯಾರ್ಥಿ ಯುವಜನರು ಭಾಗವಹಿಸಿದ್ದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಹಕ್ಕಲಗೌಡ ಪಾಟೀಲ್, ಕರ್ನಾಟಕ ಪ್ರಾಂತ ರೈತ ಸಂಘದ ಸಿದ್ದಪ್ಪ ಬಡಿಗೇರ, ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ವಿಜಯ ಕುಮಾರ್ ದೊಡ್ಡಮನಿ ಮತ್ತು ಡಿ.ವೈ.ಎಫ್.ಐ ಹಿರೇಹುಲ್ಯಾಳ ಘಟಕದ ಕಾರ್ಯದರ್ಶಿ ಚಂದ್ರು ಅಕ್ಕಿವಳ್ಳಿ ಸಮಾವೇಶ ಉದ್ದೇಶಿಸಿ ಮಾತನಾಡಿದರು. ರೈತ ಕಾರ್ಮಿಕ ಮುಖಂಡರಾದ ನಿತ್ಯಾನಂದಸ್ವಾಮಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಹಾನಗಲ್ ತಾಲೂಕಿಗೆ ಸಮರ್ಪಕ ವಿದ್ಯುತ್ · ಪೂರೈಕೆ ಸಾಧ್ಯವಾಗಬೇಕಾದರೆ ಅಗತ್ಯವಿರುವ ಹಾನಗಲ್ಲ, ಬೆಳಗಾಲಪೇಟೆ, ಬೊಮ್ಮನಹಳ್ಳಿ, ಆಡೂರು, ಕಲ್ಕೇರಿ, ಬಾಳಂಬೀಡ್ ಮತ್ತು ಅಕ್ಕಿ ಆಲೂರು ಹೆಚ್ಚುವರಿ ಉಪವಿಭಾಗಗಳ ತುರ್ತು ಸ್ಥಾಪನೆಗಾಗಿ ಒತ್ತಾಯಿಸಲು ಹಾಗೂ ವಿದ್ಯುತ್ ರಂಗದ ಖಾಸಗೀಕರಣವನ್ನು ವಿರೋಧಿಸಿ ನಡೆಯುವ ಹೋರಾಟದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ಸಮಾವೇಶವು ಸರ್ವಾನುಮತ ನಿರ್ಣಯವನ್ನು ಅಂಗೀಕರಿಸಿತು.

ವಿದ್ಯುತ್ ದರ ಏರಿಕೆ ಮತ್ತು ಖಾಸಗೀಕರಣ ವಿರೋಧಿಸಿ ನಡೆಯುವ ಹೋರಾಟದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ಸಮಾವೇಶವು ಸರ್ವಾನುಮತದ ನಿರ್ಣಯ ಅಂಗೀಕರಿಸಿತು.

ನೇಕಾರರೂ ಚಳುವಳಿಗೆ

ವಿದ್ಯುತ್ ದರ ಏರಿಕೆ ಮತ್ತು ಖಾಸಗೀಕರಣ ವಿರೋಧಿಸಿ ನಡೆಯುವ 'ಹುಬ್ಬಳ್ಳಿ ಚಲೋ' ಕಾರ್ಯಕ್ರಮದಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯ ಕೈಮಗ್ಗ ನೇಕಾರ ಕಾರ್ಮಿಕರ ಸಮನ್ವಯ ಸಮಿತಿಯು ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಅದರ ಸಭೆಯಲ್ಲಿ ನಿರ್ಧರಿಸಿದೆ. ಈ ತೀರ್ಮಾನಕ್ಕೆ ಅನುಗುಣವಾಗಿ ರಾಣೆಬೆನ್ನೂರ್ ತಾಲೂಕಿನ ಕೈಮಗ್ಗದ ನೇಕಾರರು ಇತರ ವಿದ್ಯುತ್ ಬಳಕೆದಾರರನ್ನು ಕರೆದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ 'ಹೆಸ್ಕಾಂ ಮುತ್ತಿಗೆ' ಚಳುವಳಿಯಲ್ಲಿ ಭಾಗವಹಿಸಲು ನಿರ್ಧರಿಸಿದ್ದಾರೆ. ಕಾಮ್ರೆಡ್ ನಿತ್ಯಾನಂದ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ಸಭೆಯಲ್ಲಿ ರಾಣೆಬೆನ್ನೂರಿನ ಹನುಮಂತಪ್ಪ ಕದರಮಂಡಲಗಿ, ಪರಶುರಾಮ ಬಗಾದಿ ಮತ್ತು ಹನುಮಂತಪ್ಪ ಕೋಳೂರು ಭಾಗವಹಿಸಿದ್ದರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ಕಳೆದ ಕೆಲವು ತಿಂಗಳು ಗಳಿಂದ ಮಾಡಿದ ಕೆಲಸಕ್ಕೆ ಸರಿಯಾಗಿ ಮಜೂರಿ ಸಂದಾಯವಾಗದೆ ತೀವ್ರ ತೊಂದರೆ ಅನುಭವಿಸುತ್ತಿದ್ದರು, ಸರ್ಕಾರದ ಜನ ವಿರೋಧಿ ವಿದ್ಯುತ್ ನೀತಿಯ ವಿರುದ್ಧ ನಡೆಯುವ ಹೋರಾಟದಿಂದ ನಾವು ಹೊರಗುಳಿಯುವುದು ಸರಿಯಲ್ಲ ಎಂದು ನಿರ್ಧರಿಸಿ ರಾಣೆಬೆನ್ನೂರಿನ ಹಾಗೂ ರಾಜ್ಯದ ಇತರ ಕಡೆಗಳ ನೇಕಾರರೂ ಈ ಹೋರಾಟದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದ್ದಾರೆ.

ವಿದ್ಯುತ್ ಉತ್ಪಾದಿಸುವ ಜಿಲ್ಲೆಯಲ್ಲಿ ವಿದ್ಯುತ್‌ಗಾಗಿ ಹೋರಾಟ

ರಾಜ್ಯದ ವಿದ್ಯುತ್ ಉತ್ಪಾದನೆಯಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಪ್ರಮುಖ ಸ್ಥಾನ ಇದೆ. ಶರಾವತಿ ಟೆಲರೀಸ್, ಕದ್ರಾ, ಸುಪಾ, ಕೈಗಾಗಳಲ್ಲೂ ಉತ್ತರಕನ್ನಡ ಜಿಲ್ಲೆಯ ಅನೇಕ ಕುಟುಂಬಗಳು ತಮ್ಮ ಭೂಮಿ, ಮನೆ ಕಳೆದುಕೊಂಡಿವೆ. ಇನ್ನೂ ಪರಿಹಾರ ಸಿಕ್ಕಿಲ್ಲ. ಪರ್ಯಾಯ ಭೂಮಿ, ಮನೆ, ಉದ್ಯೋಗ ಸಿಗಲಿಲ್ಲ. ವಿದ್ಯುತ್ತಿಗಾಗಿ ತಮ್ಮ ನೆಲೆಯನ್ನೇ ಕಳೆದುಕೊಂಡವರು ವಿವಿಧ ಯೋಜನೆಗಾಗಿ ಭೂಮಿ ಕಳೆದುಕೊಂಡು ನಿರಾಶ್ರಿತರೇ ತುಂಬಿರುವ ಜಿಲ್ಲೆಯಲ್ಲಿ ವಿದ್ಯುತ್ ಕೊಡಿ' ಎಂದು ಹೋರಾಟ ಮಾಡಬೇಕಾದ ಸ್ಥಿತಿ ಬಂದಿದೆ. ಬಹುತೇಕ ಗುಡ್ಡಗಾಡುಗಳಿಂದ ತುಂಬಿರುವ ಜಿಲ್ಲೆಯಲ್ಲಿ ಯಾವುದೇ ಕಾಲುವೆಗಳಿಲ್ಲದೆ ತೆರೆದ ಬಾವಿಯಿಂದ ನೀರೆತ್ತಿ ಬಳಸುವ ಜಿಲ್ಲೆಯಲ್ಲಿ ರಾತ್ರಿ ವಿದ್ಯುತ್ ಕೊಟ್ಟು ಹಗಲಿಗೆ ವಿದ್ಯುತ್ ನಿಲ್ಲಿಸುವ ಕೊಡುಗೆ ಕೊಟ್ಟಿದೆ ಈ ಸರ್ಕಾರ.

ಅಡಿಕೆಯನ್ನು ಒಳಗೊಂಡಂತೆ ರೈತರು ಬೆಳೆದ ಬೆಳೆಗಳಿಗೆ ಬೆಲೆ ಇಲ್ಲ. ಕೇವಲ 4-5 ತಾಸು ವಿದ್ಯುತ್ ಪೂರೈಕೆ, ಅದರಲ್ಲೂ ಮಳೆಗಾಲದ 6 ತಿಂಗಳು ಪಂಪ್‌ಸೆಟ್ ಬಳಕೆ ಇಲ್ಲ. ಆದರೆ ವಿದ್ಯುತ್ ದರ ಏರಿಕೆ ಮಾತ್ರ ನಿರಂತರ. ಉತ್ತರಕನ್ನಡದಲ್ಲಿ ಇಲ್ಲದ ವಿದ್ಯುತ್‌ಗಾಗಿ, ಏರಿದ ದರದ ವಿರುದ್ಧ ಜಿಲ್ಲೆಯಾದ್ಯಂತ ಜನ ಬೀದಿಗಿಳಿದ್ದಾರೆ. ಈ ನೀತಿಯೇ ಮುಂದುವರಿದಲ್ಲಿ ಅನಾಹುತ ಎದುರಿಸಲು ಸಿದ್ಧರಾಗಿ ಎಂದು ಇಲಾಖೆಗೆ, ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ.

ಅಂಕೋಲಾದಲ್ಲಿ ವಿದ್ಯುತ್ ಕಛೇರಿ ಮುತ್ತಿಗೆ

ಇತ್ತೀಚೆಗೆ ಅಂಕೋಲಾದಲ್ಲಿ ಕರ್ನಾಟಕದ ಪ್ರಾಂತ ರೈತ ಸಂಘ (KPRS) ಮತ್ತು ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಯ ನೇತೃತ್ವದಲ್ಲಿ ಸುಮಾರು 3000 ಜನ ಇಲಾಖೆಗೆ ಮುತ್ತಿಗೆ ಹಾಕಿ ಖಾಸಗೀಕರಣ ಮತ್ತು ದರ ಏರಿಕೆಯ ವಿರುದ್ಧ ಎಚ್ಚರಿಕೆ ಕೊಟ್ಟರು.

ಉತ್ತರ ಕನ್ನಡ ಜಿಲ್ಲೆಗೆ ವಿದ್ಯುತ್ ಕಡಿತದಿಂದ ವಿನಾಯತಿ ಮಾಡಿ, ಅಲ್ಲಿಯವರಿಗೆ ರೈತರಿಗೆ 10 ತಾಸು 3 ಫೇಸ್ ವಿದ್ಯುತ್ ಕೊಡಿ, ವಿದ್ಯುತ್ ದರ ಏರಿಕೆಯ ಪ್ರಸ್ತಾಪ ಹಿಂತೆಗೆದುಕೊಳ್ಳಿ, ವಿದ್ಯುತ್ ಕ್ಷೇತ್ರದ ಖಾಸಗೀಕರಣ ನಿಲ್ಲಿಸಿ, ಅವೈಜ್ಞಾನಿಕ ಲೋಡ್ ಶೆಡ್ಡಿಂಗ್ ಹಿಂತೆಗೆದುಕೊಳ್ಳಿ,

ಪುಟ 10 ಕ್ಕೆ



ಉತ್ತರ ಕನ್ನಡದಲ್ಲಿ ಪ್ರತಿಭಟನೆ

ಭಾರತದ ರಾಷ್ಟ್ರಪತಿಗಳು ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ತಮ್ಮ ಚೊಚ್ಚಲ ಭಾಷಣ ಮಾಡಿದ್ದಾರೆ. ಸಾಂಪ್ರದಾಯಿಕವಾಗಿ ಆ ಭಾಷಣವು ಕೇಂದ್ರ ಸರ್ಕಾರ ಸಿದ್ಧಪಡಿಸಿದ ನೀತಿ ರೂಪಣೆಯಾಗಿದ್ದು, ರಾಷ್ಟ್ರಪತಿಗಳು, ಅದನ್ನು ಓದುತ್ತಾರಷ್ಟೆ. ಆದ್ದರಿಂದ ಅದೊಂದು ದೀರ್ಘ ಹಾಗೂ ಬೇಸರ ತರಿಸುವ ಇಲಾಖಾ ವರದಿಗಳ ಸಂಕಲನವೆನ್ನಬಹುದು. ಕೆಲವು ಅಲಂಕಾರಭರಿತ ವ್ಯಾಕರಣ ಸೇರಿಸುವುದರ ಮೂಲಕ ಆ ಹೇಳವ ರಾಗವನ್ನು ಬದಲಾಯಿಸಲು ರಾಷ್ಟ್ರಪತಿಗಳು ಏನಾದರೂ ಪ್ರಯತ್ನಪಟ್ಟಿದ್ದಾರೋ ಏನೂ ಗೊತ್ತಿಲ್ಲ. ಈಗಂತೂ, ಅವರು ಸರ್ಕಾರ ಸಿದ್ಧಪಡಿಸಿದ ಹೇಳಿಕೆಯನ್ನು ಯಥಾವತ್ ಓದುವುದರ ಮೂಲಕ ಸರಕಾರದ ಸಾಧನೆ ಮತ್ತು ನೀತಿಗಳನ್ನು ಸಮರ್ಥಿಸಿದ್ದಾರೆ ಮತ್ತು ಅನುಮೋದಿಸಿದ್ದಾರೆ.

ಸಂಘ ಪರಿವಾರದ ಪೈಶಾಚಿಕ ಕಾರ್ಯಸೂಚಿಗೆ ರಾಷ್ಟ್ರಪತಿಗಳ ಅನುಮೋದನೆ


ಇಂದಿನ ಸರ್ಕಾರದ ನೀತಿಗನುಸಾರವಾಗಿ ನೆನೆಗುದಿಯಲ್ಲಿರುವ ಅಯೋಧ್ಯಾ ವಿವಾದ ಕುರಿತು "ತನ್ನ ಕಾತುರವನ್ನು ತ್ವರಿತಗೊಳಿಸಿ ಬೇಗ ತೀರ್ಪು ನೀಡಬೇಕು ಎಂದು ಭಾಷಣದ ಮೂಲಕ ರಾಷ್ಟ್ರಪತಿಗಳು ನ್ಯಾಯಾಂಗಕ್ಕೆ ಕರೆ ನೀಡಿದ್ದಾರೆ. ಇದು ನಿಜಕ್ಕೂ ಆಘಾತಕರವಾದದ್ದು ನಮ್ಮ ಪ್ರಜಾಸತ್ತೆಯ ಒಂದು ಅಂಗವಾದ ಕಾರ್ಯಾಂಗವು ಮತ್ತೊಂದು ಅಂಗವಾದ ನ್ಯಾಯಾಂಗದ ಮೇಲೆ ಒತ್ತಡ ಹೇರಿದಂತಾಗಿದೆ. ಯಾವುದೇ ಸಂದರ್ಭದಲ್ಲೂ ಅಯೋಧ್ಯೆಯಲ್ಲಿನ ವಶಪಡಿಸಿಕೊಂಡ ಜಮೀನನ್ನು ಯಾರಿಗೂ ಹಸ್ತಾಂತರಿಸಬಾರದು ಅಥವಾ ಅಲ್ಲಿಗೆ ಯಾವುದೇ ಧಾರ್ಮಿಕ ಚಟುವಟಿಕೆಗಳನ್ನು ನಡೆಸಲು ಅನುಮತಿ ನೀಡಬಾರದು ಎಂದು ಸರ್ವೋಚ್ಚ ನ್ಯಾಯಾಲಯ ಮಾರ್ಚ್ 2002 ರಲ್ಲಿ ತನ್ನ ತೀರ್ಪಿತ್ತಿದೆ. ಅದರಲ್ಲಿ ಯಾವುದೇ ರೀತಿಯ ದ್ವಂದ್ವಾರ್ಥವಿಲ್ಲ. ಅಧಿಕಾರದಲ್ಲಿರುವ ಯಾವುದೇ ಸರ್ಕಾರ ಆ ನಾಡಿನ ಕಾನೂನನ್ನು ಜಾರಿಗೊಳಿಸುವ ಕರ್ತವ್ಯ ಬದ್ಧತೆಯನ್ನು ಹೊಂದಿರಬೇಕು. ಮತ್ತು ನ್ಯಾಯಾಂಗದ ತೀರ್ಪಿಗೆ ಬದ್ಧವಾಗಿರಬೇಕು. ಅದಕ್ಕೆ ಬದಲಾಗಿ ವಾಜಪೇಯಿ ಸರ್ಕಾರ, ಈ ಹಿಂದೆ ನೀಡಿರುವ ತೀರ್ಪನ್ನು ತೆರವುಗೊಳಿಸಬೇಕೆಂದು ಸರ್ವೋಚ್ಚ ನ್ಯಾಯಾಲಯವನ್ನು ಕೇಳಿಕೊಂಡಿದೆ. ಈ ಪ್ರಕಾರ ಕೇಂದ್ರ ಸರ್ಕಾರವು ವಿಶ್ವ ಹಿಂದು ಪರಿಷತ್ತಿನ ತಾಳಕ್ಕೆ ಕುಣಿಯಲು ಪ್ರಾರಂಭಿಸಿದೆ. ಸಂಘ ಪರಿವಾರದ ಬಯಕೆಯಂತೆ ಆ ವಶಪಡಿಸಿಕೊಂಡಿರುವ ಜಮೀನಿನಲ್ಲಿ ಅಯೋಧ್ಯಾ ವಿವಾದ ಕುರಿತು ನ್ಯಾಯಾಲಯದ ಅಂತಿಮ ತೀರ್ಪಿಗೆ ಕಾಯದೆ, ದೇವಸ್ಥಾನ ನಿರ್ಮಾಣದ ದಿಕ್ಕಿನಲ್ಲಿ ಎಲ್ಲ ರೀತಿಯ ಸಹಾಯ ಮಾಡಲು ಸರ್ಕಾರ ಮುಂದಾಗಿದೆ.

ನ್ಯಾಯಾಂಗದ ತೀರ್ಪನ್ನು ಪ್ರತಿಯೊಬ್ಬರೂ ಮನ್ನಿಸಲೇಬೇಕೆಂದು ರಾಷ್ಟ್ರಪತಿಗಳು ಆ ನಂತರ ಹೇಳಿದರಾದರೂ, 2002 ರ ಮಧ್ಯಂತರ ತೀರ್ಪನ್ನು ಪ್ರಶ್ನಿಸುವ ವಾಜಪೇಯಿ ಸರ್ಕಾರದ ಕ್ರಮವನ್ನು ಅವರು ಸಮರ್ಥಿಸಿದರು. ದೇಶದ ಒಟ್ಟಾರೆ ಹಿತಾಸಕ್ತಿಯ ದೃಷ್ಟಿಯಿಂದ, ಸರ್ಕಾರವು ನಾಡಿನ ಕಾನೂನಿನ ಹಾಗೂ ಸಂವಿಧಾನದ ಪಕ್ಷಪಾತಿಯಾಗಬೇಕೆ ವಿನಃ ಸಂವಿಧಾನವನ್ನು ಬಹಿರಂಗವಾಗಿ ಧಿಕ್ಕರಿಸುವ ವಿಶ್ವ ಹಿಂದು ಪರಿಷತ್ ಚಟುವಟಿಕೆಗಳನ್ನು ಬೆಂಬಲಿಸಬಾರದೆಂದು ರಾಷ್ಟ್ರಪತಿಗಳು ಸರ್ಕಾರಕ್ಕೆ ಎಚ್ಚರದ ಮಾತುಗಳನ್ನು ಹೇಳಿದ್ದರೆ ಒಳಿತಾಗುತ್ತಿತ್ತು.

ಅದೇ ರೀತಿಯಲ್ಲಿ ಗುಜರಾತ್ ವಿಧಾನಸಭಾ ಚುನಾವಣೆಗಳು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಿದೆ ಮತ್ತು ಆ ರಾಜ್ಯದ ಇತಿಹಾಸದ ದುರಂತ ಅಧ್ಯಾಯವನ್ನು ಕೊನೆಗೊಳಿಸಿದೆ ಎಂದು ಗುಜರಾತಿನ ಸರ್ಕಾರಿ ಪ್ರಾಯೋಜಿತ ನರಹತ್ಯೆಯನ್ನು ಅನುಮೋದಿಸುವ ವಾಜಪೇಯಿ ಸರ್ಕಾರದ ದನಿಯನ್ನೇ ರಾಷ್ಟ್ರಪತಿಗಳ ಭಾಷಣವು ಪುನರುಚ್ಚರಿಸಿದೆ. ಆ ನರಹತ್ಯೆಯ ಪಾತಕಿಗಳನ್ನು ಶಿಕ್ಷಿಸುವ ಒಂದೇ ಒಂದು ಶಬ್ದ ಆ ಭಾಷಣದಲ್ಲಿಲ್ಲ! ಒಂದು ಇಡೀ ಜನಾಂಗವನ್ನೇ ನಿರ್ನಾಮ ಮಾಡಲು ಹೊರಟ ನಂತರ ಪೈಶಾಚಿಕ ಕೃತ್ಯಗಳು ಮರುಕಳಿಸದಂತೆ ಕ್ರಮವಹಿಸುವ ಕುರಿತ ಒಂದು ಶಬ್ದ ಕೂಡ ಅದರಲ್ಲಿಲ್ಲ. ಆದ್ದರಿಂದ, ಸಹಜವಾಗಿಯೇ, ಆರ್‌ಎಸ್‌ಎಸ್ ಇತರೆ ವಿಷಜಂತುಗಳು ಅಸಂಖ್ಯಾತ ವಿಷಯಗಳ ಬಗ್ಗೆ ನಿರಂತರವಾಗಿ ಎಬ್ಬಿಸುತ್ತಿರುವ ಕೋಮು ಉನ್ಮಾದಗಳ ಬಗ್ಗೆ ಸಹ ಒಂದು ಚಕಾರವೂ ಆ ಭಾಷಣದಲ್ಲಿಲ್ಲ. ಇವುಗಳಲ್ಲಿ ದಾರ್ಮಿಕ ಮತಾಂತರ ಗೋಶಾಲೆಗಳಂತಹ ವಿಷಯಗಳೂ ಒಳಗೊಂಡಿವೆ.

ಆರ್ಥಿಕ ವಿಷಯಗಳ ಬಗ್ಗೆ ಹೇಳುವುದಾದರೆ, ವಾಸ್ತವ ಪರಿಸ್ಥಿತಿ ಮರೆಮಾಚಲು ಭಾಷಣ ತನ್ನೆಲ್ಲ ಪ್ರಯತ್ನಗಳನ್ನು ಮಾಡಿದೆ. ಕೇಂದ್ರೀಯ ಅಂಕಿಅಂಶಗಳ ಸಂಸ್ಥೆ (CSO) ಆರ್ಥಿಕ ಅಭಿವೃದ್ಧಿಯ ಕುರಿತು ಮಂಡಿಸಿರುವ ಪುನರ್ವಿಮರ್ಶಿತ ಅಂದಾಜನ್ನು ಸಂಪೂರ್ಣವಾಗಿ ಕಡೆಗಣಿಸಿ, ಆರ್ಥಿಕತೆಯು ಶೇಕಡಾ ಎಂಟರಷ್ಟು ಅಭಿವೃದ್ಧಿ ದರವನ್ನು ಸಾಧಿಸುತ್ತದೆ. ಎಂದು ಭ್ರಮೆ ಹುಟ್ಟಿಸುವ ಪ್ರಧಾನ ಮಂತ್ರಿಗಳ ಗಿಳಿಪಾಠವನ್ನೇ ಮತ್ತೆ ಆ ಭಾಷಣ ಉದ್ಗರಿಸಿದೆ. ಶೇಕಡಾ4.4ಕ್ಕಿಂತ ಹೆಚ್ಚಿನ ಆರ್ಥಿಕ ಬೆಳವಣಿಗೆಯ ದರವನ್ನು ನಮ್ಮ ಆರ್ಥಿಕತೆ ಹೊಂದಲು ಸಾಧ್ಯವಿಲ್ಲ ಎಂಬ ಅಂದಾಜನ್ನು CSO ಮಾಡಿದೆ.

ಆಡಳಿತದಲ್ಲಿರುವ ಮೈತ್ರಿಕೂಟದ ಅಂಗಪಕ್ಷಗಳೇ ಟೀಕೆ ಮಾಡಿದ ತೆರಿಗೆ ಸುಧಾರಣೆ ಕುರಿತ ಕೇಳ್ಕರ್ ವರದಿಯ ಪ್ರಸ್ತಾವಗಳನ್ನೇ ಭಾಷಣವು ಅನುಮೋದಿಸಿದೆ. ಆರ್ಥಿಕ ನೀತಿಗಳ ಕುರಿತ ಅವರ ಉಪದೇಶ ಜನಕಲ್ಯಾಣಕ್ಕೇ ಮೀಸಲಾದ ವೆಚ್ಚಗಳನ್ನು ಕಡಿತಗೊಳಿಸುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರವೃತ್ತಿಗೆ ಕುಮ್ಮಕ್ಕು ನೀಡುವ ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರು ಲೂಟಿ ಮಾಡಲು ಅನುವು ಮಾಡಿಕೊಡುವ ಖಾಸಗೀಕರಣ ಪ್ರಕ್ರಿಯೆಗಳಿಗೆ ಉತ್ಸಾಹದ ಬೆಂಬಲ ನೀಡುವುದಲ್ಲದೆ ಅದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದಿದ್ದಾರೆ ನಮ್ಮ ರಾಷ್ಟ್ರಪತಿಗಳು. ಈ ಎಲ್ಲಾ ಖಾಸಗೀಕರಣ ವ್ಯವಹಾರಗಳ ಜತೆಯೇ ನಡೆಯುತ್ತಿರುವ ಅಗಾಧ ಅವ್ಯವಹಾರಗಳಿಗೂ ರಾಷ್ಟ್ರಪತಿಗಳು ತಮ್ಮ ಸಮ್ಮತಿ ವ್ಯಕ್ತಪಡಿಸಿದ್ದಾರೆ. ಆಶ್ಚರ್ಯವೆಂದರೆ, ಈ ಸಂದರ್ಭದಲ್ಲಿ ಅವರು ಅತ್ಯಂತ ಅಭಿಮಾನದಿಂದ ಪ್ರತಿಪಾದಿಸಿದ ಸ್ವಾವಲಂಬೀ ಆಧುನಿಕ ಭಾರತದ ಕಲ್ಪನೆಗೂ



ಮತ್ತು ವಾಸ್ತವವಾಗಿ ನಡೆಯುತ್ತಿರುವ ವಿದ್ಯಮಾನಗಳಿಗೂ ಮಧ್ಯೆ ಇರುವ ವೈರುಧ್ಯವನ್ನು ರಾಷ್ಟ್ರಪತಿಗಳು ಕಾಣುತ್ತಿಲ್ಲ. ಪ್ರಸ್ತುತ ಆರ್ಥಿಕತೆಯ ಕಟುವಾಸ್ತವಗಳನ್ನು ಅರಿಯಲು ಅಥವಾ ಗ್ರಹಿಸಲು ಈ ಸರ್ಕಾರ ಗಂಭೀರ ಪ್ರಯತ್ನವನ್ನೇನಾದರೂ ಮಾಡಿದೆ ಎನ್ನುವ ಬಗ್ಗೆ ಯಾವುದೇ ಸೂಚನೆಗಳೇ ಭಾಷಣದಲ್ಲಿ ಇಲ್ಲವೆಂದ ಮೇಲೆ ಅದನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಮಾತನಾಡುವುದು ದೂರದ ಕನಸೇ ಸರಿ. ಜನರ ಕಷ್ಟ ಕಾರ್ಪಣ್ಯಗಳು ಮತ್ತು ದೇಶದ ಸಾಲದ ಹೊರೆ ಇನ್ನೂ ಹೆಚ್ಚಾಗುವುದಂತೂ ಖಂಡಿತಾ.

ನಿರೀಕ್ಷೆ ಮಾಡಿದಂತೆಯೇ ಅವರ ಭಾಷಣ ಪಾಕಿಸ್ತಾನದ ಮೇಲೆ ಮತ್ತು ಅದು ಗಡಿಯಾಚೆಯಿಂದ ಭಯೋತ್ಪಾದಕರಿಗೆ ನೀಡುತ್ತಿರುವ ಕುಮ್ಮಕ್ಕಿನ ಕುರಿತು ಕಿಡಿ ಕಾರಿದೆ. ಬಾಹ್ಯ ಶಕ್ತಿಗಳಿಂದ ದೇಶದ ಆಂತರಿಕ ಭದ್ರತೆಗೆ ಅತ್ಯಂತ ದೊಡ್ಡ ಅಪಾಯವಿದೆ ಎಂಬ ಮಾತನ್ನು ಪುನರುಚ್ಚರಿಸಲಾಗಿದೆ. ಹೀಗಿದ್ದರೂ ಇಂತಹ ಹಾವಳಿಯನ್ನು ಹೇಗೆ ನಿಭಾಯಿಸುತ್ತೇವೆ ಎಂಬುದುರ ಬಗ್ಗೆ ಚಕಾರ ಆ ಭಾಷಣದಲ್ಲಿಲ್ಲ. ಆದ್ದರಿಂದ ಸಹಜವಾಗಿಯೇ ಆಂತರಿಕವಾಗಿ ಭಯೋತ್ಪಾದನೆಯ ಹಾವಳಿಯನ್ನು ಎದುರಿಸಲು ಬೇಕಾದ ರಾಜಕೀಯ ಇಚ್ಛಾಶಕ್ತಿ ಬಗ್ಗೆ ಕೂಡ ಒಂದು ಮಾತೂ ಅದರಲ್ಲಿ ಇಲ್ಲ.

ಪಾಕಿಸ್ತಾನ ಕೇಂದ್ರಿತವಾದ ಇಂತಹ ಒಂದು ವಿದೇಶಾಂಗ ನೀತಿಯಲ್ಲಿ ಮುಳುಗಿರುತ್ತಾರೆಂಬುದು ನಿರೀಕ್ಷಿತವೇ ಆಗಿದ್ದಾಗಲೇ ಭಾಷಣವು ಬಾಂಗ್ಲಾದೇಶದ ವಿರುದ್ಧ ಕೂಡ ತೀವ್ರ ಟೀಕೆ ಮಾಡಿದೆ. ಕಾನೂನು ಬಾಹಿರ ನುಸುಳುವಿಕೆ ಗಂಭೀರ ಪ್ರಮಾಣದ್ದಾಗಿದ್ದು ಹಲವು ರಾಜ್ಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿರುವುದರಿಂದ ಅದನ್ನು ತಡೆಯಲು ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳುತ್ತಿದೆ ಎಂಬ ಭರವಸೆಯನ್ನು ಭಾಷಣ ನೀಡಿದೆ. ಆದರೆ ಎಂತಹ ಕ್ರಮ ಎಂಬುದರ ಬಗ್ಗೆ ದೇಶವನ್ನು ಕತ್ತಲಲ್ಲೇ ಇಟ್ಟಿದೆ.

ಕಾನೂನು ಬಾಹಿರ ನುಸುಳುವಿಕೆಯ ಸಮಸ್ಯೆ ಪರಿಹಾರಕ್ಕೆ ತೆಗೆದುಕೊಳ್ಳುವ ಕ್ರಮಗಳ ಕುರಿತು ಯಾವುದೇ ಭಿನ್ನಾಭಿಪ್ರಾಯ ಇರಲು ಸಾಧ್ಯವಿಲ್ಲ. ಆದರೆ ಸರ್ಕಾರ ಈ ಸಮಸ್ಯೆಯಿಂದ ಕ್ಷುಲ್ಲಕ ರಾಜಕೀಯ ಲಾಭ ಪಡೆದುಕೊಳ್ಳಲು ಪ್ರಯತ್ನಿಸುತ್ತಿರುವುದು ಖಂಡನೀಯ. ವಿಪರ್ಯಾಸದ ಸಂಗತಿಯೆಂದರೆ ಭಯೋತ್ಪಾದನೆಯ ವಿರುದ್ಧದ ಕಾಳಜಿ ವ್ಯಕ್ತಪಡಿಸಿದ ಈ ಸರ್ಕಾರದ ತಂತ್ರವನ್ನು ಈ ಭಾಷಣ ಅನುಮೋದಿಸುವಾಗಲೇ ಭಯೋತ್ಪಾದನೆಯನ್ನು ನಿಗ್ರಹಿಸುವ ಬಗ್ಗೆ ಏನೂ ಹೇಳದೆ, ರಾಜಕೀಯ ದುರ್ಲಾಭ ಪಡೆಯಲು ಮಾತ್ರ ಪ್ರಯತ್ನಿಸುತ್ತಿದೆ.

ಅಂತಿಮವಾಗಿ, ಇರಾಕಿನ ಮೇಲೆ ಏಕಪಕ್ಷೀಯವಾಗಿ ಯುದ್ಧ ಸಾರಿರುವ ಅಮೆರಿಕದ ಬೆದರಿಕೆಯ ಬಗ್ಗೆ ದೃಢ ವಿರೋಧ ವ್ಯಕ್ತಪಡಿಸುವಲ್ಲಿ ಅವರ ಭಾಷಣ ಕೂಡಿರುವುದು ಎದ್ದು ಕಾಣುತ್ತಿದೆ. ಅಮೆರಿಕದ ಆಕ್ರಮಣಕಾರೀ ನಿಲುವುಗಳ ವಿರುದ್ಧ ವಿಶ್ವಾದ್ಯಂತ ಹೊರಹೊಮ್ಮುತ್ತಿರುವ ಪ್ರತಿಭಟನೆಯ ಬಗ್ಗೆ ಏನೂ ಮಾತನಾಡದೇ ಶಾಂತಿ, ಸಮಗ್ರತೆ ಮತ್ತು ಭದ್ರತೆಯಲ್ಲಿ ಭಾರತದ ಹಿತಾಸಕ್ತಿ ಇದೆ ಎಂಬ ಕೇವಲ ಒಣ ಶಬ್ದಗಳು ಮಾತ್ರ ಆ ಭಾಷಣದಲ್ಲಿ ಕಂಡವು. ಅಮೆರಿಕದ ತಂತ್ರಗಳ ವಿರುದ್ಧ ವಿಶ್ವದ 600 ನಗರಗಳಲ್ಲಿ ಮಿಲಿಯಾಂತರ ಜನರು ಪ್ರತಿಭಟನಾ ಮೆರವಣಿಗೆ ನಡೆಸಿದರು ಎಂಬ ಸುದ್ದಿ ಪ್ರಕಟವಾದ ಮರುದಿನವೇ ರಾಷ್ಟ್ರಪತಿಗಳು ಈ ಭಾಷಣ ಮಾಡಿದ್ದಾರೆ.

ಒಟ್ಟಿನಲ್ಲಿ, ವಾಜಪೇಯಿ ಸರ್ಕಾರ ಎಲ್ಲಾ ರಂಗಗಳಲ್ಲೂ ಅನುಸರಿಸಿದ ನೀತಿಗಳನ್ನಷ್ಟೇ ಈ ಭಾಷಣ ಪ್ರತಿಬಿಂಬಿಸಿತ್ತು. ಸರ್ಕಾರದ ಈ ನೀತಿಗಳು ಜನರ ಸಂಕಷ್ಟಗಳನ್ನು ಇನ್ನೂ ಹೆಚ್ಚಿಸುತ್ತದೆ ಮತ್ತು ನಮ್ಮ ದೇಶದ ಜಾತ್ಯಾತೀತ ಸಮಾಜಕ್ಕೆ ಅಪಾಯವನ್ನು ತಂದೊಡ್ಡಲಿದೆ.

ಶಿಕ್ಷಣದ ಕೋಮುವಾದೀಕರಣದ ವಿರುದ್ಧ ದೃಢ ಸವಾ

SFI 11ನೇ ಅಖಿಲ ಭಾರತ ಯಶಸ್ವಿ

ಇಡೀ ಶಿಕ್ಷಣ ಕ್ಷೇತ್ರವೇ ಇಂದು ತೀವ್ರತರನಾದ ಧಾಳಿಗೆ ಒಳಗಾಗಿದೆ. ಕೇಂದ್ರದಲ್ಲಿ ಅಧಿಕಾರ ಹಿಡಿದಿರುವ ಬಿಜೆಪಿ, ಸಂಘ ಪರಿವಾರಗಳು ಶಿಕ್ಷಣವನ್ನು ಕೋಮುಗ್ರಸ್ತಗೊಳಿಸುತ್ತಿದೆ. ವ್ಯಾಪಾರೀಕರಣದ ಮೂಲಕ ಶಿಕ್ಷಣದ ಪ್ರಜಾಸತ್ತಾತ್ಮಕ ಹಕ್ಕನ್ನೇ ಕಸಿಯುತ್ತಿದೆ. ಉದಾರೀಕರಣ, ಜಾಗತೀಕರಣ, ಕೋಮುವಾದದ ಆಕ್ರಮಣಗಳು ಅದರ ಒಟ್ಟು ಸಾಂಸ್ಕೃತಿಕ ಧಾಳಿ, ವಿದ್ಯಾರ್ಥಿಗಳನ್ನು ರಾಜಕೀಯ ಚಿಂತನೆಗಳಿಂದ ವಿಮುಖಗೊಳಿಸಲು ಸ್ಥಾಪಿತ ಹಿತಾಸಕ್ತಿಗಳ ಹುನ್ನಾರಗಳು ನಡೆದಿವೆ. ಇಂತಹ ಗಂಭೀರ ಸನ್ನಿವೇಶದಲ್ಲಿ ಈ ಎಲ್ಲಾ ಬಹುಮುಖಿದ ಧಾಳಿಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಇಡೀ ದೇಶದ ವಿದ್ಯಾರ್ಥಿ-ಶೈಕ್ಷಣಿಕ ಸಮುದಾಯವನ್ನು ಜಾಗೃತಗೊಳಿಸಿ ಪ್ರಬಲ ಆಂದೋಲನ ರೂಪಿಸಲು ನಿರ್ಧರಿಸಿದ ಮಹತ್ವದ ಸಮ್ಮೇಳನದ ವರದಿ ಇಲ್ಲಿದೆ.

ಭಾರತದ ವಿದ್ಯಾರ್ಥಿ ಚಳುವಳಿಯ ಒಂದು ಪ್ರಮುಖ ಹೆಗ್ಗುರುತು ಭಾರತ ವಿದ್ಯಾರ್ಥಿ ಫೆಡರೇಷನ್ (SFI) ನ 11ನೇ ಅಖಿಲ ಭಾರತ ಸಮ್ಮೇಳನ ಕೇರಳ ರಾಜ್ಯದ ಶಹೀದ್ ಭಗತ್ ಸಿಂಗ್ ನಗರದಲ್ಲಿ (ಕ್ಯಾಲಿಕಟ್ ನಗರ ಫೆಬ್ರವರಿ 14 ರಿಂದ 18ರವರೆಗೆ ಕಾಂ.ಅವಿನಾಶ್ ಹಾಗೂ ರಾಜೇಶ್ ವೇದಿಕೆಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು.

ರಾಷ್ಟ್ರದ 28,69,918 ಸದಸ್ಯತ್ವವನ್ನು ಪ್ರತಿನಿಧಿಸಿ ತಲಾ 6 ಸಾವಿರ ಸದಸ್ಯತ್ವಕ್ಕೆ ಒಬ್ಬರಂತೆ 666 ಚುನಾಯಿತ ಪ್ರತಿನಿಧಿ- ವೀಕ್ಷಕರು ಈ ಐದು ದಿನಗಳ ಸಮ್ಮೇಳನದಲ್ಲಿ ಪಾಲ್ಗೊಂಡು ರಾಷ್ಟ್ರೀಯ ಅಂತರಾಷ್ಟ್ರೀಯ ರಾಜಕೀಯ- ಶೈಕ್ಷಣಿಕ ಸಾಮಾಜಿಕ ಬೆಳವಣಿಗೆಗಳು ವಿದ್ಯಾರ್ಥಿ ಚಳುವಳಿಯ ಮುಂದಿನ ಸವಾಲುಗಳ ಹೋರಾಟ ದಾರಿ, ದಿಕ್ಕು ದೆಶಗಳ ಕುರಿತು ಆಳವಾದ ಚರ್ಚೆ ನಡೆಸಿದರು.

2000 ದಲ್ಲಿ ತಮಿಳುನಾಡಿನ ರಾಜದಾನಿ ಚೆನ್ನೈನಲ್ಲಿ ನಡೆದ 10ನೇ ಅಖಿಲ ಭಾರತ ಸಮ್ಮೇಳನ- ಶೈಕ್ಷಣಿಕ- ಸಾಮಾಜಿಕ ರಾಜಕೀಯ ವಿಷಯದಲ್ಲಿ ನಡೆಸಿದ ವಿಮರ್ಶೆ ಅತ್ಯಂತ ವೈಜ್ಞಾನಿಕ ಎಂಬುದನ್ನು ಕಳೆದ 3 ವರ್ಷಗಳ ಬೆಳವಣಿಗೆಗಳು ಸಾಬೀತುಪಡಿಸಿದೆ ಎಂಬುದನ್ನು ಗುರುತಿಸಿದ್ದು ಮಾತ್ರವಲ್ಲ. ಎದುರಾಗುತ್ತಿರುವ ಗಂಭೀರ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಸಮ್ಮೇಳನ ಸಂಘಟನಾತ್ಮಕ ವಿಷಯದಲ್ಲಿ ಕೈಗೊಂಡ ತೀರ್ಮಾನಗಳ ಜಾರಿಯಲ್ಲಿ ಅತ್ಯಂತ ಸಕಾರಾತ್ಮಕ ಬೆಳವಣಿಗೆಯನ್ನು ಸಾಧನೆಯನ್ನು ಈ 11ನೇ ಕ್ಯಾಲಿಕಟ್ ಸಮ್ಮೇಳನ ದಾಖಲಿಸಿತು. ಈ ದೃಷ್ಟಿಯಿಂದ SFI ನ ಈ 11ನೇ ಅಖಿಲ ಭಾರತ ಸಮ್ಮೇಳನ ಒಂದು ಚಾರಿತ್ರಿಕ ಸಮ್ಮೇಳನ ಎಂದರೇ ಅದು ಅತಿಶಯೋಕ್ತಿಯೇನಲ್ಲ.

ಚೆನ್ನೈ ಸಮ್ಮೇಳನವು ಜಗತ್ತಿನ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಮೇಲೆ ತನ್ನ ಸಾಮ್ರಾಜ್ಯಶಾಹಿ ಆಕ್ರಮಣಕಾರಿ ಏಕಸ್ವಾಮ್ಯವನ್ನು ಸ್ಥಾಪಿಸುವ ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ಶಕ್ತಿಗಳ ತೀವ್ರ ಯತ್ನಗಳನ್ನು ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಜಾಗತೀಕರಣಗೊಳ್ಳುತ್ತಿರುವ ಹೋರಾಟದ ಅಲೆಗಳ ಎಳೆಯನ್ನು ಗುರುತಿಸಿತ್ತು.

ಇಂದು ತನ್ನ ಸುಲಿಗೆಕೋರ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳ ರಕ್ಷಣೆಗಾಗಿ, ತನ್ನ ಜಾಗತೀಕ ಲಧಿಪತ್ಯ ಸ್ಥಾಪನೆಯ ಗುರಿಯೊಂದಿಗೆ ಇರಾಕ್‌ನ ಮೇಲೆ ಆಕ್ರಮಣಕ್ಕೆ ಸಜ್ಜಾಗಿ ನಿಂತ ಅಮೇರಿಕಾ - ಇಂಗ್ಲೆಂಡ್, ಯುದ್ಧ ವಿರೋಧಿ- ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಇತಿಹಾಸದಲ್ಲಿ ಇತ್ತೀಚಿನ ದಶಕಗಳಲ್ಲೇ . ಅಭೂತಪೂರ್ವ ಎಂಬುದೆನ್ನುವಂತಹ ಪ್ರತಿಭಟನೆಗಳ ಜಾಗತೀಕ ಅಲೆಯನ್ನು ನಾವು ನೊಡುತ್ತಿದ್ದೇವೆ. ಕೋಟಿ ಕೋಟಿ ಕಾರ್ಮಿಕರ ರೈತರ- ಜನ ಸಾಮಾನ್ಯರ ತುತ್ತು ಕಸಿಯುವ ಜಾಗತೀಕರಣ ಅಬ್ಬರಕ್ಕೆ ಇದೋ ಇಲ್ಲದೇ ಪರ್ಯಾಯ ಇನ್ನೊಂದು ಹೊಸ ಜಗತ್ತು ಸಾಧ್ಯ' ಎನ್ನುವ ಜನ ಚಳುವಳಿಗಳ ಪರ್ಯಾಯ ಪ್ರತಿಭಟನೆ. ಇಂತಹ ಪ್ರತಿಭಟನೆಗಳ ಕ್ರೋಢೀಕರಣವಾಗಿ ಬ್ರೆಜಿಲ್‌ನಂತಹ ದೇಶಕ್ಕೆ ಅಧ್ಯಕ್ಷರಾಗಿ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷದ ಅಭ್ಯರ್ಥಿ ಲೂಲಾ ಪ್ರಚಂಡ ದಿಗ್ವಿಜಯ ಇದೀಗ ದಾಖಲಾಗಿದೆ.

ಎಸ್‌ಎಫ್‌ಐ ಇತಿಹಾಸದಲ್ಲಿ ಮಾತ್ರವಲ್ಲ ದೇಶದ ವಿದ್ಯಾರ್ಥಿ ಚಳುವಳಿ ಇತಿಹಾಸದಲ್ಲೇ ಒಂದು ದಾಖಲಾರ್ಹವಾದ, 28,69,918 ಸದಸ್ಯತ್ವವನ್ನು ನೋಂದಾಯಿತುವ ದಾಖಲೆಯ ಮೂಲಕ ಕಳೆದ ಸದಸ್ಯತ್ವ ಸಮ್ಮೇಳನದಿಂದೀಚೆಗೆ ಶೇ 17 ರಷ್ಟು ಪ್ರಗತಿಯನ್ನು ಸಾಧಿಸುವುದು ಸಾಧ್ಯವಾಗಿದೆ. ಎಸ್.ಎಫ್.ಐ ನೇತೃತ್ವದ ಚಳುವಳಿ ಅತ್ಯಂತ ಪ್ರಬಲವಾಗಿ ಬೇರು ಬಿಟ್ಟಿರುವ ಪಶ್ಚಿಮ ಬಂಗಾಳ, ಕೇರಳ, ತ್ರಿಪುರ, ಆಂಧ್ರ ಮುಂತಾದ ರಾಜ್ಯಗಳಲ್ಲದೆ ಹಿಂದಿ ರಾಜ್ಯಗಳಲ್ಲಿ ವಿದ್ಯಾರ್ಥಿ ಚಳುವಳಿಯನ್ನು ಬಲಿಷ್ಠಗೊಳಿಸಬೇಕೆಂಬ ಕಳೆದ ಸಮ್ಮೇಳನದ ತೀರ್ಮಾನದಲ್ಲಿ ಸದಸ್ಯತ್ವ ಮಾತ್ರವಲ್ಲ ಸದಸ್ಯತ್ವ - ಚಳುವಳಿ ಚುನಾವಣಾ ಸಾಧನೆಗಳಲ್ಲೂ ಗಮನಾರ್ಹವಾದ ಪ್ರಗತಿ ದಾಖಲಿಸುವುದು ಸಾಧ್ಯವಾಗಿದೆ.

ಜಾಗತೀಕರಣ - ಕೋಮುವಾದಗಳು ಶಿಕ್ಷಣ ಹಾಗೂ ಸಮಾಜದ ಮೇಲೆ ತೀವ್ರ ಧಾಳಿ ನಡೆಸುತ್ತಿರುವ ಈ ಸಂದರ್ಭದಲ್ಲಿ ಸಂಘಟನೆಯ ಕಾರ್ಯಕರ್ತರನ್ನು ಸೈದ್ಧಾಂತಿಕ ಸಜ್ಜುಗೊಳಿಸುವ ಆಯುಧ STUDENT STRUGGLE ಪತ್ರಿಕೆಯ ಗುಣಮಟ್ಟವನ್ನು ಮತ್ತಷ್ಟು ಉತ್ತಮಪಡಿಸಬೇಕು. ಮತ್ತು ಪ್ರಕಟಣೆಯನ್ನು ನಿರಂತರಗೊಳಿಸಬೇಕೆಂಬ ಶ್ಲಾಘನೀಯ ಸಾಧನೆ ಸಾಧ್ಯವಾಗಿದೆ.

ಕೇರಳದಲ್ಲಿ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಕಾಂಗ್ರೆಸ್ ನೇತೃತ್ವದ UDF ಸರಕಾರದ ವಿರುದ್ಧ ವಿದ್ಯಾರ್ಥಿ ಸಮುದಾಯದ ಸಂಘರ್ಷಾತ್ಮಕ ಹೋರಾಟ, ಆಂದ್ರ ಪ್ರದೇಶದಲ್ಲಿ ಜಾಗತೀಕರಣ ಮತ್ತು ಜಾಗತೀಕರಣದ ಭಾಗವಾಗಿ ಬರುತ್ತಿರುವ ಶಿಕ್ಷಣ ವ್ಯಾಪಾರೀಕರಣದ ವಿರುದ್ಧದ ಹೋರಾಟ, ತಮಿಳುನಾಡಿನ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳ ಸುದೀರ್ಘ ಹೋರಾಟ- ಮಹಾರಾಷ್ಟ್ರದ ಆಯುರ್ವೇದ ಮತ್ತು BEd ಕಾಲೇಜು ವಿದ್ಯಾರ್ಥಿಗಳ ಹೋರಾಟ ಕರ್ನಾಟಕ ರಾಜ್ಯದ ಸಂಜೆ ಕಾಲೇಜು ಸೇರಿದಂತೆ ಕಾಲೇಜು ಮುಚ್ಚುವ ಸರಕಾರದ ನೀತಿ ಹಾಗೂ ಶುಲ್ಕ ಏರಿಕೆ ವಿರುದ್ಧದ ಚಳುವಳಿ, ಕೋಲಾರ ಜಿಲ್ಲೆಯಲ್ಲಿ ಬಿಸಿ ಊಟದ ಯೋಜನೆಯ ಜಾರಿ ಮತ್ತಿತರ ಬೇಡಿಕೆಗಳಿಗಾಗಿ ಹಾಗೂ ಜಾರಿಯಾದ ಜಿಲ್ಲೆಗಳ ಅವ್ಯವಸ್ಥೆ ವಿರುದ್ಧ ಹಲವು ಜಿಲ್ಲೆಗಳ ಹೋರಾಟಗಳು.

ಶಾಲಾ ಶುಲ್ಕ ಏರಿಕೆ ವಿರುದ್ಧ ಮಣಿಪುರದಲ್ಲಿ, ಶಿಕ್ಷಣ ವ್ಯಾಪಾರೀಕರಣದ ವಿರುದ್ಧ ಆಸ್ಸಾಂನಲ್ಲಿ, ಅವೈಜ್ಞಾನಿಕ -ಮೂಢ ನಂಬಿಕೆಯನ್ನು ಸಾರುವ ಕೋರ್ಸುಗಳ ವಿರುದ್ಧ ಜವಹರಲಾಲ್ ನೆಹರೂ ವಿಶ್ವ ವಿದ್ಯಾಲಯದಲ್ಲಿ ಉನ್ನತ ಶಿಕ್ಷಣವನ್ನು ಕಳಚಿ ಹಾಕುವ ನೀತಿಗಳ ವಿರುದ್ಧ ಉತ್ತರ ಪ್ರದೇಶದ ಲಕ್ನೊ- ಸಲಹಾಬಾದ್ ವಿಶ್ವವಿದ್ಯಾಲಯ ಕೇಂದ್ರಗಳಲ್ಲಿ ಹರ್ಯಾಣದ ಕುರುಕ್ಷೇತ್ರದ- ಹಿಸ್ಸಾರ್‌ಗಳಲ್ಲಿ ಹೋರಾಟ ಶ್ವೇತ ಪತಾಕೆಗೆ ಸಾಕ್ಷಿಯಾದ ಹೋರಾಟಗಳು ಹಲವು. ತಮಿಳುನಾಡಿನಲ್ಲಿ ಲಾಠಿ ಪ್ರಹಾರ ನಡೆಸಲಾಯಿತು. ಕೇರಳದಲ್ಲಿ ನಮ್ಮ ಮುಖಂಡರು ಸಂಗಾತಿಗಳ ಕೈಕಾಲು ಮುರಿಯಲಾಯಿತು. ಹಿಮಾಚಲ ಪ್ರದೇಶದಲ್ಲಿ ಮುಖಂಡರು ಜೈಲಿಗೆ ಅಟ್ಟಲಾಯಿತು. ಹೋರಾಟದ ಬಾವುಟ ಕೆಳಕ್ಕೆ ಉಳಿದಿಲ್ಲ. ಚಳುವಳಿ ದಿಟ್ಟವಾಗಿ ಹೆಜ್ಜೆಯನ್ನು ಮುಂದೆ ಇಟ್ಟಿದೆ.

ಶಿಕ್ಷಣವನ್ನು ಕೋಮುವಾದಿ ವಿಷದಿಂದ ಕೇಸರೀಕರಣಗೊಳಿಸುವ ಸಂತೆಯಲ್ಲಿ ಸೊಪ್ಪಿನ ಕಂತೆಯಂತೆ ಶಿಕ್ಷಣವನ್ನು ಹರಾಜು ಹಾಕುವ ವ್ಯಾಪಾರೀಕರಣ ಶಿಕ್ಷಣ ದ್ರೋಹಿ ನೀತಿಗಳ ವಿರುದ್ಧದ ಎಸ್‌ಎಫ್‌ಐ ಹೋರಾಟ ಕೇಂದ್ರ ಸರ್ಕಾರಗಳು ತಮ್ಮ ಹಲವು ನಿರ್ಧಾರಗಳನ್ನು ಹಿಂದಕ್ಕೊಯ್ಯುವಂತೆ ಮಾಡಿವೆ.

ಇಂತಹ ವೈಜ್ಞಾನಿಕ - ಶಿಕ್ಷಣಪರ ಚಳುವಳಿ ರಾಷ್ಟ್ರದಲ್ಲಿ ಹಲವು ವಿಶ್ವ ವಿದ್ಯಾಲಯ ಶಾಲಾ-ಕಾಲೇಜುಗಳಲ್ಲಿ ಚಳುವಳಿಯ ವಿಸ್ತರಣೆಗೆ



- ಚುನಾವಣಾ ವಿಜಯಗಳಿಗೆ ಕಾರಣವೂ ಆಗಿದೆ.

ದೇಶದ ಪ್ರತಿಷ್ಠಿತ ಜವಹರಲಾಲ್ ನೆಹರು, ವಿವಿಯಲ್ಲಿ ಎಸ್‌ಎಫ್‌ಐ ನ ಯಶೋಗಾಧೆ ಮುಂದುವರೆದಿದೆ. ಪಶ್ಚಿಮಬಂಗಾಳದ 10 ವಿವಿಗಳಲ್ಲಿ 9 ಎಸ್‌ಎಫ್‌ಐ ತೆಕ್ಕೆಗೆ ಬಂದು ಎಸ್‌ಎಫ್‌ಐನ ಪ್ರಭಾವ ಮತ್ತಷ್ಟು ವಿಸ್ತರಣೆಯಾಗಿದೆ. ಕೇರಳದಲ್ಲಿ ಸರ್ಕಾರ ಕುತಂತ್ರ - ದಬ್ಬಾಳಿಕೆಯ ನಡುವೆಯೂ ಎಲ್ಲಾ ವಿಶ್ವ ವಿದ್ಯಾಲಯಗಳಲ್ಲೂ ಎಸ್‌ಎಫ್‌ಐ ಮೇಲುಗೈ ಮುಂದುವರಿದಿದೆ. ಆಂಧ್ರಪ್ರದೇಶ ಹೈದರಾಬಾದ್ ವಿಶ್ವ ವಿದ್ಯಾಲಯದಲ್ಲಿ ಎಸ್‌ಎಫ್‌ಐ ಶ್ವೇತ ಪತಾಕೆ ಹಾರಿ ರಾಜ್ಯದ ವಿದ್ಯಾರ್ಥಿ ಚಳುವಳಿಗೆ ಹೊಸ ಹುರುಪು ತಂದಿದೆ. ಹಿಮಾಚಲ ಪ್ರದೇಶ ವಿಶ್ವ ವಿದ್ಯಾಲಯ ಮಾತ್ರವಲ್ಲ ರಾಜ್ಯಾದ್ಯಂತ ಕಾಲೇಜುಗಳಿಗೆ ನಡೆದ ಚುನಾವಣೆಯಲ್ಲಿ ಚಲಾವಣೆಯಾದ ಮತಗಳ ಶೇ32 ರಷ್ಟು ಮತಗಳನ್ನು ಗಳಿಸಿ ಎಸ್‌ಎಫ್‌ಐ ಪ್ರಪ್ರಥಮ ಸ್ಥಾನಗಳಿಸಿ ಆಳುವ ಸರ್ಕಾರ ಬಾಲಂಗೋಚಿ ಎ.ಬಿ.ವಿ.ಪಿ. ಹಾಗೂ ಎನ್.ಎಸ್.ವಿ.ಐ ಗಳನ್ನು ಸೋಲಿಸಿದೆ. ರಾಜಸ್ಥಾನದ ವಿಜಯಪುರ ವಿವಿ, ಹಲವು ಜಿಲ್ಲೆಗಳ ದೊಡ್ಡ ಸಂಖ್ಯೆಯ ಕಾಲೇಜುಗಳಲ್ಲಿ ಎಸ್‌ಎಫ್‌ಐ ಗೆ ಬೆಂಬಲ ಸಿಕ್ಕಿದೆ. ಉತ್ತರಾಂಚಲ, ಓರಿಸ್ಸಾ, ಉತ್ತರ ಪ್ರದೇಶ ಮುಂತಾದ ರಾಜ್ಯಗಳ ಹಲವು ಪ್ರತಿಷ್ಠಿತ ಕಾಲೇಜುಗಳ ಚುನಾವಣೆಗಳಲ್ಲಿ ಎಸ್‌ಎಫ್‌ಐ ದಿಗ್ವಿಜಯ ದಾಖಖಿಸಿದೆ.

ಚಳುವಳಿಯ ಈ ಎಲ್ಲಾ ಮುನ್ನಡೆ ಪ್ರಗತಿಯನ್ನು ಸಮ್ಮೇಳನ ಪರಿಗಣಿಸಿ, ದಾಖಲಿಸಿಕೊಂಡಿತು. ಸ್ವಯಂ ವಿಮರ್ಶಾತ್ಮಕವಾಗಿ ಕೊರತೆ- ದೌರ್ಬಲ್ಯಗಳನ್ನು ವಿಮರ್ಶಿಸಿತು. ಸದಸ್ಯತ್ವದ ವಿಸ್ತರಣೆ ಯೋಜಿಸಿದಷ್ಟು ಆಗಿಲ್ಲ. ರಾಜ್ಯ ರಾಜ್ಯಗಳ ನಡುವಿನ ಅಂತರ ಅಸಮಾನತೆ ಮುಂದುವರಿದಿದೆ. ಘಟಕಗಳ ರಚನೆ- ಕ್ರಿಯಾಶೀಲಗೊಳಿಸುವಿಕೆ- ಅವುಗಳ



... ನಿರ್ಧಾರ

...ಶ್ರೀಳನ

...ನೋಂದಾವಣೆಯಲ್ಲಿ ಕೊರತೆಗಳನ್ನು ಗುರುತಿಸಿಕೊಂಡಿದ್ದರೂ ಪ್ರಗತಿ ಸಾಲದು. ಹೀಗೆ ಹಲವು

- ಮುವತ್ತು ಲಕ್ಷ ದಾಟುವ ಸದಸ್ಯತ್ವ
- ಜಾಗತೀಕರಣ ಕೋಮುವಾದ- ವ್ಯಾಪಾರೀಕರಣದ ವಿರುದ್ಧ ಪ್ರಭಲ ಆಂದೋಲನ
- ರಾಜಕೀಯದಿಂದ ವಿಮುಖಗೊಳ್ಳುತ್ತಿರುವ ಕ್ಯಾಂಪಸ್‌ಗಳನ್ನು ಸಂವೇದನಾಶೀಲಗೊಳಿಸುವುದು
- ಕಾರ್ಯಕರ್ತರಿಗೆ ಸಮರ್ಪಕ ರಾಜಕೀಯ ಶಿಕ್ಷಣ
- ವಿದ್ಯಾರ್ಥಿ ಸಮುದಾಯದ ಪ್ರಜಾಸತ್ತಾತ್ಮಕ



ಹಕ್ಕುಗಳಿಗಾಗಿ ಹೋರಾಟ

ಜಾತಿ- ಲಿಂಗ ತಾರತಮ್ಯ ಸಾಮಾಜಿಕ ಅಸಮಾನತೆ ದೌರ್ಜನ್ಯಗಳ ವಿರುದ್ಧ ಸಾಮಾಜಿಕ ನ್ಯಾಯದ ರಕ್ಷಣೆಗಾಗಿ ಹೋರಾಟ

ವಿಶಾಲ ವಿದ್ಯಾರ್ಥಿ- ಯುವಜನರ ಐಕ್ಯ ಹೋರಾಟ - ಕಾರ್ಯಾಚರಣೆಯ ದೃಷ್ಟಿಯ ಕಾರ್ಯಯೋಜನೆ ಹೀಗೆ ಹಲವು ಗುರಿಗಳನ್ನು ಗುರುತಿಸಿಕೊಂಡ ಸಮ್ಮೇಳನ

12ನೇ ಸಮ್ಮೇಳನ ಹೊತ್ತಿಗೆ ಮತ್ತಷ್ಟು ಸಾಧನೆ- ಪ್ರಗತಿಯೊಂದಿಗೆ ಸೇರುವ ದೃಢ ವಿಶ್ವಾಸದೊಂದಿಗೆ ಮುಕ್ತಾಯಗೊಂಡಿತು. ಪ್ರೌಢಶಾಲೆಯ ವಿದ್ಯಾರ್ಥಿಯಿಂದ ಆರಂಭಿಸಿ - ಸಂಶೋಧನಾ ವಿದ್ಯಾರ್ಥಿಗಳವರೆಗೆ ವಿವಿಧ ವಿಭಾಗ- ವಿವಿಧ ಪ್ರದೇಶಗಳಿಂದ ಬಂದ ಬಹುಮುಖಿ ಹೋರಾಟದ ವಿಭಿನ್ನ ಅನುಭವ ಹೊತ್ತ ಪ್ರತಿನಿಧಿ ಸಂಗಾತಿಗಳು ಹೋರಾಟ ಬಾವುಟವನ್ನು ಮುಂದಕ್ಕೊಯ್ಯಲು ತಮ್ಮ ತಮ್ಮ ಊರುಗಳಿಗೆ ತೆರಳಿದರು.

ಸಮ್ಮೇಳನ ಅಂಗೀಕರಿಸಿದ, ಇರಾಕ್ ಮೇಲಿನ ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ಶಕ್ತಿಗಳ ಆಕ್ರಮಣ ವಿರೋಧಿ ನಿರ್ಣಯ, ಜಾತಿ ದಬ್ಬಾಳಿಕೆ- ಲಿಂಗ ತಾರತಮ್ಯ ವಿರೋಧಿ ನಿರ್ಣಯ, ದಲಿತ -ಬುಡಕಟ್ಟು ಜನರ ಸಂವಿಧಾನ ಬದ್ದ ಮೀಸಲಾತಿ ಹಕ್ಕಿನ ರಕ್ಷಣೆ ಹಾಗೂ ಖಾಸಗಿ ರಂಗಕ್ಕೂ ಈ ಹಕ್ಕಿನ ವಿಸ್ತರಣೆಗೆ ಒತ್ತಾಯಿಸುವ, ಬರಪೀಡಿತ ಪ್ರದೇಶಗಳಲ್ಲಿ ತೀವ್ರ ಪರಿಹಾರ ಕಾಮಗಾರಿಗಾಗಿ ಒತ್ತಾಯಿಸುವ, ಈಶಾನ್ಯ ರಾಜ್ಯಗಳ ಅಭಿವೃದ್ಧಿ ಅಗತ್ಯ ಕಾರ್ಯಯೋಜನೆಗೆ ಒತ್ತಾಯಿಸುವ ನಿರ್ಣಯಗಳು ವಿದ್ಯಾರ್ಥಿ ಚಳುವಳಿ ಮುಂದಿನ ನಡೆಗೆ ದಾರಿ ತೋರಿಸಲಿದೆ.

ಶಿಕ್ಷಣದ ವ್ಯಾಪಾರೀಕರಣ- ಖಾಸಗೀ ಶಿಕ್ಷಣ ಸಂಸ್ಥೆಗಳ ನಿಯಂತ್ರಣದ ವಿಚಾರದಲ್ಲಿ ಸುಪ್ರಿಂ- ಕೋರ್ಟಿನ ತೀರ್ಪನ್ನು ವಿರೋಧಿಸಿ ಅಂಗೀಕರಿಸಿರುವ ನಿರ್ಣಯ ಶಿಕ್ಷಣ ಕೋಮುವಾದೀಕರಣದ ವಿವಿಧ ಆಯಾಮಗಳನ್ನು ವಿಶ್ಲೇಷಿಸಿ ವಿರೋಧಿಸಿ ಅಂಗೀಕರಿಸಿರುವ ನಿರ್ಣಯಗಳು ಎಸ್‌ಎಫ್‌ಐ ಹೋರಾಟದ ಮೊನಚನ್ನು ಮತ್ತಷ್ಟು ತೀಕ್ಷ್ಣಗೊಳಿಸಲಿವೆ.

ಕಲ್ಲಿಕೋಟೆಯ ಕಡಲ ತೀರ, ಸೊಯ್ಯನೆ ಬೀಸುವ ರಭಸದ ಗಾಳಿ. ಎತ್ತರೆತ್ತರಕ್ಕೆ ಹಾರಿ ನಿಂತಎಸ್‌ಎಫ್‌ಐ ನ ಶ್ವೇತ ಪತಾಕೆ. ವಿವಿಧ ಶಾಲಾ, ಕಾಲೇಜುಗಳು, ಅಕ್ಕ ಪಕ್ಕ ಊರುಗಳಿಂದ ಬಂದ ಸಹಸ್ರಾರು ವಿದ್ಯಾರ್ಥಿಗಳ ಸಾಲು ಸಾಲು. ಎಸ್‌ಎಫ್‌ಐ 11ನೇ ಅಖಿಲ ಭಾರತ ಸಮ್ಮೇಳನದ ಮೆರವಣಿಗೆ ಆರಂಭವಾಯಿತು. ಮುಂದೆ ಅಖಿಲ ಭಾರತ ಮುಖಂಡರು ಹಿಂದೆ ವಿವಿಧ ರಾಜ್ಯಗಳ ಪ್ರತಿನಿಧಿಗಳು. ಭಾರತ ವೈವಿಧ್ಯತೆಯನ್ನು- ಏಕತೆಯನ್ನು ಸಾರುವ ವಿವಿಧ ಭಾಷೆಗಳ ಘೋಷಣೆಗಳು. ಮೆರವಣಿಗೆಯುದ್ದಕ್ಕೂ ಮೈಲುಗಟ್ಟಲೆ ಮಾನವ ಸರಪಳಿಯಂತೆ ನಿಂತ ಶಿಕ್ಷಕ- ಕಾರ್ಮಿಕ- ನೌಕರ- ಯುವಜನ- ಮಹಿಳಾ ಸಂಘಟನೆಗಳ ಸಂಗಾತಿ ಬಂಧುಗಳು, ರೈತ - ಕೂಲಿಕಾರರ ಚಳುವಳಿಯ ಧೀರ ಸಂಗಾತಿಗಳು. ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ, ತೆರೆದ ಮೈದಾನದಲ್ಲಿ ಬಹಿರಂಗ ಸಭೆ.

ಭಾರತ ದೇಶದ ಕ್ರಾಂತಿಕಾರಿ ಕಮ್ಯುನಿಸ್ಟ್ ಚಳುವಳಿ ಹಿರಿಯ ಚೇತನ, ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೊ ಸದಸ್ಯರು ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿನರಾಯ್ ವಿಜಯನ್, ಎಸ್‌ಎಫ್‌ಐ ಸಂಸ್ಥಾಪಕ ಮುಖಂಡರುಗಳಲ್ಲಿ ಒಬ್ಬರಾದ ಕಾಂ.ಸಿ.ಭಾಸ್ಕರನ್ ಮುಂತಾದವರು.

ಫೆಬ್ರವರಿ 15 ರ ಬೆಳಿಗ್ಗೆ ಸಮ್ಮೇಳನದ ಟ್ಯಾಗೋರ ಸಭಾಂಗಣದ ಆವರಣದಿಂದ ಕಡಲ ತೀರದಲ್ಲಿ ಹುತಾತ್ಮ ಸಂಗಾತಿಗಳ ಸ್ಮಾರಕದವರೆಗೆ ಪ್ರತಿನಿಧಿಗಳ ಮೆರವಣಿಗೆ ಹುತಾತ್ಮ ಸಂಗಾತಿಗಳಿಗೆ ಗೌರವಾರ್ಪಣೆ, ದೇಶದ ಐಕ್ಯತೆ- ಸಮಗ್ರತೆ- ಕೋಮುಸೌಹಾರ್ದತೆ, ವಿಭಿನ್ನ ಭಾಷೆ- ಸಂಸ್ಕೃತಿಗಳನ್ನು ರಕ್ಷಿಸುವ ಶಿಕ್ಷಣದ ವ್ಯಾಪಾರೀಕರಣ- ಖಾಸಗೀಕರಣ- ಜಾಗತೀಕರಣದ ವಿರುದ್ಧ ಹೋರಾಡುವ ಪ್ರತಿಜ್ಞೆ ಸ್ವೀಕಾರ- ಎಸ್‌ಎಫ್‌ಐ ಅಖಿಲ ಭಾರತ ಅಧ್ಯಕ್ಷರಾದ ಕೃಷ್ಣ ಪ್ರಸಾದ್‌ರಿಂದ ಧ್ವಜಾರೋಹಣ- ಹುತಾತ್ಮ ಜ್ಯೋತಿಗೆ ಚಾಲನೆ.


ಸಂವಿಧಾನ - ಕಾರ್ಯಕ್ರಮ ಚರ್ಚೆ

ಪ್ರತಿನಿಧಿಗಳು ಕೇವಲ ಸಮ್ಮೇಳನದ ಕರಡು ವರದಿಯ ಬಗೆಗೆ ಮಾತ್ರವಲ್ಲ, ಎಸ್‌ಎಫ್‌ಐ ನ ಸಂವಿಧಾನ - ಕಾರ್ಯಕ್ರಮದ ಕುರಿತು ಸುದೀರ್ಘ ಚರ್ಚೆ ನಡೆಸಿದರು. 38 ವರ್ಷಗಳ ಹಿಂದೆ 1970 ರಲ್ಲಿ ಅಂಗೀಕರಿಸಿದ ಎಸ್‌ಎಫ್‌ಐ ನ ಸಂವಿಧಾನ ಕಾರ್ಯಕ್ರಮವನ್ನು ಸಮಕಾಲೀನಗೊಳಿಸಲು ಚೆನ್ನೈ ಸಮ್ಮೇಳನ ನಿರ್ಧರಿಸಿತು. ಭಾರತದ ಸಾಮಾಜಿಕ- ಶೈಕ್ಷಣಿಕ ಪರಿಸ್ಥಿತಿಯ ಬಗೆಗಿನ ಎಸ್‌ಎಫ್‌ಐ ಮೂಲಭೂತ ವಿಶ್ಲೇಷಣೆಯಲ್ಲಿ ಯಾವುದೇ ವ್ಯತ್ಯಾಸಳಿವಾಗಿಲ್ಲದಿದ್ದರೂ 32 ವರ್ಷಗಳಲ್ಲಿ ಜಗತ್ತು ಕಂಡಿರುವ ಅಗಾಧ ಸ್ಥಿತ್ಯಂತರದ ಪರಿಸ್ಥಿತಿಯನ್ನು ಪರಿಗಣಿಸಿ ನಮ್ಮ ತಿಳುವಳಿಕೆಯನ್ನು ಸಮಕಾಲೀನಗೊಳಿಸಲು ನಿರ್ಧರಿಸಲಾಗಿದೆ. ಈ ವಿಷಯವಾಗಿ ಸಿಇಸಿ ರಚಿಸಿದ್ದ 'ಆಯೋಗ' ರೂಪಿಸಿದ 'ಕರಡು ಸಂವಿಧಾನ- ಕಾರ್ಯಕ್ರಮವನ್ನು ಸಮ್ಮೇಳನದಲ್ಲಿ ಮಂಡಿಸಲಾಗಿತ್ತು. ಪ್ರತಿನಿಧಿಗಳಿಂದ ಬಂದಿರುವ 90 ತಿದ್ದುಪಡಿಗಳನ್ನು ಅಂಗೀಕರಿಸಿರುವ ಸಮ್ಮೇಳನವು ಸಂಘಟನೆಯ ಕೆಳಹಂತದಲ್ಲಿ ರಾಜ್ಯ-ಜಿಲ್ಲೆ-ತಾಲ್ಲೂಕು ಶಾಲಾ-ಕಾಲೇಜು ಘಟಕ ಹೀಗೆ ಬುಡಮಟ್ಟದ ಸಂವಿಧಾನ ಮತ್ತು ಕಾರ್ಯಕ್ರಮದ ಬಗೆಗಿನ ಚರ್ಚೆಯನ್ನು ನಡೆಸಲು ಕರಡು ಸಂವಿಧಾನ - ಕಾರ್ಯಕ್ರಮವನ್ನು ಅಂಗೀಕರಿಸಿತು.


ಸಮ್ಮೇಳನ ಕಲಾಪಗಳ ನಡುವೆ ನಡೆದ ಜಾಗತೀಕರಣ ಕುರಿತ ವಿಚಾರ ಸಂಕಿರಣದಲ್ಲಿ ಎ.ಐ.ವೈ.ಎಫ್. ನ ಕಾಂ.ಸೋನಿತಂಗಮ್ , ಡಿ.ವೈ.ಎಫ್.ಐ ಅಖಿಲ ಭಾರತ ಸಹ ಕಾರ್ಯದರ್ಶಿ ಬಾಲಗೋಪಾಲ್ ಕಾಂ.ಶಮೀಕ್ ಲಹರಿ - ಕಾಂ. ಕೃಷ್ಣಪ್ರಸಾದ್ ಮುಂತಾದವರು ಮಾತನಾಡಿ ಎಡ ವಿದ್ಯಾರ್ಥಿ ಯುವಜನ ಸೂಚನೆಗಳ ಐಕ್ಯ ಚಳುವಳಿಯ ಅಗತ್ಯ- ಜಾಗತೀಕರಣ ಅಪಾಯಗಳ ಕುರಿತು ಮಾತನಾಡಿದರು.

ಎಸ್‌ಎಫ್‌ಐ ನ ಮಾಜಿ ಅಖಿಲ ಭಾರತ ಅಧ್ಯಕ್ಷರು, ಸಿಪಿಐ(ಎಂ) ಪಾಲಿಟ್‌ಬ್ಯೂರೊ ಸದಸ್ಯರೂ ಆದ ಕಾಂ.ಸೀತಾರಾಮ ಯಚೂರಿ, ಕಾಂ.ಇ.ಕೆ.ನಾಯನರ್ ಮುಂತಾದವರು ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಪ್ರಮುಖರಲ್ಲಿ ಕೆಲವರು.

ನೂತನ ಕೇಂದ್ರ ಕಾರ್ಯಕಾರಿ ಸಮಿತಿ ಆಯ್ಕೆ



ಕೆ.ಕೆ.ರಾಘೇಶ್,



ಕಲೋಲ್ ರಾಯ್

11ನೇ ಅಖಿಲ ಭಾರತ ಸಮ್ಮೇಳನವು 81 ಸದಸ್ಯರ ನೂತನ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದೆ. ಕರ್ನಾಟಕ ರಾಜ್ಯದಿಂದ ಕೆ.ಎಸ್.ಲಕ್ಷ್ಮಿ, ಆರ್.ರಾಮಕೃಷ್ಣ, ಟಿ.ಎಲ್.ಕೃಷ್ಣೇಗೌಡ, ಕೆ.ರಮೇಶ್ (ಬಳ್ಳಾರಿ) ಈ ನೂತನ ಸಮಿತಿಯ ಸದಸ್ಯರಾಗಿದ್ದಾರೆ.

ನೂತನ ಸಿಇಸಿ ಪದಾಧಿಕಾರಿಗಳು

ಅಧ್ಯಕ್ಷರು-**ಕೆ.ಕೆ.ರಾಘೇಶ್**,

ಪ್ರಧಾನ ಕಾರ್ಯದರ್ಶಿ -


ಕೇಂದ್ರ ಕಾರ್ಯದರ್ಶಿ ಮಂಡಳಿಗೆ ಕರ್ನಾಟಕ ರಾಜ್ಯದ ಕಾರ್ಯದರ್ಶಿ ಆರ್.ರಾಮಕೃಷ್ಣ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಮೆಜಾರಿಟಿ ಎಂದರಷ್ಟೇ ಪ್ರಜಾಪ್ರಭುತ್ವವಲ್ಲ - ಕೋಮುವಾದ ಸ್ವಾತಂತ್ರ್ಯವನ್ನು ನಾಶಗೊಳಿಸುತ್ತದೆ - ಜಾವೇದ್ ಅಖ್ತರ್

ಪ್ರತಿನಿಧಿ ಅಧಿವೇಶನ ಉದ್ಘಾಟಿಸಿದವರು ಜಾವೇದ್ ಅಖ್ತರ್ ಪ್ರತಿನಿಧಿಗಳ ಮುಂದೆ ಅವರು ತೆರೆದಿಟ್ಟ ಹಲವು ವಿವರ ವಿಚಾರಗಳು ಪ್ರತಿನಿಧಿಗಳನ್ನು ಗಾಢವಾಗಿ ಪ್ರಭಾವಗೊಳಿಸಿದವು ಮಾತ್ರವಲ್ಲ ಪ್ರತಿನಿಧಿಗಳ ಅರಿವಿನ ಪರಿಧಿಯನ್ನು ವಿಸ್ತರಿಸಿತು.

1947 ರಲ್ಲಿ ಹಿಂದೂ ಮಹಾಸಭಾದ ಜಮ್ಮು ಮತ್ತು ಕಾಶ್ಮೀರ ಘಟಕ ಮುಖಂಡರಾಗಿದ್ದ ಪ್ರೇಮನಾಥ್ ದೊಗಾ ಅಲ್ಲಿನ ರಾಜನಿಗೆ ತಮ್ಮ ಸಂಪೂರ್ಣ ನಿಷ್ಠೆಯನ್ನು ಬಹಿರಂಗವಾಗಿ ಘೋಷಿಸಿದ್ದರು. ನ್ಯಾಶನಲ್ ಕಾನ್‌ಫರೆನ್ಸ್ ನಾಯಕತ್ವದಲ್ಲಿ ಕಾಶ್ಮೀರದ ಜನತೆ, ಕಾಶ್ಮೀರವು ಭಾರತ ಒಕ್ಕೂಟಕ್ಕೆ ಸೇರಬೇಕೆಂದು ಚಳುವಳಿ ನಡೆಸುತ್ತಿದ್ದರೆ ಅಲ್ಲಿಯ (ಹಿಂದೂ) ಮಹಾರಾಜ ಒಕ್ಕೂಟಕ್ಕೆ ಸೇರಬೇಕೆಂದು ಚಳುವಳಿ ನಡೆಸುತ್ತಿದ್ದರೆ ವಿಭಜನೆಯ ಹಂತದಲ್ಲಿ ಕಾಶ್ಮೀರವನ್ನು ಭಾರತಕ್ಕೆ ಸೇರಿಸಲು ಬಯಸದೇ, ಸ್ವತಂತ್ರವಾಗಿ ಉಳಿಸಿಕೊಳ್ಳಲು, ಇಲ್ಲವೇ ಪಾಕಿಸ್ತಾನದೊಂದಿಗೆ ಸೇರಿಸಲು ಗಂಭೀರ ಪ್ರಯತ್ನ ನಡೆಸಿದ್ದ. ಈ ವಿಚಾರವಾಗಿ ಆತ ಲಾಹೋರ್‌ಗೆ ಭೇಟಿ ನೀಡಿ ಚರ್ಚಿಸಿದ್ದೂ ಇತ್ತು. ಇಷ್ಟೆಲ್ಲಾ ನಡೆಯುವಾಗಲೂ ಪ್ರೇಮನಾಥ್ ನಿಷ್ಠೆ ಮಹಾರಾಜನಿಗೆ ಅಚಲವಾಗಿಯೇ ಇತ್ತು. ಇಂತಹ ಪ್ರೇಮನಾಥ್ ಮುಂದೆ ಹಿಂದು ಮಹಾ ಸಭಾದ ಮುಂದಿನ ಅವತಾರವಾದ ಹಾಗೂ ಆರೆಸ್ಸೆಸ್‌ನ ರಾಜಕೀಯ ಮುಖವಾದ ಜನ ಸಂಘದ ಅಖಿಲ ಭಾರತ ಅಧ್ಯಕ್ಷರಾದರು ಎಂದು ಸಂಘ ಪರಿವಾರದ 'ಉಜ್ವಲ ರಾಷ್ಟ್ರಪ್ರೇಮ' ದ ನಿಜವಾದ ಮುಖವನ್ನು ಅನಾವರಣ ಗೊಳಿಸಿದರು.

ಕೋಮುವಾದದ ಹೊಗೆಯ ಹಿಂದೆ ಕೆಲವು ಪಟ್ಟಭದ್ರ ರಾಜಕೀಯ ಶಕ್ತಿಗಳ ಕುತಂತ್ರಗಳಿವೆ- ಜಾತ್ಯಾತೀತತೆ ಪ್ರಜಾಪ್ರಭುತ್ವದ ಕನಿಷ್ಟ ಅಗತ್ಯ- ಹಿಂದುತ್ವ ಶಕ್ತಿಗಳು ಬಹುಸಂಖ್ಯಾತ - ಅಲ್ಪಸಂಖ್ಯಾತ ಎಂಬ ವಿಭಜಕ ರಾಜಕೀಯ ನಡೆಸುತ್ತಿದೆ. ಮೆಜಾರಿಟಿ ಆದಾಕ್ಷಣ ಅದು ಪ್ರಜಾಪ್ರಭುತ್ವವೇನಲ್ಲ. ಏಕೆಂದರೆ ಪ್ರಜಾ ಪ್ರಭುತ್ವದಲ್ಲಿ ಅಭಿಪ್ರಾಯಗಳಲ್ಲಿ ಬದಲಾವಣೆ ಆಗುತ್ತಾ ಅಲ್ಪಸಂಖ್ಯಾತ ಅಭಿಪ್ರಾಯ ಬಹುಸಂಖ್ಯಾತ ಆಗಬಹುದು. ಬಹುಸಂಖ್ಯಾತ ಅಭಿಪ್ರಾಯ ಅಲ್ಪಸಂಖ್ಯಾತ ಆಗಬಹುದು. ಈ ಬದಲಾವಣೆ ಹಿಂದುತ್ವದ ಮೆಜಾರಿಟಿಯಲ್ಲಿ ಈ ಅವಕಾಶವಿಲ್ಲ. ಹಿಂದುತ್ವದ ಶಕ್ತಿಗಳು ನಮ್ಮ ಸಮಾಜದ ಎರಡು ಪ್ರಮುಖ ಜನ ವಿಭಾಗ ಗಳನ್ನು ಕೀಳಾಗಿ ಬಿಂಬಿಸುತ್ತಿದ್ದಾರೆ, ಒಂದು ಮುಸ್ಲಿಂ ಸಮುದಾಯ ಇನ್ನೊಂದು ಹಿಂದು ಸಮುದಾಯ. ಇತ್ತೀಚಿನ ದಿನಗಳಲ್ಲಿ ಕೋಮು ವಾದಿ ಬೇಡಿಕೆಗಳು ಕೋಮುವಾದಿ ನೆಲೆಯಲ್ಲಿ ಜನರ ಒಗ್ಗೂಡುವಿಕೆ ಕೋಮು ಉದ್ರಿಕ್ತತೆ ಹೆಚ್ಚುತ್ತಿದೆ. ಕೋಮುವಾದಿ ಶಕ್ತಿಗಳು ಅಲ್ಪ ಸಂಖ್ಯಾತ ಮತ್ತು ಬಹುಸಂಖ್ಯಾತ ಎಲ್ಲಾ ವಿಭಾಗಗಳ ಜನರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಾಶ ಮಾಡುತ್ತಾರೆ. ಹೀಗೆ ಜಾವೇದ್ ಅಖ್ತರ್‌ರವರ ಗಹನವಾದ ವಿಚಾರ ಸರಣಿ ಸಮ್ಮೇಳನ ಉದ್ಘಾಟನಾ ಸಮಾರಂಭದಲ್ಲಿ ಹರಿಯಿತು.



ಕರ್ನಾಟಕ ವಿದ್ಯುತ್ ರಂಗ ಎತ್ತ ಸಾಗಿದೆ?

ವಿದೇಶಿ ಮತ್ತು ಸ್ವದೇಶಿ ಖಾಸಗೀ ಕಂಪನಿಗಳು ವಿದ್ಯುತ್ ಉತ್ಪಾದನೆಯಲ್ಲಿ ಕೊಳ್ಳೆ ಹೊಡೆಯುತ್ತಿರುವುದು ತಿಳಿದಿದ್ದರೂ ಈಗ ಸರಬರಾಜು ವ್ಯವಸ್ಥೆಯನ್ನು ಖಾಸಗಿಯವರಿಗೆ ನೀಡುವ ಹುನ್ನಾರ ನಡೆಸುತ್ತಿದೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ. ಇದನ್ನು ಹಿಮ್ಮೆಟ್ಟಿಸಲೇಬೇಕು ಎನ್ನುತ್ತಾರೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಅವರ ಲೇಖನದ ಮುಂದುವರಿದ ಭಾಗ

ವಿದ್ಯುತ್ ಉತ್ಪಾದನೆಯ ಕರ್ನಾಟಕದ ವಿದ್ಯುತ್ ಕೊರತೆಯ ಮೂಲ ಖಾಸಗೀಕರಣದ ಪ್ರಯತ್ನ ಎಂಬುದನ್ನು ಕಂಡುಕೊಂಡೆವು. ಆದರೆ ಈ ವಿದೇಶಿ ಕಂಪನಿಗಳು ವಿದ್ಯುತ್ ಉತ್ಪಾದನೆಗೆ ಏಕೆ ಕೈ ಹಾಕಲಿಲ್ಲ, ಈ ಬಗ್ಗೆ ಕರ್ನಾಟಕದ ಅನುಭವಗಳೇನು ಎಂಬುದನ್ನು ಪರಿಶೀಲಿಸೋಣ.

ಭಾರತದಲ್ಲಿ ವಿದ್ಯುತ್ ಉತ್ಪಾದನೆಯ ಬಾಗಿಲು ವಿದೇಶಿ ಕಂಪನಿಗಳಿಗೆ ತೆರೆದಿದೆ ಎಂದ ಕೂಡಲೇ ಕರ್ನಾಟಕದಲ್ಲಿ ಅಂದು ಇದ್ದ ಕಾಂಗ್ರೆಸ್ ಸರ್ಕಾರವೂ ಕೇಂದ್ರ ಸರ್ಕಾರದೊಡನೆ ಸಹಕರಿಸಲು ಅಣಿಯಾಯಿತು. ಹೀಗಾಗಿ ಅನೇಕ ಕಂಪನಿಗಳು ಕರ್ನಾಟಕವನ್ನು ಆರಿಸಿಕೊಂಡವು. ಈ ಕಂಪನಿಗಳ ಪೂರ್ವಾಪರಗಳೇನು? ವಿದ್ಯುತ್ ರಂಗದಲ್ಲಿ ಅವರಿಗಿರುವ ಅನುಭವವೇನು? ಅವರ ಸಾಮರ್ಥ್ಯಗಳೇನು? ಅವರು ಎಲ್ಲಿಯಾದರೂ ಇಲ್ಲಿಯವರೆಗೆ ವಿದ್ಯುತ್ ತಯಾರಿಸಿದ್ದಾರೆಯೇ? ಇವು ಯಾವುದನ್ನೂ ಪರಿಶೀಲಿಸದೇ ಅಂದಿನ ಮುಖ್ಯಮಂತ್ರಿ ಬಂಗಾರಪ್ಪನವರು ಎಡಗೈ ಬಲಗೈ ಎರಡರಲ್ಲಿಯೂ ಈ ಕಂಪನಿಗಳೊಂದಿಗೆ ಸಹಿ ಹಾಕಿದರು. ಆದರೆ ಇವುಗಳಲ್ಲಿ ಅನೇಕ ಕಂಪನಿಗಳು ಡೂಪ್ಲಿಕೇಟ್ ಕಂಪನಿಗಳು, ಕೇವಲ ಆಗ ತಾನೆ ವಿದ್ಯುತ್ ರಂಗದಲ್ಲಿ ದುರ್ಲಾಭ ಪಡೆಯುವ ಅವಕಾಶವನ್ನು ಬಳಸಿಕೊಳ್ಳುವುದಕ್ಕಾಗಿ ಹುಟ್ಟಿಕೊಂಡ ಕಂಪನಿಗಳು. ಕರ್ನಾಟಕದೊಡನೆ ಮಾಡಿಕೊಂಡ ಒಪ್ಪಂದ (ಎಂ.ಓ.ಯು) ವನ್ನು ತೋರಿಸಿಕೊಂಡು ಜಗತ್ತಿನಲ್ಲಿ ಯಾರು ತಮಗೆ ವಿದ್ಯುತ್ ತಯಾರಿಕೆ ಉಪಕರಣಗಳನ್ನು ಸಾಲವಾಗಿ ಕೊಡುತ್ತಾರೆ, ಯಾರು ಹಣ ನೀಡುತ್ತಾರೆ ಎಂದು ಅಲೆದಾಡಿ ಆ ಕಂಪನಿಗಳೊಡನೆ ವ್ಯವಹಾರ ಕುದುರಿಸಿಕೊಂಡು ನಂತರ ಇಲ್ಲಿ ಅಂದಾಜನ್ನು ತಯಾರಿಸಿ ವಿದ್ಯುತ್ ಖರೀದಿ ಒಪ್ಪಂದವನ್ನು ಮಾಡಿಕೊಳ್ಳಲು ಬಯಸಿದ ಕಂಪನಿಗಳು.


ಇಂತಹ ಎಷ್ಟೋ ಕಂಪನಿಗಳಿಗೆ ಜಗತ್ತಿನ ಪ್ರಮುಖ ವಿದ್ಯುತ್ ಕಂಪನಿಗಳು ಕ್ಯಾರೆ ಎನ್ನದಿದ್ದಾಗ ತಾವೇ ಉದುರುಹೋದಂತಹವು. ಆದರೆ ಹಲವು ಹಂತದವರೆಗೂ ಮುಂದುವರೆದ ಎರಡು ಕಂಪನಿಗಳ ಅನುಭವ ಹೀಗಿದೆ.

ಕೊಜೆಂಟ್ರಿಕ್ಸ್ : ಕೊಜೆಂಟ್ರಿಕ್ಸ್ ಅಮೆರಿಕ ಮೂಲದ ಒಂದು ಕಂಪನಿ. ಈ ಕಂಪನಿಗೂ ವಿದ್ಯುತ್ ತಯಾರಿಕೆಯಲ್ಲಿ ಯಾವುದೇ ಅನುಭವವಿಲ್ಲ. ರಾಜ್ಯ ಸರ್ಕಾರದೊಡನೆ ಆರಂಭಿಕ ಒಪ್ಪಂದ ಮಾಡಿಕೊಂಡ ಮೇಲೆ ಅಮೆರಿಕದ ವಿದ್ಯುತ್ ಉಪಕರಣಗಳ ತಯಾರಕ ಜನರಲ್ ಎಲೆಕ್ಟ್ರಿಕಲ್ ಕಂಪನಿಯೊಂದಿಗೆ ಉಪಕರಣಗಳನ್ನು ಪಡೆಯಲು ಒಪ್ಪಂದ ಮಾಡಿಕೊಂಡಿತು. ತನ್ನದೇ ಆದ ಯಾವ ಬಂಡವಾಳವನ್ನೂ ತೊಡಗಿಸದೆ ಸಂಪೂರ್ಣ ಸಾಲದ ಆಧಾರದ ಮೇಲೆಯೇ ವಿದ್ಯುತ್ ಕೇಂದ್ರವನ್ನು ನಿರ್ಮಿಸಿ ಅದು ಉತ್ಪಾದನೆ ಆರಂಭಿಸಿದ ಮೇಲೆ ತನ್ನ ಶೇರು ಬಂಡವಾಳವನ್ನು ಹೂಡುವ ಮಹಾ ಐಡಿಯಾ ಈ ಕಂಪನಿಯದ್ದು. ವಿದ್ಯುತ್ ತಯಾರಿಕೆ ಯಂತ್ರಗಳದ್ದೇ ಇಂತಹ ತಯಾರಿಕಾ ಕಂಪನಿಯಲ್ಲಿ ಮುಖ್ಯವೆಚ್ಚ. ಆದ್ದರಿಂದ ಅದನ್ನು ಬಹಿರಂಗ ಸವಾಲಿನ (ಬಿಡ್ಡಿಂಗ್) ಮೂಲಕ ಯಾವ ಕಂಪನಿ ಅಗ್ಗದ ದರದಲ್ಲಿ ಯಂತ್ರಗಳನ್ನು ನೀಡುವುದೋ ಅದರಿಂದ ಯಂತ್ರಗಳನ್ನು ಪಡೆಯಬೇಕು ಎಂದು ಕಡ್ಡಾಯವಿದ್ದರೂ ಇದು ಜನರಲ್ ಎಲೆಕ್ಟ್ರಿಕಲ್ ಕಂಪನಿಯ (ಈ ಕಂಪನಿ ಜಗತ್ತಿನ ಪೆಟ್ರೋಲ್, ವಿದ್ಯುತ್, ಕಂಪ್ಯೂಟರ್ ಉದ್ಯಮಗಳ ಅಧಿಪತಿಯಾದ ಜಗತ್ತಿನ ಅತ್ಯಂತ ದೊಡ್ಡ ಬಂಡವಾಳಶಾಹಿ ಸಾಮ್ರಾಜ್ಯವೊಂದರ ಅಧಿಪತಿಯಾದ ರಾಕ್‌ಫೇಲ್ಲರ್‌ಗೆ ಸೇರಿದ್ದು) ವಿದ್ಯುತ್ ಯಂತ್ರಗಳನ್ನು ಖರ್ಚು ಮಾಡಲೆಂದೇ ಹುಟ್ಟಿಕೊಂಡಿತೇನೋ ಎನ್ನುವಂತೆ ವರ್ತಿಸಿತು.

ವಿದ್ಯುತ್ ಉತ್ಪಾದನೆ ಸಾರ್ವಜನಿಕ ವಲಯ Vs ಖಾಸಗಿ

ಭಾರತದಲ್ಲಿ ಈಗಾಗಲೇ ಹೇಳಿರುವಂತೆ ಅಪಾರ ಕಲ್ಲಿದ್ದಲು ಸಂಪತ್ತಿದ್ದರೂ ಕೂಡ ದ-ಆಫ್ರಿಕಾ ಮೊದಲಾದ ದೇಶಗಳಿಂದ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಬಯಸಿತು. ಕಲ್ಲಿದ್ದಲನ್ನು ಮಿತವಾಗಿ ಬಳಸುವ ಉತ್ತಮ ತಂತ್ರಜ್ಞಾನವನ್ನು ಉಪಯೋಗಿಸುವುದಾದರೂ ಕೂಡ ಕಲ್ಲಿದ್ದಲ ಮೇಲೆ ಅತಿಯಾದ ವೆಚ್ಚವನ್ನು ತೋರಿಸಿತು. ತೆಗೆದುಕೊಳ್ಳುವ ಸಾಲಕ್ಕೆಲ್ಲಾ ನೀಡಬೇಕಾದ ಬಡ್ಡಿಗಿಂತ ಹೆಚ್ಚು ಬಡ್ಡಿ ಕೊಡಬೇಕಾಗಿ ಬರುವುದಾಗಿ ತೋರಿಸಿತು.

ಜಿ.ಎನ್.ನಾಗರಾಜ್



ಇಂತಹ ಅನೇಕ ಕಾರಣಗಳಿಗಾಗಿ ಅದು ತೋರಿಸಿದ ವೆಚ್ಚ 4387 ಕೋಟಿ ರೂ.ಗಳು. ಇದು ಮಹಾರಾಷ್ಟ್ರದ ಎನ್ರಾನ್ ಯೋಜನೆಗಿಂತಹೆಚ್ಚು ವೆಚ್ಚದ್ದು. ಅಮೆರಿಕದಲ್ಲಿ ಇದೇ ರೀತಿಯ ಒಂದು ವಿದ್ಯುತ್ ಕೇಂದ್ರವವನ್ನು ನಿರ್ಮಿಸಿದರೆ ಆಗುವ ವೆಚ್ಚಕ್ಕಿಂತ 1300 ಕೋಟಿ ರೂ. ಹೆಚ್ಚು ವೆಚ್ಚದ್ದು. ಇಂತಹ ಯೋಜನೆಯಲ್ಲಿ ನಿರ್ಮಾಣ ವೆಚ್ಚವೇ ಶೇ 40 ರಷ್ಟು ಇರುತ್ತದೆ. ಭಾರತದಲ್ಲಿ ಕಟ್ಟಡ ಕಟ್ಟುವ ಕೂಲಿ ಅಮೆರಿಕಕ್ಕಿಂತ ಎಷ್ಟೋ ಪಾಲು ಕಡಿಮೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅದರ ಜೊತೆಗೆ ಭಾರತದ್ದೇ ಆದ ಬಿಎಚ್‌ಇಎಲ್ ಕಂಪನಿ ಜಾಗತಿಕ ಮಟ್ಟದ ತಂತ್ರಜ್ಞಾನದ ಯಂತ್ರಗಳನ್ನು ಜಗತ್ತಿನಲ್ಲೇ ಅತ್ಯಂತ ಕಡಿಮೆ ಬೆಲೆಗೆ ಒದಗಿಸುವುದರಲ್ಲಿ ಪ್ರಸಿದ್ಧವಾಗಿದೆ. ಅನೇಕ ಅರಬ್ ಹಾಗೂ ಆಫ್ರಿಕಾ ದೇಶಗಳಲ್ಲಿ ಇದೇ ಜನರಲ್ ಎಲೆಕ್ಟ್ರಿಕಲ್ ಮೊದಲಾದ ಜಗತ್ತಿನ ಪ್ರಸಿದ್ಧ ಕಂಪನಿಗಳೊಂದಿಗೆ ಸ್ಪರ್ಧಿಸಿ ಟೆಂಡರ್ ಗೆದ್ದು ಕೊಂಡಿದೆ. ಈ ಯಂತ್ರಗಳನ್ನು ಬಳಸಿಕೊಂಡರೆ ವೆಚ್ಚ ಇನ್ನೂ ಕಡಿಮೆಯಾಗುತ್ತದೆ.

ಒಟ್ಟಿನಲ್ಲಿ ವೆಚ್ಚ 3,000 ಕೋಟಿಗಿಂತ ಕಡಿಮೆಯಾಗಬೇಕು. ಅಂದರೆ ಮೆಗಾವಾಟಿಗೆ 2.5-3.0 ಕೋಟಿ ರೂ. ಆಗುವುದಕ್ಕೆ ಬದಲಾಗಿ ಮೆಗಾವಾಟಿಗೆ 4.4 ಕೋಟಿ ರೂ. ವೆಚ್ಚ ತೋರಿಸಿದರು. ಈ ವೆಚ್ಚವನ್ನು ಕಣ್ಮುಚ್ಚಿ ಒಪ್ಪಿಕೊಂಡು ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಹಾಕಿದ ಸರ್ಕಾರದ ಬಗ್ಗೆ ಪ್ರಶ್ನೆಗಳು ಎದ್ದವು. ಸಿಪಿಐ(ಎಂ) ಪಕ್ಷ ಕರ್ನಾಟಕದಲ್ಲಿ ವಿಚಾರಸಂಕಿರಣ, ಸಮಾವೇಶಗಳನ್ನು ನಡೆಸಿತು, ಚಳುವಳಿ ಹೂಡಿತು. ಅನೇಕ ತಜ್ಞರು ಈ ಒಪ್ಪಂದವನ್ನು ವಿಶ್ಲೇಷಿಸಿ ಟೀಕಿಸಿದರು. ಇವುಗಳೆಲ್ಲದರ ನಂತರ ಕೊಜೆಂಟ್ರಿಕ್ಸ್ ಕಂಪನಿ ವೆಚ್ಚವನ್ನು 3200 ಕೋಟಿ ರೂ. ತಗ್ಗಿಸಲು ಒಪ್ಪಿತು. ಅಂದರೆ 1187 ಕೋಟಿ ಸುಳ್ಳು ವೆಚ್ಚವೆಂದು ಅದೇ ಒಪ್ಪಿಕೊಂಡಂತಾಯಿತು. ನಂತರ ಕೇಂದ್ರ ಸರ್ಕಾರ ಈ ಕಂಪನಿಗೆ ಶೇ 16 ರ ಲಾಭವನ್ನು ಖಾತರಿ ಮಾಡುವ ಕೌಂಟರ್ ಗ್ಯಾರಂಟಿ ಕೂಡ ನೀಡಿತು.

ಕರ್ನಾಟಕ ಸರ್ಕಾರ ಕೂಡ 'ಬಾರೇ ಎನ್ನುವುದಕ್ಕೆ ಅವಳೇ ಇಲ್ಲ, ಮಗನ ಹೆಸರು ರಾಮಕೃಷ್ಣ' ಎನ್ನುವಂತೆ ಮಂಗಳೂರಿನಿಂದ 1000 ಮೆ.ವಾ. ವಿದ್ಯುತ್ ಅನ್ನು ಸಾಗಾಣಿಕೆ ಮಾಡುವ ವಿದ್ಯುತ್ ಲೈನ್ ನಿರ್ಮಿಸಲು ಇಂಗ್ಲೆಂಡಿನ ಕಂಪನಿಯೊಂದರ ಜೊತೆ ಒಪ್ಪಂದ ಕೂಡ ಮಾಡಿಕೊಂಡಿತು.

ಆದರೂ ಕೂಡ ಕೊಜೆಂಟ್ರಿಕ್ಸ್ ಕಂಪನಿ ನಿರ್ಮಾಣ ಕೆಲಸ ಆರಂಭಿಸಲೇ ಇಲ್ಲ. ಅದಕ್ಕೆ ಇದ್ದ ಪ್ರಮುಖ ಕಾರಣಗಳಲ್ಲೊಂದು ಕೊಜೆಂಟ್ರಿಕ್ಸ್ ಕಂಪನಿಗೆ ಲಾಭದಾಯಕವಾದ ದರದಲ್ಲಿ ವಿದ್ಯುತ್ ಅನ್ನು ಕೊಳ್ಳಬೇಕಾದರೆ ಕರ್ನಾಟಕದ ವಿದ್ಯುತ್ ದರಗಳನ್ನು ಏರಿಸಬೇಕು, ಕೃಷಿಗೆ, ಭಾಗ್ಯಜ್ಯೋತಿಗೆ ನೀಡುವ ಸಹಾಯಧನವನ್ನು ಕಿತ್ತುಹಾಕಬೇಕು ಎನ್ನುವುದು ಅವರ ಬಯಕೆಯಾಗಿತ್ತು. ಅದನ್ನು ಸಾಧಿಸಲು ಕರ್ನಾಟಕದ ಜನತೆ ಬಿಡಲಿಲ್ಲವಾದ್ದರಿಂದ ನಾವು ಕರ್ನಾಟಕದ ಜನರನ್ನು ಲೂಟಿ ಮಾಡಲು ಸಾಧ್ಯವಿಲ್ಲ ಎಂದು ಮನವರಿಕೆಯಾಗಿ ಈ ಕಂಪನಿ ಕೊನೆಗೂ ಜಾಗ ಖಾಲಿ ಮಾಡಿತು.

ಆಲಮಟ್ಟಿ ಜಲ ವಿದ್ಯುದಾಗಾರ

ಅಮೂಲ್ಯ ಹಾಗೂ ತವಕಲ್ ಬಳಿ ಜಲವಿದ್ಯುತ್ ತಯಾರಿಸಲು ಟ್ಯಾಪ್‌ಕೋ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಅವರು ನೀಡಿದ ನಿರ್ಮಾಣ ವೆಚ್ಚ 1450 ಕೋಟಿ ರೂ. ಅತ್ಯಂತ ಅಗ್ಗದ ದರದಲ್ಲಿ ಉತ್ಪಾದಿಸುವ ಜಲ ವಿದ್ಯುತ್‌ಗೆ ಕೂಡ ಥರ್ಮಲ್ (ಶಾಖೋತ್ಪನ್ನ) ಕೇಂದ್ರದಷ್ಟೇ ವೆಚ್ಚ ತೋರಿಸುತ್ತಿದ್ದಾರೆ ಎಂದು ಎಲ್ಲರೂ ಮಾತನಾಡಿಕೊಳ್ಳುವಂತಾಗಿತ್ತು. ಇದೇ ಯೋಜನೆಯನ್ನು ಕರ್ನಾಟಕ ವಿದ್ಯುತ್ ನಿಗಮ ಮೇಲೆ ಸೂಚಿಸಿದ ವೆಚ್ಚದ ಅರ್ಧಕ್ಕಿಂತ ಕಡಿಮೆ ವೆಚ್ಚದಲ್ಲಿ ಅಂದರೆ 715 ಕೋಟಿ ರೂ. ನಿರ್ಮಿಸಿ ಕೊಡಲು ಮುಂದೆ ಬಂದಿತು. ಕರ್ನಾಟಕ ಸರ್ಕಾರ ಈ ವಿದೇಶಿ ಕಂಪನಿಗೆ ನಿಮ್ಮ ಸಹವಾಸ ಸಾಕು ಎಂದು ಕೈ ಮುಗಿದು ಸಾಗಹಾಕಿತು.

ಹೀಗೆ ಅತಿ ಲಾಭದ ದುರಾಸೆ, ಅದಕ್ಕಾಗಿ ವೆಚ್ಚದ ಲೆಕ್ಕಗಳಲ್ಲಿ ಮೋಸಗಾರಿಕೆ, ಅದರಿಂದ ವಿದ್ಯುತ್ ದರಗಳನ್ನು ಏರಿಸಬೇಕೆಂಬ ಒತ್ತಾಯ ಮತ್ತು ಅವಶ್ಯಕತೆ ಇವೇ ಈ ವಿದೇಶಿ ಖಾಸಗಿ ಕಂಪನಿಗಳ ಸಹವಾಸದಿಂದ ಲಭಿಸಿದ್ದು. ಒಟ್ಟಿನಲ್ಲಿ ಮಾಡಿಕೊಂಡ 21 ಒಪ್ಪಂದಗಳಲ್ಲಿ ಕೆಲವಾದರೂ ಸಾಕಾರಗೊಂಡಿದ್ದರೆ 6-7000 ಮೆ.ವಾ.ವಿದ್ಯುತ್ ಅಧಿಕ ಉತ್ಪಾದನೆಯಾಗಿ ಕರ್ನಾಟಕದಲ್ಲಿ ವಿದ್ಯುತ್ ಪ್ರವಾಹಕ್ಕೆ ನಾಂದಿಯಾಗುತ್ತಿತ್ತು. ಬದಲಾಗಿ ವಿದ್ಯುತ್ ಕ್ಷಾಮಕ್ಕೆ ಕಾರಣವಾಯಿತು. 97-98 ರ ವೇಳೆಗೆ ಈ ಕ್ಷಾಮ ಕೊರತೆ ತೀವ್ರವಾದಾಗ ಸರ್ಕಾರ ನಿದ್ದೆಯಿಂದ ಎದ್ದಂತೆ ಎಚ್ಚತ್ತುಕೊಂಡಿತು. ಸರ್ಕಾರಿವಲಯದಲ್ಲಿ ಆಗಲೇ ರೂಪುಗೊಂಡಿದ್ದ ಆದರೆ ಖಾಸಗೀ ವಲಯದೊಡನೆ ನಡೆಸುತ್ತಿದ್ದ ಚೆಕ್ಕಂದದಲ್ಲಿ ಮೂಲೆಗೆ ಹಾಕಿದ್ದ ಯೋಜನೆಗಳನ್ನು ಕೈಗೆತ್ತಿಕೊಂಡು ಅವುಗಳಿಗೆ ಬಜೆಟ್‌ನಿಂದ ಹಣ ಹೂಡಿಕೆ ಮಾಡಿತು.

ಕೆಲವೇ ತಿಂಗಳುಗಳಲ್ಲಿ ರಾಯಚೂರು ಥರ್ಮಲ್ ವಿದ್ಯುತ್ ಯೋಜನೆಯ 5, 6, 7ನೇಯ ಘಟಕಗಳು ನಿರ್ಮಾಣವಾಗಿ ಕರ್ನಾಟಕದ ವಿದ್ಯುತ್ ಬರವನ್ನು ನಿವಾರಿಸಿವೆ.

ತಣ್ಣೀರು ಬಾವಿ, ರಾಯಲಸೀಮಾ, ಟಾಟಾ ಕಂಪನಿಗಳು

ಆದರೆ ಅದೇ ಸಮಯದಲ್ಲಿ ತುರ್ತು ವಿದ್ಯುತ್ ಉತ್ಪಾದನೆಗಾಗಿ ಕೆಲವು ಸಣ್ಣ ಹಾಗೂ ಮಧ್ಯಮ ಪ್ರಮಾಣದ ವಿದ್ಯುತ್ ಕೇಂದ್ರಗಳಿಗಾಗಿ ಖಾಸಗಿ ಕಂಪನಿಗಳೊಂದಿಗೆ ಸರ್ಕಾರ ಒಪ್ಪಂದ ಮಾಡಿಕೊಂಡಿತು. ಈ ಕಂಪನಿಗಳೂ ಕೂಡ ಅಲ್ಪ ಪ್ರಮಾಣದಲ್ಲಿ ವಿದ್ಯುತ್ ತಯಾರಿಕೆ ಆರಂಭಿಸಿವೆ. ಇವುಗಳಲ್ಲಿ ದ.ಕನ್ನಡ ಜಿಲ್ಲೆಯ ತಣ್ಣೀರು ಬಾವಿ-220 ಮೆ.ವಾ., ಬಳ್ಳಾರಿ ಜಿಲ್ಲೆಯ ರಾಯಲಸೀಮಾ 37.8 ಮೆ.ವಾ., ಜಿಂದಾಲ್ 130 ಮೆ.ವಾ., ಬೆಳಗಾಂನ ಟಾಟಾ - 81. ಮೆ.ವಾ. ಮುಖ್ಯವಾದವು. ಆದರೆ ಈ ಕಂಪನಿಗಳ ವಿದ್ಯುತ್ ಎಷ್ಟು ದುಬಾರಿ ಎಂಬುದನ್ನು ಕೆಳಗಿನ ಪಟ್ಟಿ ಸಾಬೀತು ಪಡಿಸುತ್ತದೆ. ಕೆ.ಪಿ.ಟಿ.ಸಿ.ಎಲ್. ದಾಖಲೆಗಳೇ ಒದಗಿಸುವ ದರಗಳು ಇವು.

ಜಲ ವಿದ್ಯುತ್ ಯೋಜನೆಗಳು

ಕೆಪಿಟಿಸಿಎಲ್ ನ ವಿದ್ಯುತ್ ದರ ಖರೀದಿ ದರ (ರೂ.ಗಳಲ್ಲಿ)

ಶರಾವತಿ	0.13	ಚಕ್ರಾ ಯೋಜನೆ	0.28
ಘಟಪ್ರಭಾ	0.68	ಭದ್ರಾ	0.13
ನಾಗಝರಿ	0.36	ಕದ್ರಾ	1.50
ಲಿಂಗನಮಕ್ಕಿ	0.21	ಸೂಪಾ	0.36
ಕೊಡಸಾಲಿ	1.23	ವಾರಾಹಿ	0.56

ರಾಯಚೂರು ಥರ್ಮಲ್ ಪ್ಲಾಂಟ್

1 ಮತ್ತು 2	1.46
3	1.67
4	2.67
5	2.46
6	2.46
7	2.40

ಖಾಸಗಿ ಕಂಪನಿಗಳು

ತಣ್ಣೀರು ಬಾವಿ	3.57
ರಾಯಲಸೀಮಾ	3.80
ಜಿಂದಾಲ್	2.38
ಟಾಟಾ	4.13

ಪುಟ 10 ಕ್ಕೆ

ತ್ರಿಪುರಾದಲ್ಲಿ ವಿಧಾನಸಭೆಗೆ ಮತದಾನ ಹತ್ತಿರವಾಗುತ್ತಿದೆ. ಈ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಬುಡಮೇಲುಗೊಳಿಸಲು ಕಾಂಗ್ರೆಸ್ ಮತ್ತು ದೇಶದ್ರೋಹಿ ಉಗ್ರಗಾಮಿ ಶಕ್ತಿಗಳು ಆಕ್ರಮಣ ತೀವ್ರಗೊಳಿಸಿವೆ. ಎಡರಂಗದ ಕಾರ್ಯಕರ್ತರನ್ನು, ವಿವಿಧ ಜನಾಂಗಗಳ ಜನರನ್ನು ಹತ್ಯೆಗೈಯುತ್ತಿ*. ಅಲ್ಲಿನ ಗಂಭೀರ ಸನ್ನಿವೇಶ, ದೇಶದ ಸಮಗ್ರತೆಗಾಗಿ ತ್ಯಾಗ ಬಲಿದಾನಗಳು ಮತ್ತು ಇವುಗಳ ನಡುವೆಯೂ ಎಡರಂಗದತ್ತ ಜನರ ಅಪಾರ ಬೆಂಬಲ ಮುಂತಾದವುಗಳನ್ನು ಅಲ್ಲಿಗೆ ಭೇಟಿ ನೀಡಿ, ಪ್ರಚಾರಾಂದೋಲನದಲ್ಲಿ ಭಾಗವಹಿಸಿದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ವಿಶ್ಲೇಷಿಸಿದ್ದಾರೆ.



ತ್ರಿಪುರಾ ಚುನಾವಣೆಗಳು

ಭಯೋತ್ಪಾದನೆಯ ವಿರುದ್ಧ ಧೀರ ಸಮರ

ಪ್ರಕಾಶ್ ಕಾರಟ್

ತ್ರಿಪುರಾ ವಿಧಾನಸಭೆಗೆ ಫೆಬ್ರವರಿ 26 ರಂದು ಚುನಾವಣೆ ನಡೆಯಲಿದೆ. ಚುನಾವಣಾ ಪ್ರಚಾರ ಭರದಿಂದ ಸಾಗಿದೆ. ಮೊದಲನೇ ಸುತ್ತಿನ ಪ್ರಚಾರ ಮುಗಿವ ವೇಳೆಗೆ ಎರಡು ಅಂಶಗಳು ಸ್ಪಷ್ಟವಾಗಿವೆ - ಒಂದು, ಕಾಂಗ್ರೆಸ್ - ಐಎನ್‌ಪಿಟಿ - ಎನ್‌ಎಲ್‌ಎಫ್‌ಟಿಯ ಕೂಟದ ನಿಜ ಸ್ವರೂಪ ಬಯಲಾಗಿದೆ; ಎರಡು 1993 ಹಾಗೂ 1998 ರ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಎಡರಂಗಕ್ಕೆ ಗೆಲುವು ತಂದುಕೊಟ್ಟ ಜನ ಬೆಂಬಲ ಎಳ್ಳಷ್ಟೂ ಕಡಿಮೆಯಾಗಿಲ್ಲ.

ಕಾಂಗ್ರೆಸ್‌ಗೆ ಮುಜುಗರ

ಐಎನ್‌ಪಿಟಿ (ಅಂದರೆ ತ್ರಿಪುರಾ ಸ್ಥಳೀಯ ರಾಷ್ಟ್ರೀಯವಾದಿ ಪಕ್ಷ) ಎಂಬ ಹೆಸರಿನ ಪಕ್ಷದೊಂದಿಗೆ ಕಾಂಗ್ರೆಸ್ ಚುನಾವಣಾ ಮೈತ್ರಿ ಮಾಡಿಕೊಂಡಿದೆ. ಈ ಪಕ್ಷ ಎನ್‌ಎಲ್‌ಎಫ್‌ಟಿ (ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗ) ಎಂಬ ನಿಷೇಧಿತ ಸಂಘಟನೆಯ ರಾಜಕೀಯ ಪಕ್ಷ. ಈ ರಂಗ ಮತ್ತು ಇತರ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಪರಿಣಾಮಕಾರಿ ಕಾರ್ಯಾಚರಣೆ ನಡೆಸುತ್ತಿರುವ ತ್ರಿಪುರಾ ಸ್ಟೇಟ್ ರೈಫಲ್ಸ್ (ಟಿ.ಎಸ್.ಆರ್.) ಎಂಬ ಅರೆ ಸೈನಿಕ ಪಡೆಗಳ ವಿರುದ್ಧ ಈ ಸಂಘಟನೆಗಳು ಕಿಡಿಕಾರುತ್ತಿವೆ. ಕಾಂಗ್ರೆಸ್ ಕೂಡಾ ಅದಕ್ಕೆ ದನಿಗೂಡಿಸಿದೆ. ಏಕೆಂದರೆ ರಾಜ್ಯದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಶಾಂತಿ ಕೆಡಿಸಲು ಎನ್‌ಎಲ್‌ಎಫ್‌ಟಿ ಸಂಪೂರ್ಣ ಅವಕಾಶವಿರಬೇಕು ಎಂಬುದು ಈ ಕೂಟದ ಆಶಯ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಮಣಿಶಂಕರ್ ಅಯ್ಯರ್ ನೇತೃತ್ವದಲ್ಲಿ ಕಾಂಗ್ರೆಸ್-ಐಎನ್‌ಪಿಟಿ ಮುಖಂಡರು ರಾಜ್ಯಪಾಲರಿಗೆ, ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿದ್ದಾರೆ. ಉಗ್ರಗಾಮಿ ಚಟುವಟಿಕೆಗಳ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಟಿ.ಎಸ್.ಆರ್. ವಿರುದ್ಧ ಐಎನ್‌ಪಿಟಿಯ ಆಕ್ರೋಶ ಸಹಜ. ಆದರೆ ಕಾಂಗ್ರೆಸ್‌ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕೂಡಾ ಇದೇ ನಿಲುವನ್ನು ಪ್ರತಿಧ್ವನಿಸುವುದು ಆಘಾತಕರ ಅಂಶ. ಎಡರಂಗವನ್ನು ಅಧಿಕಾರದಿಂದ ಇಳಿಸುವ ಪ್ರಯತ್ನದಲ್ಲಿ ಕಾಂಗ್ರೆಸ್ ಎಷ್ಟು ಕೆಳಗಿಳಿಯಬಲ್ಲದು ಎಂಬುದಕ್ಕೆ ಇದು ಉದಾಹರಣೆ.

ಸಿಪಿಐ(ಎಂ) ಚುನಾವಣಾ ಪ್ರಚಾರ ಸಮಯದಲ್ಲಿ ಈ ಕಾಂಗ್ರೆಸ್ -ಐಎನ್‌ಪಿಟಿ ಮುಖಂಡರಿಗೂ ಎನ್‌ಎಲ್‌ಎಫ್‌ಟಿಗೂ ಇರುವ ಸಂಪರ್ಕಗಳ ಬಗ್ಗೆ ಇನ್ನಷ್ಟು ಪುರಾವೆ ಗಳನ್ನು ಮುಂದಿಟ್ಟಿದೆ. ಬಾಂಗ್ಲಾದೇಶ ಗಡಿಯ ಬಳಿ ಐಎನ್‌ಪಿಟಿ ಮುಖಂಡರು ಮತ್ತು ಎನ್‌ಎಲ್‌ಎಫ್‌ಟಿ ಮುಖಂಡರ ನಡುವೆ ನಡೆದ ಭೇಟಿಗಳ ನಿರ್ದಿಷ್ಟ ವಿವರಗಳನ್ನು ನೀಡಲಾಗಿದೆ.

ಬಿಜೊಯ್ ಹ್ರಾಂಗ್ ಶಾವ್ಲ್ ಈಗ ಯಾವುದೇ ಪ್ರತ್ಯೇಕತಾವಾದಿ ಭಾವನೆಗಳನ್ನು ಹೊಂದಿಲ್ಲ ಎಂದು ಹೇಳುತ್ತಾ ಬಂದಿರುವ ಕಾಂಗ್ರೆಸ್ ಮುಖಂಡರಿಗೆ ಫೆಬ್ರವರಿ 4 ಆತನ ಭಾಷಣ ಬಹಳ ಮುಜುಗರ ತಂದಿದೆ. ಚುನಾವಣೆಗಳ ನಂತರ ಕಾಂಗ್ರೆಸ್-ಐಎನ್‌ಪಿಟಿ ಕೂಟ ಗೆದ್ದರೆ 'ಸ್ವಾಧೀನ ತ್ರಿಪುರಾ' ರಚಿಸಲಾಗುವುದು ಎಂದು ಆತ ಆ ಭಾಷಣದಲ್ಲಿ ಒತ್ತಿ ಹೇಳಿದ್ದಾನೆ.

ಎಡರಂಗಕ್ಕೆ ಬೆಂಬಲ

ತ್ರಿಪುರಾದದಲ್ಲಿ ಚುನಾವಣಾ ಪ್ರಚಾರದ ವೇಳೆ ಸಿಪಿಐ(ಎಂ) ಮತ್ತು ಎಡರಂಗಕ್ಕೆ ಬೃಹತ್ ಬೆಂಬಲ ಕಂಡು ಬಂದಿದೆ. ಸಾಮಾನ್ಯವಾಗಿ ಹೇಳಲಾಗುವ 'ಅಧಿಕಾರಸ್ಥರ ಪಕ್ಷದ ವಿರುದ್ಧ ಭಾವನೆ' ದೇಶದ ಇತರ ಭಾಗಗಳಲ್ಲಿ ಕಂಡು ಬಂದರೂ ಪಶ್ಚಿಮ ಬಂಗಾಳದಲ್ಲಿ ಕಂಡು ಬಂದಿರಲಿಲ್ಲ. ಇಲ್ಲೂ ಕಾಣ ಬರುತ್ತಿಲ್ಲ. 1978 ರಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ನಂತರ ಎಡರಂಗ 1988 ರಿಂದ ಐದು ವರ್ಷದ ಮಾತ್ರವೇ ಅಧಿಕಾರದಿಂದ ಹೊರಗುಳಿಯಿತು. 1988 ರಲ್ಲಿ ಇಡೀ ರಾಜ್ಯವನ್ನು ಗಲಭೆ ಪೀಡಿತ ಎಂದು ಘೋಷಿಸಿ ಕಾಂಗ್ರೆಸ್ ವ್ಯಾಪಕ ಮೋಸದಿಂದ ಚುನಾವಣೆಗೆದ್ದಿತು. ಆದರೆ ಮುಂದಿನ ಚುನಾವಣೆಗಳಲ್ಲಿ ಸೋತಿತು. ಈ ಬಾರಿ ಅಧಿಕಾರಕ್ಕೆ ಮರಳಿದರೆ ಎಡರಂಗ ಐದನೇ ಬಾರಿಗೆ ಅಧಿಕಾರಕ್ಕೆ ಬಂದಂತಾಗುತ್ತದೆ.

ಅತ್ಯುತ್ತಮ ರಾಜ್ಯ

ಈಶಾನ್ಯ ಭಾರತದಲ್ಲಿ ತ್ರಿಪುರಾ ಅತ್ಯುತ್ತಮ ಆಡಳಿತವಿರುವ ರಾಜ್ಯ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಕಳೆದ ಐದು ವರ್ಷಗಳಲ್ಲಿ ಮಾಣಿಕ್ ಸರ್ಕಾರ್ ನೇತೃತ್ವದ ಸರಕಾರದ ಉತ್ತಮ ಕಾರ್ಯನಿರ್ವಹಣೆಯಿಂದಾಗಿ ವ್ಯಾಪಕ ಜನಬೆಂಬಲ, ಗೌರವಗಳಿಸಿದೆ. 1998 ರಿಂದ 2000 ರ ನಡುವೆ ರಾಜ್ಯದ ತಲಾ ಆದಾಯದಲ್ಲಿ 14.85 ಶೇ., ಒಟ್ಟು ಆದಾಯದಲ್ಲಿ 14.95 ಶೇ. ಬೆಳವಣಿಗೆ ಕಂಡುಬಂದಿದೆ. ಭತ್ತದ ಉತ್ಪಾದನೆ 13.5 ಶೇ. ಹೆಚ್ಚಿದೆ. ಯೋಜನಾ ವೆಚ್ಚದ ಬಳಕೆ ಮತ್ತು ಕೇಂದ್ರೀಯ ಯೋಜನೆಗಳ ಅನುಷ್ಠಾನದಲ್ಲಿ ತ್ರಿಪುರಾದ ದಾಖಲೆ ಸರ್ವೋತ್ತಮವೆನಿಸಿದೆ.

ಇಂತಹ ಜನ ಬೆಂಬಲವನ್ನು ವಿಫಲಗೊಳಿಸಲೆಂದೇ ಸಿಪಿಐ(ಎಂ) ಮುಖಂಡರ, ಕಾರ್ಯಕರ್ತರ ಕೊಲೆ- ಸುಲಿಗೆಗಳು ಇದ್ದಕ್ಕಿದ್ದಂತೆ ಹೆಚ್ಚಿವೆ. ತ್ರಿಪುರಾದಲ್ಲಿ ಈಗ ನಡೆಯುತ್ತಿರುವ ಹಿಂಸಾಚಾರಗಳಿಗೆ ಸಿಪಿಐ(ಎಂ)ನದ್ದೇ ಹೊಣೆ ಎಂದು ಕಾಂಗ್ರೆಸ್ ಆಪಾದಿಸುತ್ತಿದೆ. ಆದರೆ ಈ ಹಿಂಸಾಚಾರಕ್ಕೆ ಬಲಿಯಾಗುತ್ತಿರುವುದು ಸಿಪಿಐ(ಎಂ) ಸದಸ್ಯರು, ಬೆಂಬಲಿಗರು ಮಾತ್ರ ಏಕೆ ಎಂದು ಉತ್ತರಿಸಲು ಅದಕ್ಕಾಗುತ್ತಿಲ್ಲ. ಅದರ ಹೀನ ಪ್ರಯತ್ನ ಇಲ್ಲಿ ಕಾಣುತ್ತದೆ.

ಬಲಿದಾನಗಳ ವೀರಗಾಥೆ

ಚುನಾವಣೆ ಘೋಷಣೆಯಾದಂದಿನಿಂದ ಫೆಬ್ರವರಿ 18 ರ ವರೆಗೆ 30 ಸಿಪಿಐ(ಎಂ) ಸದಸ್ಯರು, ಬೆಂಬಲಿಗರ ಕೊಲೆಯಾಗಿದೆ. ಇದರಲ್ಲಿ 11 ಮಂದಿ ಬಂಕಿಮ್ ನಗರ ಸಾಮೂಹಿಕ ಹತ್ಯೆಯಲ್ಲಿ ಬಲಿಯಾದ ಬಂಗಾಲಿಗಳು, ಉಳಿದವರೆಲ್ಲಾ ಬುಡಕಟ್ಟು ಕಾರ್ಯಕರ್ತರು ಮತ್ತು ಅವರ ಕುಟುಂಬದ ಸದಸ್ಯರುಗಳು.

ಚುನಾವಣೆಗಳು ಮುಗಿದ ನಂತರ ಎದ್ದುಕಾಣುವ ಸಂಗತಿಯೆಂದರೆ ದೂರದ ಬುಡಕಟ್ಟು ಪ್ರದೇಶಗಳಲ್ಲಿ ವಾಸಿಸುತ್ತಿರುವ ನೂರಾರು ಸಿಪಿಐ(ಎಂ) ಕಾರ್ಯಕರ್ತರ ಧೈರ್ಯ ಮತ್ತು ದೃಢ ನಿರ್ಧಾರ. ಇವರೆಲ್ಲಾ ಸಿಪಿಐ(ಎಂ), ಗಣಮುಕ್ತಿ ಪರಿಷದ್ ಅಥವಾ ನಾರೀ ಸಮಿತಿ (ಮಹಿಳಾಸಂಘಟನೆ)ಗೆ ದುಡಿಯುತ್ತಿರುವವರು. ತಮ್ಮನ್ನು ಅಥವಾ ತಮ್ಮ ಕುಟುಂಬದ ಸದಸ್ಯರ ಮೇಲೆ ಯಾವಾಗಬೇಕಾದರೂ ಹಲ್ಲೆ ನಡೆಯಬಹುದು ಎಂಬ ಪೂರ್ಣ ಅರಿವಿನೊಂದಿಗೆ ದುಡಿಯುತ್ತಿರುವವರು ಇವರು. ಸಾವು ಇವರ ನಿರಂತರ ಸಂಗಾತಿಯಾಗಿದ್ದರೂ ಪಕ್ಷದ ಸಂದೇಶವನ್ನು ಜನಗಳ ನಡುವೆ ಒಯ್ಯುತ್ತಿರುವ ಈ ಸಂಗಾತಿಗಳ ತ್ಯಾಗವನ್ನು ವರ್ಣಿಸುವುದು ಕಷ್ಟ. ಇಂತಹ ಸಮರ್ಪಿತ, ಧೀರ ಕಾರ್ಯಕರ್ತರನ್ನು ಪಡೆದ ತ್ರಿಪುರಾ ಧನ್ಯ.

ತ್ರಿಪುರಾ ಜನತೆಯ ಇಚ್ಛೆ ಮತ್ತು ಕಾಂಗ್ರೆಸ್-ಐಎನ್‌ಪಿಟಿ ಹಿಡಿತದಲ್ಲಿರುವ ಭಯೋತ್ಪಾದಕ ಯಂತ್ರ ಈಗ ಇಲ್ಲಿ ಮುಖಾಮುಖಿ ನಿಂತಿವೆ. ಫೆಬ್ರವರಿ 26 ರ ಮೊದಲು ಪ್ರಚಾರದ ಕೊನೆಯ ಘಟ್ಟದಲ್ಲಿ ಹಿಂಸಾಚಾರ ಹೆಚ್ಚಿಸಿ, ಜನಾಂಗೀಯ ಘರ್ಷಣೆ ಉಂಟು ಮಾಡುವ ಪ್ರಯತ್ನಗಳೂ ನಡೆಯಲಿವೆ. ಈ ದುಷ್ಟ ಯೋಜನೆಗಳನ್ನು ವಿಫಲಗೊಳಿಸಿ ಜನತೆ ತಮ್ಮ ಆಯ್ಕೆಯನ್ನು ಮುಕ್ತವಾಗಿ ಚಲಾಯಿಸಲು ಅವಕಾಶ ನೀಡಬೇಕು. ಹಾಗಾದರೆ ಎಡರಂಗ ಮತ್ತೆ ಜನತೆಯ ತೀರ್ಪುಗಳಿಸಿ ಅಧಿಕಾರಕ್ಕೆ ಬರುವುದರಲ್ಲಿ ಸಂದೇಹವಿಲ್ಲ. ○

ತ್ರಿಪುರಾದಲ್ಲಿ ಬೃಹತ್ ಎಡರಂಗದ ರ‍್ಯಾಲಿಗಳು

ತ್ರಿಪುರಾದ ಎಡರಂಗದ ಸಂಗಾತಿಗಳು ಈಗ ವಿಚ್ಛಿದ್ರಕಾರಕ ಶಕ್ತಿಗಳಿಂದ ಪ್ರಜಾಪ್ರಭುತ್ವದ ರಕ್ಷಣೆಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದಾರೆ. ಫೆಬ್ರವರಿ 13 ರಂದು ತ್ರಿಪುರಾದ್ಯಂತ ಎಡರಂಗದ ಬೃಹತ್ ರ‍್ಯಾಲಿಗಳು ನಡೆದಿವೆ. ಇವು ತ್ರಿಪುರಾ ಚುನಾವಣೆಗಳನ್ನು ಹೈಜಾಕ್ ಮಾಡುವ ಕಾಂಗ್ರೆಸ್-ಉಗ್ರಗಾಮಿ ಕೂಟದ ಪ್ರಯತ್ನಗಳಿಗೆ ಭಾರಿ ಸವಾಲು ಒಡ್ಡಿವೆ. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್, ಬಿಮಾನ್ ಬಸು ಮತ್ತು ಮಾಣಿಕ್ ಸರ್ಕಾರ್ ಈ ರ‍್ಯಾಲಿಗಳನ್ನುದ್ದೇಶಿಸಿ ಮಾತನಾಡಿದರು.

ದಕ್ಷಿಣ ತ್ರಿಪುರಾದಲ್ಲಿ ನಡೆದ ಕೇಂದ್ರ ರ‍್ಯಾಲಿಯಲ್ಲಿ ಕಂಡುಬಂದ ಭಾವನೆ, ಅದರ ಗಾತ್ರ ವಿಜಯೋತ್ಸಾಹದ ರ‍್ಯಾಲಿಯನ್ನು ನೆನಪಿಸುವಂತಿತ್ತು. ಚುನಾವಣೆಗಳಿಗೆ ಇನ್ನೂ ಎರಡು ವಾರಗಳಿರುವಾಗ ಈ ಬೃಹತ್ ರ‍್ಯಾಲಿ ಕಾಂಗ್ರೆಸ್-ಐಎನ್‌ಪಿಟಿಯ ದುಷ್ಟ ಪಿತೂರಿಯ ವಿರುದ್ಧ ಎಡರಂಗಕ್ಕೆ ದೊರೆತಿರುವ ನೈತಿಕ ವಿಜಯವೆಂದೇ ಬಗೆಯಲಾಗಿದೆ.

ಈ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಪ್ರಕಾಶ್ ಕಾರಟ್ ರವರು ತ್ರಿಪುರಾ ಚುನಾವಣೆಗಳು ದೇಶದ ಐಕ್ಯತೆ ಮತ್ತು ಸಾರ್ವಭೌಮತೆಗೆ ಅಪಾಯ ತಂದಿರುವ ರಾಷ್ಟ್ರ-ವಿರೋಧಿ ಶಕ್ತಿಗಳ ವಿರುದ್ಧ ನಡೆದಿರುವ ದೊಡ್ಡ ಸಮಯದಲ್ಲಿ ಒಂದು ತಿರುಗುಬಿಂದಾಗಲಿದೆ ಎಂದರು.

ದೇಶದ ಐಕ್ಯತೆಗಾಗಿ ಹುತಾತ್ಮರಾದವರು

ತ್ರಿಪುರಾದಲ್ಲಿ ಚುನಾವಣೆ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದ ಸಂಗಾತಿಗಳ ಇತ್ತೀಚಿನ ಒಂದು ಪಟ್ಟಿ ಇಲ್ಲಿದೆ.

● ತಕರ್ಜಲ ಕ್ಷೇತ್ರದಲ್ಲಿ 80 ವರ್ಷದ ಹಿರಿಯ ಗಣಮುಕ್ತಿ ಪರಿಷದ್ ಕಾರ್ಯಕರ್ತ ಕಾಲಚಂದ್ರ ದೇಬ್‌ವರ್ಮಾ ಮತ್ತು ಅವರ 5 ವರ್ಷದ ಮೊಮ್ಮಗಳನ್ನು ಎನ್‌ಎಲ್‌ಎಫ್‌ಟಿ ಕೊಲೆಗಡುಕರು ಕೊಲೆಗೈದಿದ್ದಾರೆ. ಆತನ ಅಳಿಯ ಬುಧುದೇಬ್ ಬರ್ಮಾನನ್ನು ಹುಡುಕಿಕೊಂಡು ಈ ಕೊಲೆಗಡುಕರು ಬಂದಿದ್ದರು. ಏಕೆಂದರೆ ಬುಧು ಸಿಪಿಐ(ಎಂ) ಅಭ್ಯರ್ಥಿಯ ನಾಮಪತ್ರ ಸಲ್ಲಿಕೆಯ ಮೊದಲು ನಡೆದ ಮೆರವಣಿಗೆಯಲ್ಲಿ ಭಾಗವಹಿಸಿದ್ದ.

● ಸಿಪಿಐ(ಎಂ) ಬೆಂಬಲಿಗ ರವಿಬರ್ಮಾನ 15 ವರ್ಷದ ಮಗ ಸುಭಾಷ್ ಬರ್ಮಾನನ್ನು ಕೊಂಡೊಯ್ದು ಫೆಬ್ರವರಿ 12 ರಂದು ಕೊಲೆ ಮಾಡಲಾಯಿತು. ಏಕೆಂದರೆ ಈ ಇಡೀ ಕುಟುಂಬ ಜೊವ್ಯಾ ನಲ್ಲಿನ ಮಹಾರಾಣಿಪುರದಲ್ಲಿ ನಡೆದ ಎಡರಂಗದ ರ‍್ಯಾಲಿಯಲ್ಲಿ ಭಾಗವಹಿಸಿತ್ತು.

● ಪಕ್ಷದ ಒಬ್ಬ ಶಾಖಾ ಕಾರ್ಯದರ್ಶಿ ಬಿಕ್ರಂದಾ ತ್ರಿಪುರಾರನ್ನು ಗಂದಚ್ಚಾರದ ನತುನ್ ದಲಪತ್ಪಾರಾದಲ್ಲಿ ಎನ್‌ಎಲ್‌ಎಫ್‌ಟಿಯವರು ಗುಂಡಿಟ್ಟು ಕೊಂದರು. ಅದೇ ಪ್ರದೇಶದಲ್ಲಿ ಎನ್‌ಎಲ್‌ಎಫ್‌ಟಿಯವರು ತರಬಾನ್ ಶಾಲಿನಿಯ ಒಬ್ಬ ಕಟ್ಟಾ ಸಿಪಿಐ(ಎಂ) ಬೆಂಬಲಿಗ ರಾಜೇಂದ್ರ ತ್ರಿಪುರಾರನ್ನು ಪಕ್ಕದ ಕಾಡಿಗೆ ಎಳೆದೊಯ್ದು ಕೊಚ್ಚಿಹಾಕಿದರು.

● ಮಾಣಿಕಪುರದ ಒಬ್ಬ ಸಿಪಿಐ(ಎಂ) ಸದಸ್ಯ ಅಶ್ವನಿ ಕುಮಾರ್ ಚಕ್ಮಾರನ್ನು ಗುಂಡಿಟ್ಟು ಕೊಲ್ಲಲಾಯಿತು. ಏಕೆಂದರೆ ಆತ ಚೌಮಗು ವಿಧಾನಸಭಾ ಕ್ಷೇತ್ರದಲ್ಲಿ ಸಕ್ರಿಯವಾಗಿದ್ದನು. ಅದೇ ಪ್ರದೇಶದ ಇನ್ನೊಬ್ಬ ಪಾರ್ಟಿ ಸದಸ್ಯ ಕಿನ್‌ಧರ್ ಚಕ್ಮಾರನ್ನು ಅವರ ಮನೆಯಲ್ಲೇ ಗುಂಡಿಟ್ಟು ಕೊಲ್ಲಲಾಯಿತು. ಅವರು ಐಎನ್‌ಪಿಟಿ ರ‍್ಯಾಲಿಯಲ್ಲಿ ಸ್ಥಳೀಯ ಜನ ಭಾಗವಹಿಸದಂತೆ ಪ್ರಚಾರ ಮಾಡಿದ್ದರು ಎಂದು ಕುಪಿತರಾಗಿ ಈ ಕೊಲೆ ನಡೆಸಲಾಯಿತು.

ಈ ಪಟ್ಟಿ ಹೀಗೆ ಬೆಳೆಯುತ್ತಾ ಹೋಗುತ್ತದೆ. ತ್ರಿಪುರಾದ ಪ್ರಜಾಪ್ರಭುತ್ವವಾದಿ ಶಕ್ತಿಗಳು ಎಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗಿದೆ ಎಂಬುದನ್ನು ಇದು ತೋರಿಸುತ್ತದೆ.

ಕರ್ನಾಟಕ ವಿದ್ಯುತ್ ರಂಗ ಎತ್ತ ಸಾಗಿದೆ?

ಪುಟ 8 ರಿಂದ

ಈ ಮೇಲಿನ ಪಟ್ಟಿ ಎರಡು ವಿಷಯಗಳನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಒಂದು ಜಲ ವಿದ್ಯುತ್ ಥರ್ಮಲ್ ವಿದ್ಯುತ್‌ಗಿಂತ ಎಷ್ಟು ಅಗ್ಗ ಎಂಬುದು, ಎರಡು ಖಾಸಗಿ ಕಂಪನಿಗಳು ಸಾರ್ವಜನಿಕ ವಲಯದ ಕಂಪನಿಗಳಿಗಿಂತ ಒಂದೂವರೆ ಎರಡು ಪಟ್ಟು ದರ ಹೆಚ್ಚು.

ಕೆಪಿಟಿಸಿಎಲ್ ದರ ಏರಿಕೆಗಾಗಿ ಅರ್ಜಿ ಸಲ್ಲಿಸಿದಾಗ ಹಾಗೂ ಸರ್ಕಾರ ನಡೆಸಿದ ಸರ್ವಪಕ್ಷ ಸಭೆಗಳಲ್ಲಿ ಸ್ಪಷ್ಟವಾಗಿಯೇ ಹೇಳಿದೆ. ಖಾಸಗಿ ಕಂಪನಿಗಳಿಂದ ಹೆಚ್ಚಿದ ದರದಲ್ಲಿ ವಿದ್ಯುತ್ ಕೊಳ್ಳುವುದಕ್ಕಾಗಿಯೇ ದರ ಏರಿಕೆ ಹೆಚ್ಚು ಮಾಡಬೇಕು ಎಂದು.

ಹೀಗಾಗಿ ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆಗೂ ಹಾಗೂ ದರದ ವಿಪರೀತ ಏರಿಕೆಗೂ ಕೂಡ ಖಾಸಗೀಕರಣವೇ ಕಾರಣವಾಗಿದೆ.

ವಿದ್ಯುತ್ ಕಂಪನಿಗಳ ವಿಭಜನೆ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಖಾಸಗೀಕರಣ

ಖಾಸಗೀ ಕಂಪನಿಗಳ ಜೊತೆಯಲ್ಲಿ ಚಕ್ಕಂದ ಮಂತ್ರಿ ಮಾನ್ಯರುಗಳಿಗೆ, ಅಧಿಕಾರಿಗಳಿಗೆ ಅನೇಕ ಕಾರಣಗಳಿಗಾಗಿ ಬಹಳ ಪ್ರಿಯವಾಗಿರಬಹುದು. ಆದರೆ ಕರ್ನಾಟಕದ ಜನತೆಗೆ ಸಂಕಟಪ್ರಾಯವಾಗಿದೆ. ಆದರೂ ಕೂಡ ಕರ್ನಾಟಕ ಸರ್ಕಾರ ಇನ್ನಷ್ಟು ಖಾಸಗೀಕರಣ ಮತ್ತಷ್ಟು ಖಾಸಗೀಕರಣ ಎನ್ನುತ್ತಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಕಂಪನಿಯನ್ನಾಗಿ ಪರಿವರ್ತಿಸಿ ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮವಾಗಿಸಿದ ನಂತರ ಮತ್ತೆ ಅದನ್ನು ಒಡೆದು, ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳನ್ನು ಸೃಷ್ಟಿಸಿದೆ. ಬೆಂಗಳೂರಿನಲ್ಲಿ ಬೆಸ್ಕಾಂ, ಮಂಗಳೂರಿನಲ್ಲಿ ಮೆಸ್ಕಾಂ, ಗುಲ್ಬರ್ಗಾದಲ್ಲಿ ಗೆಸ್ಕಾಂ,ಹುಬ್ಬಳ್ಳಿಯಲ್ಲಿ ಹೆಸ್ಕಾಂ. ಇದನ್ನು ಜಾಗತಿಕ ಟೆಂಡರ್ ಕರೆದು ಈ ವರ್ಷದ ಅಂತ್ಯದೊಳಗಾಗಿ ಖಾಸಗೀಕರಿಸಲು ಹುನ್ನಾರ ಮಾಡಿದೆ.

ಕೇಂದ್ರ, ಸರ್ಕಾರದ ಶರತ್ತುಗಳು

ಈ ಎಲ್ಲಾ ಖಾಸಗೀಕರಣಕ್ಕೆ ಬಿಜೆಪಿ ಕೂಟದ ಕೇಂದ್ರ ಸರ್ಕಾರ ಮತ್ತು ವಿಶ್ವ ಬ್ಯಾಂಕ್ ಒತ್ತಡ ಹೇರುತ್ತಿದೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ನೀವು ವಿದ್ಯುತ್ ಕಂಪನಿಗಳನ್ನು ವಿಭಜಿಸದಿದ್ದರೆ ಖಾಸಗೀಕರಣ ಮಾಡದಿದ್ದರೆ ಕೇಂದ್ರ ಸರ್ಕಾರದ ವಿದ್ಯುತ್. ಉತ್ಪಾದನಾ ಕೇಂದ್ರಗಳಿಂದ ಆದ್ಯತೆ ಮೇಲೆ ವಿದ್ಯುತ್ ನೀಡುವುದಿಲ್ಲ, ಇನ್ನು ಮುಂದೆ ನಿರ್ಮಿಸಲಾಗುವ ವಿದ್ಯುತ್ ತಯಾರಿಕಾ ಕೇಂದ್ರಗಳಿಂದ ನಾವು ವಿದ್ಯುತ್ ಅನ್ನು ಸರಬರಾಜು ಮಾಡುವುದಿದ್ದರೆ ವಿದ್ಯುತ್ ಸುಧಾರಣೆಯಿಂದ ರೂಪಿಸಲಾಗುವ ವ್ಯಾಪಾರಿ ಕಂಪನಿಗಳಿಗೆ ಮಾತ್ರ, ಕೇಂದ್ರ ಸರ್ಕಾರ ಮತ್ತು ಅದರಡಿಯ ಸಂಸ್ಥೆಗಳು ಯಾವುದೇ ವಿದ್ಯುತ್ ಯೋಜನೆಗಳಿಗೆ ಹಣ ನೀಡಬೇಕಾಗಿದ್ದರೂ ಕೂಡ ಖಾಸಗೀಕರಣ ಮಾಡಲೇಬೇಕು, ವಿಶ್ವಬ್ಯಾಂಕ್ ಮೊದಲಾದ ಯಾವುದೇ ಹಣಕಾಸು ಸಂಸ್ಥೆಯಿಂದ ವಿದ್ಯುತ್ತಿಗಾಗಿ ಸಾಲ ಪಡೆಯುವುದಿದ್ದರೆ ರಾಜ್ಯ ಸರ್ಕಾರಗಳು ವಿದ್ಯುತ್ ಖಾಸಗೀಕರಣ ಮಾಡದಿದ್ದರೆ ಕೇಂದ್ರ ಸರ್ಕಾರ ಅದಕ್ಕೆ ಬೆಂಬಲ ನೀಡುವುದಿಲ್ಲ ಹೀಗೆ ಹಲವು ಶರತ್ತುಗಳನ್ನು ವಿಧಿಸಿದೆ.

ಈ ಎಲ್ಲಾ ಶರತ್ತುಗಳು ವಿಶ್ವಬ್ಯಾಂಕ್ ವಿಧಿಸಿದ ಶರತ್ತುಗಳ ಪ್ರತಿಧ್ವನಿಯಾಗಿದೆ. ಕೇಂದ್ರ ಸರ್ಕಾರ ತನ್ನದೇ ದೇಶದ ರಾಜ್ಯ ಸರ್ಕಾರಗಳೊಡನೆ ವ್ಯವಹರಿಸುವಾಗಲೂ ಈ ರೀತಿ ಶರತ್ತುಗಳನ್ನು ವಿಧಿಸುವುದು ಆಶ್ಚರ್ಯಕರ, ಮಾತ್ರವಲ್ಲ, ಪ್ರಜಾಪ್ರಭುತ್ವದ ಮೂಲಭೂತ ತತ್ವಗಳಿಗೆ, ಕೇಂದ್ರ-ರಾಜ್ಯ ಸಂಬಂಧಗಳಿಗೆ ಧಕ್ಕೆ ತರುವಂತಹದು. ಅಷ್ಟು ಮಾತ್ರವೇ ಅಲ್ಲ ರಾಜ್ಯದ ಬಿಜೆಪಿ ಶಾಸಕರು ಖಾಸಗೀಕರಣವನ್ನು ತಡ ಮಾಡುತ್ತಿದ್ದೀರಿ ಎಂದು ಒತ್ತಡ ಹಾಕುತ್ತಿದ್ದಾರೆ. ಬಿಜೆಪಿಯ ಅಂಗ ಸಂಸ್ಥೆ ಭಾರತ್ ಕಿಸಾನ್ ಯೂನಿಯನ್ ರೈತರ ಪಂಪ್‌ಸೆಟ್‌ಗಳಿಗೆ ಭಾಗ್ಯಜ್ಯೋತಿಗೆ ಬೇಗ ಮೀಟರೀಕರಣ ಮಾಡಿ ಎಂದು ಒತ್ತಾಯಮಾಡುತ್ತಿದ್ದಾರೆ.

ಸರಬರಾಜು ಕಂಪನಿಗಳ ಖಾಸಗೀಕರಣ - ತರಾತುರಿ ಏಕೆ?

ವಿದ್ಯುತ್ ಸರಬರಾಜು ಕಂಪನಿಗಳ ಖಾಸಗೀಕರಣ ಮಾಡಿದರೆ ಮಾತ್ರ ವಿದೇಶಿ ಖಾಸಗೀ ಕಂಪನಿಗಳ ತಯಾರು ಮಾಡಿದ ವಿದ್ಯುತ್ತನ್ನು ದುಬಾರಿ ದರದಲ್ಲಿ ಕೊಂಡು ದುಬಾರಿ ದರಗಳನ್ನು ಬಳಕೆದಾರರಿಂದ ವಸೂಲಿ ಮಾಡುವ ಸಾಧ್ಯವಾಗುತ್ತದೆ ಎಂದು. ಆದ್ದರಿಂದ ಅಮೆರಿಕದ ಯುರೋಪಿನ ಬಹುರಾಷ್ಟ್ರೀಯ ಕಂಪನಿಗಳು ತಯಾರು ಮಾಡುವ ವಿದ್ಯುತ್ ಉತ್ಪಾದನಾ ಯಂತ್ರಗಳು ಖರ್ಚಾಗಬೇಕಾದರೆ ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆ ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ಸಿಗಬೇಕು. ಅದರ ಸಲುವಾಗಿ ವಿದ್ಯುತ್ ಸರಬರಾಜು ಕಂಪನಿಗಳ ಖಾಸಗೀಕರಣವಾಗಬೇಕು. ಈ ವಿಶ್ವಬ್ಯಾಂಕ್ ಕಾರ್ಯತಂತ್ರಕ್ಕೆ ಕೇಂದ್ರ ಸರ್ಕಾರ ಏಜೆಂಟ್‌ನಂತೆ ವರ್ತಿಸುತ್ತಿರುವುದು ಅಕ್ಷಮ್ಯ.

ಸರಬರಾಜು ಕಂಪನಿಗಳ ಖಾಸಗೀಕರಣದ ಪರಿಣಾಮಗಳು

ಸರಬರಾಜು ಕಂಪನಿಗಳನ್ನು ಕೊಳ್ಳಲು ವಿದೇಶಿ ಕಂಪನಿಗಳು ಮುಂದೆ ಬರಬೇಕೆಂದು ಅವುಗಳಿಗೆ ಅನೇಕ ರೀತಿಯ ರಿಯಾಯಿತಿ ಲಾಭದ ಆಸೆಗಳನ್ನು ತೋರಿಸಲಾಗುತ್ತಿದೆ. 50 ವರ್ಷಗಳ ಕಾಲ ಸರ್ಕಾರದ ಯಾವುದೇ ಕಂಪನಿಗೆ ನೀಡದ ಶೇ 16 ರಷ್ಟು ಲಾಭದ ಖಾತರಿ, ವಿದ್ಯುತ್ ಬಿಲ್ ವಸೂಲಿ ಮಾಡಲು ನಿಗದಿತ ಕಮಿಷನ್, ನಿಶ್ಚಯಿಸಿದ ಕನಿಷ್ಟ ಪ್ರಮಾಣಕ್ಕಿಂತ ಹೆಚ್ಚು ವಸೂಲಿ ಮಾಡಿದರೆ ಪ್ರೋತ್ಸಾಹ ಧನ, ವಸೂಲಿ ಕಡಮೆಯಾದರೆ ಸರ್ಕಾರಿ ಕಂಪನಿಗಳಿಂದ ಕೊಂಡ ವಿದ್ಯುತ್‌ಗೆ ಹಣ ನೀಡುವುದಕ್ಕೆ ಮೊದಲೇ ತಮ್ಮ ಖರ್ಚುಗಳನ್ನು ಮುರಿದುಕೊಳ್ಳುವುದು ಇತ್ಯಾದಿ. ಆದರೆ ಈ ಎಲ್ಲಾ ವೆಚ್ಚಗಳು ಕೂಡ ಜನಸಾಮಾನ್ಯರ ಮೇಲೆ ಅಧಿಕ ಹೊರೆಯಾಗಿ ಬೀಳುತ್ತದೆ, ವಿದ್ಯುತ್ ದರಗಳನ್ನು ಗಗನಕ್ಕೇರಿಸುತ್ತವೆ. ಆದರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಗಳಿಗೆ ಅದರ ಗೊಡವೆಯೇ ಇಲ್ಲದಂತೆ ವರ್ತಿಸುತ್ತಿವೆ.

ಖಾಸಗಿಕರಣ-ಸಾರ್ವಜನಿಕ ಆಸ್ತಿಯ ಲೂಟಿ

1902 ರಿಂದ 2002 ರ ವರೆಗೆ ನೂರು ವರ್ಷಗಳ ಕಾಲ ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರದಲ್ಲಿ ಲಕ್ಷ ಕೋಟಿಗಳು ಬೆಲೆ ಬಾಳುವ ಸಂಪತ್ತನ್ನು ಸೃಷ್ಟಿಸಲಾಗಿದೆ. ಅದರಲ್ಲಿ ಸರಬರಾಜು ಕಂಪನಿಗಳ ಕೈಯಲ್ಲಿ ಬಹಳ ದೊಡ್ಡ ಪ್ರಮಾಣದ ಆಸ್ತಿ ಇದೆ. ಸರಬರಾಜು ಕಂಪನಿಗಳ ಕಛೇರಿ, ವಿದ್ಯುತ್ ಕೇಂದ್ರ, ಉಪಕೇಂದ್ರಗಳಿರುವ ನೆಲದ ಬೆಲೆಯೇ ಸಾವಿರಾರು ಕೋಟಿ ರೂ. ಬೆಲೆ ಬಾಳುವಂತಹದು. ಇನ್ನು ಕಟ್ಟಡ, ಉಪಕರಣಗಳು, ಟ್ರಾನ್ಸ್‌ಫಾರ್ಮರ್‌ಗಳು, ವಿದ್ಯುತ್ ಲೈನ್‌ಗಳು ಇತ್ಯಾದಿ 40 ಸಾವಿರ ಕೋಟಿ ರೂಗಳಿಗಿಂತ ಹೆಚ್ಚು ಬೆಲೆಬಾಳುವ ಆಸ್ತಿ ಇದೆ. ಸಾರ್ವಜನಿಕರು ನೀಡಿದ ತೆರಿಗೆಯಿಂದ ಸೃಷ್ಟಿಯಾದ ಅಪಾರ ಸಂಪತ್ತನ್ನು ಈಗ ಕೇವಲ 2814 ಕೋಟಿ ರೂ.ಗೆ ಹರಾಜು ಹಾಕಲು ಸರ್ಕಾರ ಹೊರಟಿದೆ. ಈ ಆಸ್ತಿಯೆಲ್ಲಾ ಖಾಸಗೀಯವರ ಕೈಗೆ, ಅದರಲ್ಲಿ ಬಹುಪಾಲು ವಿದೇಶಿಗಳ ಕೈಗೆ ಹೋಗುತ್ತದೆ. ಜನರ ಬೆವರಿನಿಂದ ಹುಟ್ಟಿದ ಸಂಪತ್ತನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ತಮ್ಮ ಕೈಯಾರ ಖಾಸಗಿಯವರ ಸಂಪತ್ತನ್ನು ವೃದ್ಧಿ ಮಾಡಲು, ವಿದೇಶಿಯರ ಕೈಗೆ ಒಪ್ಪಿಸಲು ಕಾತುರರಾಗಿದ್ದಾರೆ.

ಆದ್ದರಿಂದ ಜನತೆಯೇ ತಾವು ಸೃಷ್ಟಿಸಿದ ಸಂಪತ್ತನ್ನು ಉಳಿಸಿಕೊಳ್ಳುವ ಹೊಣೆ ಹೊರಬೇಕಾಗಿದೆ. ಈ ಲೂಟಿಯನ್ನು ಮಾಡಲು ಬಿಡುವುದಿಲ್ಲ ಎಂಬ ಸವಾಲನ್ನು ಆಳುವ ಸರ್ಕಾರಗಳಿಗೆ ಹಾಕಬೇಕಾಗಿದೆ.

ಕರ್ನಾಟಕದಲ್ಲಿ ಜನತೆ ಹಲವಾರು ವರ್ಷಗಳಿಂದ ವಿದ್ಯುತ್ ದರ ಏರಿಕೆ ವಿರುದ್ಧ ಹೋರಾಟದ ಕಣದಲ್ಲಿದ್ದಾರೆ. ನೀರಾವರಿ ಪಂಪ್‌ಸೆಟ್ ಬಳಕೆದಾರರು, ಸಣ್ಣ ಕೈಗಾರಿಕೆಗಳ ಮಾಲೀಕರು ಪ್ರಬಲ ಹೋರಾಟ ನಡೆಸಿದ್ದಾರೆ, ನಡೆಸುತ್ತಿದ್ದಾರೆ. ಈ ಹೋರಾಟಗಳ ಎಲ್ಲಾ ಬಳಕೆದಾರರ ವರ್ಗಗಳನ್ನೂ ಆವರಿಸಬೇಕು. ನಗರ ವಿಸ್ತರಣಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಪಂಚಾಯ್ತಿ ಮಟ್ಟಗಳಲ್ಲಿ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳನ್ನು ರಚಿಸಿಕೊಳ್ಳಬೇಕು.

ವಿದ್ಯುತ್ ದರ ಏರಿಕೆ, ಸಹಾಯಧನ ಕಡಿತ, ಮೀಟರೀಕರಣ ಹಾಗೂ ಖಾಸಗೀಕರಣದ ವಿರುದ್ಧ ಹೋರಾಟ ಸಾಗಿಸಬೇಕು.

ಇಂದು ಜಗತ್ತಿನ ಆರ್ಥಿಕ ಚಟುವಟಿಕೆಗಳ ಮೂಲ ದ್ರವ್ಯವಾದ ಪೆಟ್ರೋಲಿಯಂ ಸಂಪತ್ತನ್ನು ವಶಪಡಿಸಿಕೊಳ್ಳಲು ಅಫ್ಘಾನಿಸ್ತಾನದ ಮೇಲೆ ಯುದ್ಧ ಜರುಗಿದೆ. ಇರಾಕ್ ಮೇಲೆ ಧಾಳಿಯ ಸರ್ವಸಿದ್ಧತೆಗಳೂ ನಡೆದಿವೆ. ಹಾಗೆಯೇ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವಿದ್ಯುತ್ ತಯಾರಿಕೆ ಹಂಚಿಕೆಯ ಮೇಲಿನ ನಿಯಂತ್ರಣ ಪಡೆದರೆ ಇಡೀ ವಿಶ್ವವೇ ತಮ್ಮ ಕಾಲಡಿಯಲ್ಲಿ ಬೀಳುತ್ತದೆ ಎಂಬ ದುಷ್ಟ ತಂತ್ರ ವಿದ್ಯುತ್ ಖಾಸಗೀಕರಣದಲ್ಲಿ ಅಡಗಿದೆ.

ಆದ್ದರಿಂದ ಕರ್ನಾಟಕದ ಜನತೆ ಎಚ್ಚೆತ್ತು ಹೋರಾಟವನ್ನು ತೀವ್ರಗೊಳಿಸಬೇಕು. ದೇಶದ ಸ್ವಾತಂತ್ರ್ಯಕ್ಕೆ, ಜನರ ಬದುಕಿಗೆ ಅಪಾಯಕರವಾದ ವಿದ್ಯುತ್ ಖಾಸಗೀಕರಣವನ್ನು ಹಿಮ್ಮೆಟ್ಟಿಸುವವರೆಗೆ ಹೋರಾಟ ಸಾಗಬೇಕು. ಅಂದು ಸ್ವಾತಂತ್ರ್ಯ ಗಳಿಸುವುದಕ್ಕಾಗಿ ಹೋರಾಟ. ಇಂದು ಸ್ವಾತಂತ್ರ್ಯ ಉಳಿಸಿಕೊಳ್ಳುವುದಕ್ಕಾಗಿ ಹೋರಾಟ.

○

.......ವಿದ್ಯುತ್‌ಗಾಗಿ ಹೋರಾಟ

ಪುಟ 4 ರಿಂದ

ಹೆಚ್.ಪಿ.ಗೆ ವರ್ಷಕ್ಕೆ 300 ರೂ ಮಾತ್ರ ನಿಗದಿ ಮಾಡಿ, ಅಧಿಕಾರಿಗಳು ಗ್ರಾಹಕರೊಂದಿಗೆ ಸೌಜನ್ಯದಿಂದ ವರ್ತಿಸಲಿ, ಬಿಲ್ಲಿಂಗ್‌ನಲ್ಲಾಗುವ ತಪ್ಪು ಸುಧಾರಿಸಲಿ, ಪ್ರತಿಗ್ರಾಮ ಪಂಚಾಯತ್ ನಲ್ಲಿಯೂ ಗ್ರಾಹಕರ ಸಭೆ ನಡೆಸಿ ಸ್ಥಳೀಯ ಕುಂದುಕೊರತೆ ನಿವಾರಿಸಬೇಕೆನ್ನುವ ಹತ್ತಾರು ಬೇಡಿಕೆಗಳನ್ನಿಟ್ಟುಕೊಂಡು ನಡೆದ ಹೋರಾಟಕ್ಕೆ ಹಳ್ಳಿ ಹಳ್ಳಿಗಳಿಂದ ಪಕ್ಷ ಬೇಧ ಮರೆತು ಭಾಗವಹಿಸಿದ್ದು ವಿಶೇಷವಾಗಿತ್ತು. ನೆರೆದ ಜನರೆದುರು ಅಧಿಕಾರಿಗಳು, ಸಿಬ್ಬಂದಿಗಳು, ಅಪರಾಧಿಗಳಂತೆ ಕೈಕಟ್ಟಿ ನಿಂತಿದ್ದು ಮತ್ತು ಈ ಅವ್ಯವಸ್ಥೆಗೆ ಸರ್ಕಾರ ಮತ್ತು ಜನಪ್ರತಿನಿಧಿಗಳೇ ಕಾರಣ ಹೊರತು ನಾವು ಅಸಹಾಯಕರು ಎಂದು ಕ್ಷಮೆ ಕೇಳುವ ದಾಟಿಯಲ್ಲಿ ಮಾತನಾಡಿದರು. ಸುಮಾರು ಎರಡುವರೆ ತಾಸು ಜನರೊಂದಿಗೆ ಮುಖಾಮುಖಿಯಲ್ಲಿ ಪಾಲ್ಗೊಂಡು ತಮ್ಮ ತಪ್ಪನ್ನು ಒಪ್ಪಿಕೊಂಡರು.

ಸಭೆಯನ್ನು ಉದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಶಾಂತಾರಾಮ ನಾಯಕ, ಸಂಯುಕ್ತ ಜನತಾದಳದ ರಮಾನಂದ ನಾಯಕ, ಡಿ.ವೈ.ಎಫ್.ಐ. ನ ವಿಠ್ಠಲ ಭಂಡಾರಿ ಮಾತನಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ತಪ್ಪು ನೀತಿಗಳು ಹೇಗೆ ವಿದ್ಯುತ್ ಸಮಸ್ಯೆಗೆ ಕಾರಣ ಆಗಿವೆ ಎಂದು ವಿವರಿಸಿದರು.

ಈ ಮಹತ್ವದ ಹೋರಾಟಕ್ಕೆ ಪೂರ್ವಭಾವಿಯಾಗಿ ಶಾಂತಾರಾಮ ನಾಯಕ ಅವರ ನೇತೃತ್ವದಲ್ಲಿ ಹಿಲ್ಲೂರು, ಅಡವೆ, ಬಾವಿಕೆರೆ, ಬೇಲಿಕೆರೆ, ಅಲಗೇರಿ, ಅಗಸೂರು, ಸಗಡಗೇರಿ, ಅವರ್ಸಾ, ಗ್ರಾಮ ಪಂಚಾಯತ್‌ಗಳಲ್ಲಿ ಪಂಚಾಯತ್ ಮಟ್ಟದ ಸಭೆ ನಡೆಯಿತು. ಸಭೆಯ ಸುದ್ದಿ ಕೇಳಿಯೇ ನೆರೆದ ನೂರಾರು ಜನ ಸಭೆಯನ್ನು ಯಶಸ್ವಿಗೊಳಿಸಿದರು. ಗ್ರಾಮಮಟ್ಟದ ಸಮಿತಿ ರಚಿಸಿದರು. 50 ರೂ. ಕೊಟ್ಟು ಸಮಿತಿಯ ಸದಸ್ಯರಾದರು. ಅವರೇ ಜನರಿಗೆ ಹೇಳಿ, ಮನವೊಲಿಸಿ ಸಾವಿರಾರು ಜನ ಅಂಕೋಲೆಯ ಸತ್ಯಾಗ್ರಹ ಸ್ಮಾರಕ ಸಭಾಭವನದ ಎದುರು ಜಮಾಯಿಸಿದರು. ಮುಗಿಲು ಮುಟ್ಟುವ ಘೋಷಣೆಯೊಂದಿಗೆ ಬೀದಿ ಬೀದಿಯಲ್ಲಿ ಮೆರವಣಿಗೆ ನಡೆಸಿ ಕಛೇರಿಯನ್ನು ಮುತ್ತಿದರು. ಹೋರಾಟದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯ ಜಿ.ಎಂ.ಶೆಟ್ಟಿ, ಜೆ.ಡಿ.ಎಸ್ ನ ರಾಮುಕೆಂಚನ್, ಜಯಪ್ರಕಾಶ್, ಅವರ್ಸಾವ ಮಾರುತಿ ನಾಯ್ಕ, ಹಟ್ಟಿಕೇರಿ ಪಂಚಾಯತ್ ಅಧ್ಯಕ್ಷ ವಿನೋದ ನಾಯ್ಕ, ಉಪಾಧ್ಯಕ್ಷ ವಿನೋಧ ಗಾಂವ್ಕರ್, ಹಾರವಾಡದ ಅಧ್ಯಕ್ಷ ಮಧುಕರ ನಾಯ್ಕ, ಬೇಲಿಕೇರಿ ಗ್ರಾಮ ಪಂಚಾಯತ ಅಧ್ಯಕ್ಷ ಚಂದ್ರಹಾಸ ನಾಯ್ಕ, ಹಳವಳ್ಳಿ ನಿರಾಶ್ರಿತರ ಪ್ರತಿನಿಧಿ ಶಿವರಾಮ ಗಾಂವ್ಕರ್, ಲಿಂಗೇರಿಯ ಗೌರೀಶ ನಾಯ್ಕ, ಬಿ.ಜಿ. ನಾಯ್ಕ, ಶಿರಗುಂಜಿಯ ಬಾಲಕೃಷ್ಣ ನಾಯಕ, ಅಗಸೂರಿನ ಅನಂತ ಗೌಡ, ಸುಕ್ರು ಗೌಡ, ಡಿ.ವೈ.ಎಫ್.ಐ ನ ಸುಭಾಸ ನಾಯಕ್, ದೇವರಾಯ ನಾಯಕ, ಬೊಮ್ಮಯ್ಯ ನಾಯಕ, ಅಂಗನವಾಡಿಯ ಜಿಲ್ಲಾ ಕಾರ್ಯದರ್ಶಿ ಯಮುನಾ ಮುಂತಾದವರು ಹೋರಾಟದ ನೇತೃತ್ವ ವಹಿಸಿದ್ದರು. ಅಂತಿಮವಾಗಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವ ಮತ್ತು ಹುಬ್ಬಳ್ಳಿಯ ಹೆಸ್ಕಾಂ ಕಛೇರಿಯ ಮುತ್ತಿಗೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ನಿರ್ಣಯ ತೆಗೆದುಕೊಳ್ಳಲಾಯಿತು.

ಹೊನ್ನಾವರದಲ್ಲಿ ಕೂಡ ಹೋರಾಟ ಚುರುಕುಕೊಂಡಿದೆ. ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನೆ ಸಾಗಿದೆ. ಇತ್ತೀತೆಗೆ ವಿದ್ಯುತ್ ಗ್ರಾಹಕರು ಮತ್ತು ಎಕ್ಸಿಕ್ಯೂಟಿವ್ ಇಂಜನೀಯರ್ ಪರಪ್ಪ ಅವರ ಮುಖಾಮುಖಿಯನ್ನು ಹೊನ್ನಾವರದಲ್ಲಿ ಏರ್ಪಡಿಸಲಾಗಿತ್ತು. ವಿವಿಧ ಪಂಚಾಯತ್‌ದಿಂದ ನೂರಾರು ಪ್ರತಿನಿಧಿಗಳು ಪಾಲ್ಗೊಂಡು ಮೀಟರೀಕರಣ ಮಾಡದಂತೆ, ಕಂಪನಿ ಖಾಸಗೀಕರಣ ಮಾಡದಂತೆ, ಲೋಡ್ ಶೆಡ್ಡಿಂಗ್ ನಿಲ್ಲಿಸುವಂತೆ ಎಚ್ಚರಿಸಿದರು. ಒಂದು ತಿಂಗಳಲ್ಲಿ ಸಮಸ್ಯೆ ಪರಿಹರಿಸದಿದ್ದರೆ ಎಲ್ಲಾ ಮೀಟರ್ ವಾಪಾಸು ಮಾಡುವ, ಇಲಾಖೆಯ ಮುಂದೆ ಮುತ್ತಿಗೆ, ಅನಿರ್ದಿಷ್ಟ ಹೋರಾಟ ಮಾಡುವ ಎಚ್ಚರಿಕೆ ಕೊಡಲಾಯಿತು.ಹೋರಾಟ ಸಮಿತಿಯ ಅಧ್ಯಕ್ಷ ಎನ್.ಎಲ್.ಹೆಗಡೆ, ಕಾರ್ಯದರ್ಶಿ ವಿಠ್ಠಲಭಂಡಾರಿ ಮತ್ತು ಹೋರಾಟ ಸಮಿತಿಯ ಇತರ ಪದಾಧಿಕಾರಿಗಳು ಮುಂದಾಳತ್ವ ವಹಿಸಿದ್ದರು.

ಇದೇ ರೀತಿ ವಿವಿಧ ಸಂಘಟನೆಯಡಿ ಕುಮಟಾ, ಶಿರಸಿ, ಯಲ್ಲಾಪುರ, ಹಳಿಯಾಳಗಳಲ್ಲಿ ಹೋರಾಟ ನಡೆಯುತ್ತಿವೆ. ಮೆರವಣಿಗೆ, ಕಛೇರಿ ಮುತ್ತಿಗೆ, ಧರಣಿ ನಡೆಯುತ್ತಿದೆ.

ಇವನ್ನೆಲ್ಲಾ ಒಂದೆಡೆ ಸೇರಿಸಿ ಜಿಲ್ಲೆಯಾದ್ಯಂತ ಒಂದೇ ರೀತಿಯ ಹೋರಾಟವನ್ನು ಏಕಕಾಲಕ್ಕೆ ನಡೆಸಲು ಬೇಕಾದ ಪ್ರಯತ್ನವನ್ನು ಕೆಪಿಆರ್‌ಎಸ್ ಮಾಡುತ್ತಿರುವುದು ಸ್ಮರಣೀಯ.


- ನಿಸರ್ಗ

'ಇರಾಕ್ ಮೇಲೆ ಯುದ್ಧ ಬೇಡ'

ಒಕ್ಕೊರಲಿನಿಂದ ಕೂಗಿದ ಒಂದೂವರೆಕೋಟಿ ಜನ

ಶರತ್‌ಚಂದ್ರ

ಫೆಬ್ರುವರಿ 15- ಅದೊಂದು ಚಾರಿತ್ರಿಕ ದಿನ. ಅಂದು ಸುಮಾರು 60 ದೇಶಗಳ 600ಕ್ಕೂ ಹೆಚ್ಚು ನಗರಗಳಲ್ಲಿ ಸುಮಾರು ಒಂದರಿಂದ ಒಂದುವರೆ ಕೋಟಿ ಜನ ಒಂದೇ ಘೋಷಣೆಯೊಂದಿಗೆ ಬೀದಿಗೆ ಇಳಿದು ವ್ಯಾಪಕ ಪ್ರತಿಭಟನಾ ಪ್ರದರ್ಶನದಲ್ಲಿ ಪಾಲ್ಗೊಂಡರು. 'ಇರಾಕ್ ಮೇಲೆ ಯುದ್ಧ ಬೇಡ' 'ತೈಲಕ್ಕಾಗಿ ರಕ್ತ ಹರಿಸುವುದು ಬೇಡ' 'ಬುಶ್ ಬಿಸಾಕಿ ಬಾಂಬ್ ಬೇಡ' - ಎಂಬುದು ಅವರ ಒಕ್ಕೊರಲಿನ ಕೂಗಾಗಿತ್ತು. ಇದು ಯುದ್ಧ-ವಿರೋಧಿ ಚಳುವಳಿಯ ನಿಜವಾದ ಜಾಗತೀಕರಣವಾಗಿತ್ತು. ಜನತಾ ಚಳುವಳಿಗಳ ಶತಕ ಮತ್ತು ಎರಡು ಮಹಾಯುದ್ಧಗಳನ್ನೂ, ಅಮೇರಿಕದ ಕೊರಿಯಾ-ವಿಯಟ್ನಾಮ್, ಇರಾಕ್ ಯುದ್ಧಗಳ ಕಂಡ 20ನೇ ಶತಮಾನದಲ್ಲೂ ಇಷ್ಟೊಂದು ಬೃಹತ್ ಪ್ರದರ್ಶನ ಸಾಧ್ಯವಾಗಿರಲಿಲ್ಲ. ಅಂಟಾರ್ಟಿಕಾದಿಂದ ಐಸ್‌ಲೆಂಡ್‌ವರೆಗೆ ಎಲ್ಲಾ ಖಂಡಗಳಲ್ಲಿ ನಡೆದ ಅತ್ಯಂತ ಸಂಯೋಜಿತ ಪ್ರತಿಭಟನೆ ಇದಾಗಿತ್ತು. ಈ ಚಾರಿತ್ರಿಕ ಚಳುವಳಿಯ ಕೆಲವು ವಿವರಗಳು ಇಲ್ಲಿವೆ.


ಲಂಡನ್‌ನಲ್ಲಿ 20 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ ರ್‍ಯಾಲಿಯ ಒಂದು ದೃಶ್ಯ.

ಕಳೆದ ವಾರಾಂತ್ಯದಲ್ಲಿ (ಫೆಬ್ರವರಿ 15-16 ರಂದು) ಕಂಡು ಬಂದ ಅತ್ಯಂತ ವ್ಯಾಪಕವಾದ ಯುದ್ಧ-ವಿರೋಧಿ ಪ್ರದರ್ಶನಗಳು ಇತ್ತೀಚಿನ ಅತ್ಯಂತ ಮಹತ್ವದ ಜಾಗತೀಕ ರಾಜಕೀಯ ಘಟನೆ. ಇದು ಜಗತ್ತಿನಾದ್ಯಂತ ಅತ್ಯಂತ ವ್ಯಾಪಕ ಜನರ ಪಾಲ್ಗೊಳ್ಳುವಿಕೆಯ ಅತ್ಯಂತ ದೊಡ್ಡ ಚಳುವಳಿ ಮಾತ್ರವಲ್ಲ. ಇದು ನಡೆದ ಹಲವು ದೇಶಗಳಲ್ಲಿ ಇದು ಅತ್ಯಂತ ದೊಡ್ಡ ಪ್ರದರ್ಶನವೂ ಆಗಿತ್ತು. (ಯಾವುದೇ ಬೇಡಿಕೆಗೆ ನಡೆದ ಪ್ರತಿಭಟನಾ ಪ್ರದರ್ಶನ) ಅತ್ಯಂತ ದೊಡ್ಡ ಪ್ರದರ್ಶನಗಳು ಅಮೇರಿಕ ಮತ್ತು ಅಮೇರಿಕದ ಯುದ್ಧಕ್ಕೆ ಬೆಂಬಲ ಕೊಡುವ ಸರ್ಕಾರಗಳಿರುವ ದೇಶಗಳಲ್ಲಿ ಆಯಿತು. (ದಶಲಕ್ಷಾಧೀಶ ದೇಶಗಳು ಮತ್ತು ನಗರಗಳು ಬಾಕ್ಸ್ ನೋಡಿ) ಅತ್ಯಂತ ವ್ಯಾಪಕ ಪ್ರದರ್ಶನಗಳಲ್ಲಿ ಅಮೇರಿಕಾ, ಕೆನಡಾ, ಫ್ರಾನ್ಸ್, ಸ್ಪೈನ್‌ಗಳಲ್ಲಿ ಆಯಿತು. (ಅರ್ಧ ಶತಕ ದೇಶಗಳು, - ಬಾಕ್ಸ್ ನೋಡಿ). ಬರುವ ದಿನಗಳಲ್ಲಿ ಜಾಗತೀಕ ರಾಜಕೀಯ ರಂಗದಲ್ಲಿ ಮಹತ್ವದ ಪರಿಣಾಮಗಳನ್ನು ಬೀರಲಿವೆ. ಈ ಅಭೂತಪೂರ್ವ ಯುದ್ಧಕೋರ ಬುಶ್- ಬ್ಲೇರ್ ಗ್ಯಾಂಗನ್ನು ನಡುಗಿಸಿದೆ. ಈ ಜನತಾಶಕ್ತಿ ವಿಶ್ವಸಂಸ್ಥೆ ಭದ್ರತಾ ಸಮಿತಿಯಲ್ಲ, ಅಮೇರಿಕಾ, ಯುರೋಪ್ ಮತ್ತು ಇತರ ಸರ್ಕಾರಗಳು ಯುದ್ಧದ ಬಗ್ಗೆ ತಳೆಯಬಹುದಾದ ನಿಲುವಿನ ಮೇಲೆ ಒತ್ತಡ ಹೇರಿದೆ. ಅದನ್ನು ಯುದ್ಧದಿಂದ ಆಚೆಗೆ ಶಾಂತಿಯತ್ತ ತಿರುಗಿಸಿದೆ. ಯುದ್ಧವನ್ನು ಸದ್ಯಕ್ಕಂತೂ ನಿಲ್ಲಿಸಿದೆ. ಮೊದಲ ಬಾರಿಗೆ ಯುರೋಪಿಯನ್ ಕೂಟದ ಆಳುವ ವರ್ಗಗಳಲ್ಲಿ ಮತ್ತು ಅವರ ನಾಟೊ ಮಿಲಿಟರಿ ಕೋಟದಲ್ಲಿ ಅನೈಕ್ಯತೆ ಮೂಡಿಸಿದೆ.

ಕಾರ್ಮಿಕ ವರ್ಗ ಚಳುವಳಿ ಸೇರಿದಂತೆ ಹಲವು ಚಳುವಳಿಗಳ ವ್ಯಾಪಕ ಪಾಲ್ಗೊಳ್ಳುವಿಕೆ, ಯುದ್ಧ ಸಾರಿದ - ಯುದ್ಧ ಆಗಲಿರುವ ಎರಡೂ ದೇಶಗಳಲ್ಲಿ ರಣರಂಗದಿಂದ ದೂರವಿರುವ ದೇಶಗಳಲ್ಲೂ ಅತ್ಯಂತ ವ್ಯಾಪಕ ಪ್ರತಿಭಟನೆ ಕಂಡುಬಂದಿದ್ದು ಇದು ಅತ್ಯಂತ ಎತ್ತರದ ರಾಜಕೀಯ ಪ್ರಜ್ಞೆಗೆ ಸಾಕ್ಷ್ಯವಾಗಿತ್ತು. 'ಯುದ್ಧ ಅನಿವಾರ್ಯ' 'ಬುಶ್‌ನ್ನು ತಡೆಯಲು ಸಾಧ್ಯವಿಲ್ಲ' ಎಂಬ ಸಾಮ್ರಾಜ್ಯಶಾಹಿ ಗುತ್ತೇದಾರಿ ಮಾಧ್ಯಮದ ಪ್ರಚಾರ ಲೆಕ್ಕಿಸದೆ ಹರಿಯಬಿಟ್ಟ ಪ್ರತಿಭಟನೆ ಇದು.

ಕಮ್ಯುನಿಸ್ಟ್ ಪಕ್ಷಗಳು, ಎಡಪಕ್ಷಗಳು, ಟ್ರೇಡ್‌ಯೂನಿಯನ್‌ಗಳು, ಯುದ್ಧ- ವಿರೋಧಿ ಚಳುವಳಿಗಳು ಜಾಗತೀಕರಣ - ವಿರೋಧಿ ಚಳುವಳಿಗಳು- ಇವುಗಳಿಲ್ಲದರ ಮಹಾನ್ ಕೂಟದಿಂದ ಈ ಪ್ರತಿಭಟನೆ ಸಾಧ್ಯವಾಯಿತು. ಇದು ಅತ್ಯಂತ ಮಹತ್ವದ ಸಂಗತಿ. ಆದರೂ ಏನೂ ಆಗುವುದಿಲ್ಲ, ಬುಶ್ ಯುದ್ಧ ಹೂಡೇ ಹೂಡುತ್ತಾರೆ ಎಂದು ಮೂಗು ಮುರಿಯುವವರು ಇದ್ದಾರೆ. ಈಗಾಗಲೇ ಮಾರ್ಚ್ 1 ರಂದು ವಾಶಿಂಗ್‌ಟನ್‌ನಲ್ಲಿ ಶ್ವೇತಭವನಕ್ಕೆ ಮುತ್ತಿಗೆ, ಇರಾಕ್ ಮೇಲೆ ದಾಳಿ ನಡೆದರೆ ಅವತ್ತೇ ಇನ್ನೊಂದು ಬೃಹತ್ ಪ್ರದರ್ಶನ, ಅಮೇರಿಕ ಮತ್ತು ಇತರೆಡೆ ಯುದ್ಧ ಕೆಲಸಗಳಿಗೆ ಪೂರ್ಣ ಅಸಹಕಾರ/ ಪ್ರತಿರೋಧದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ದಶಲಕ್ಷಾಧೀಶ ನಗರಗಳು	
ರೋಮ್ (ಇಟಲಿ)	25 ಲಕ್ಷ
ಲಂಡನ್ (ಬ್ರಿಟನ್)	20 ಲಕ್ಷ
ಬಾರ್ಸಿಲೋನಾ (ಸ್ಪೇನ್)	13 ಲಕ್ಷ
ಮ್ಯಾಡ್ರಿಡ್ (ಸ್ಪೈನ್)	10 ಲಕ್ಷ
ದಶಲಕ್ಷಾಧೀಶ ದೇಶಗಳು	
ಸ್ಪೈನ್	40 ಲಕ್ಷ
ಇಟಲಿ	30 ಲಕ್ಷ
ಬ್ರಿಟನ್	22 ಲಕ್ಷ
ಇರಾಕ್	11 ಲಕ್ಷ
ಅಮೇರಿಕಾ	10 ಲಕ್ಷ
ಅರ್ಧಶತಕ ದೇಶಗಳು	
ಅಮೇರಿಕಾ	225 ನಗರಗಳು
ಫ್ರಾನ್ಸ್	80 ನಗರಗಳು
ಕೆನಡಾ	70 ನಗರಗಳು
ಸ್ಪೈನ್	57 ನಗರಗಳು
(50 ಕ್ಕಿಂತ ಹೆಚ್ಚು ನಗರಗಳಲ್ಲಿ ಪ್ರದರ್ಶನ ನಡೆದ ದೇಶಗಳು)	
ಲಕ್ಷಾಧೀಶ ನಗರಗಳು	
ನ್ಯೂಯಾರ್ಕ್	5 ಲಕ್ಷ
ಬರ್ಲಿನ್ (ಜರ್ಮನಿ)	5 ಲಕ್ಷ
ಸಿಡ್ನಿ (ಆಸ್ಟ್ರೇಲಿಯಾ)	2.5 ಲಕ್ಷ
ಅಥೆನ್ಸ್ (ಗ್ರೀಸ್)	2 ಲಕ್ಷ
ಪ್ಯಾರಿಸ್ (ಫ್ರಾನ್ಸ್)	2 ಲಕ್ಷ
ಡಮಾಸ್ಕಸ್ (ಸಿರಿಯಾ)	2 ಲಕ್ಷ
ಮಾಂಡ್ರಿಯಲ್ (ಕೆನಡಾ)	1.5 ಲಕ್ಷ
ಮೆಲ್‌ಬೋರ್ನ್ (ಆಸ್ಟ್ರೇಲಿಯಾ)	1.5 ಲಕ್ಷ
ಸಾನ್‌ಫ್ರಾನ್ಸಿಸ್ಕೊ(ಅಮೇರಿಕಾ)	1 ಲಕ್ಷ
ಲಾಸ್ ಎಂಜಲೀಸ್ (ಅಮೇರಿಕ)	1 ಲಕ್ಷ
ಬ್ರಸ್ಸೆಲ್ಸ್ (ಬೆಲ್ಜಿಯಂ)	1 ಲಕ್ಷ
ಬ್ರಿಸ್ಬೇನ್ (ಆಸ್ಟ್ರೇಲಿಯಾ)	1 ಲಕ್ಷ
ಅಡಿಲೇಡ್ (ಆಸ್ಟ್ರೇಲಿಯಾ)	1 ಲಕ್ಷ
ಡಬ್‌ಲಿನ್ (ಐಲೆಂಡ್)	1 ಲಕ್ಷ
ಗ್ಲಾಸ್ಕೊ (ಬ್ರಿಟನ್)	1 ಲಕ್ಷ
ಶಾಂತಿಯುತ ನಗರಗಳು	
ಅಮೇರಿಕಾದ 90ಕ್ಕೂ ಹೆಚ್ಚು ನಗರಗಳು, ಜಿಲ್ಲೆಗಳು (ಚಿಕಾಗೊ ಸೇರಿ) ಚುನಾಯಿತ ಸ್ಥಳೀಯ ಸಂಸ್ಥೆ ಯಾವುದೇ ರೀತಿಯ ಯುದ್ಧ ಚಟುವಟಿಕೆಯಲ್ಲಿ ಸಹಕಾರ ನೀಡದಿರುವ ನಿರ್ಣಯ ಕೈಗೊಂಡಿದೆ.	

60 ಕಮ್ಯುನಿಸ್ಟ್ ಪಕ್ಷಗಳ ಕರೆ

ಜಗತ್ತಿನ 60 ಕ್ಕೂ ಹೆಚ್ಚು ಕಮ್ಯುನಿಸ್ಟ್ ಪಕ್ಷಗಳು ಒಂದು ಹೇಳಿಕೆ ನೀಡಿ ಅಮೇರಿಕಾದ ಯುದ್ಧ ತಯಾರಿಯನ್ನು ಖಂಡಿಸಿವೆ. ಈ ಯುದ್ಧ ಹಲವು ರಾಷ್ಟ್ರೀಯ, ಅಂತರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಲಿದ್ದು, ಅಮೇರಿಕಾದ ತೈಲ ಹಿತಾಸಕ್ತಿಗಳನ್ನು ಕಾಯುವ ಏಕಮಾತ್ರ ಉದ್ದೇಶ ಹೊಂದಿದೆ. ತೈಲ-ಸಮೃದ್ಧ ಇರಾಕ್‌ನ್ನು ವಶಪಡಿಸಿಕೊಳ್ಳುವ ಮತ್ತು ಆಮೂಲಕ ಆ ಪ್ರದೇಶವನ್ನು ಪೂರ್ಣವಾಗಿ ವಸಾಹತುವಂತೆ ಮಾಡಿಕೊಳ್ಳುವ ಉದ್ದೇಶ ಹೊಂದಿದೆ. ಈ ಅನ್ಯಾಯದ ಯುದ್ಧಕ್ಕೆ ಬೆಂಬಲ ಕೊಡಬಾರದು ಎಂದು ಎಲ್ಲಾ ದೇಶಗಳು ಸರ್ಕಾರಗಳನ್ನು ಒತ್ತಾಯಿಸಿದೆ ಅಲ್ಲದೆ ತಮ್ಮ ಸರ್ಕಾರಗಳನ್ನು ಅಮೇರಿಕಕ್ಕೆ ಯುದ್ಧದಲ್ಲಿ ಬೆಂಬಲ ನೀಡದಂತೆ ಜನತೆಗೆ ಕರೆ ನೀಡಿದೆ. ಫೆಬ್ರುವರಿ 15ರ ಪ್ರತಿಭಟನೆಯನ್ನು ಪ್ರಚಂಡ ಯಶಸ್ವಿ ಪ್ರತಿಭಟನೆಯಾಗಿಸಬೇಕೆಂದು ಕರೆ ನೀಡಿದೆ. ಇರಾಕ್, ಅಮೇರಿಕ, ಹೆಚ್ಚು ಕಡಿಮೆ ಎಲ್ಲಾ ನಾಟೋ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಈ ಕರೆಗೆ ಸಹಿ ಹಾಕಿವೆ.

ಅಮೇರಿಕನ್ ಟ್ರೇಡ್ ಯೂನಿಯನ್‌ಗಳ ಕರೆ

ಅಮೇರಿಕನ್ ಟ್ರೇಡ್ ಯೂನಿಯನ್‌ಗಳು ಫೆಬ್ರುವರಿ 15 ರ ಮಹಾನ್ ಕಾರ್ಯಾಚರಣೆಯಲ್ಲಿ ಕೊನೆಗೊಂಡ ಯುದ್ಧ-ವಿರೋಧಿ ಚಳುವಳಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದೆ. 60 ರ ದಶಕದ ವಿಯೆಟ್ನಾಮ್ ಚಳುವಳಿಯನ್ನು ವಿರೋಧಿಸಿ ಆಗಿನ ಸರ್ಕಾರಕ್ಕೆ ಬೆಂಬಲ ನೀಡಿ ಅಮೇರಿಕನ್ ಟ್ರೇಡ್ ಯೂನಿಯನ್ ಚಳುವಳಿ ಗಳಿಸಿದ್ದ ಕೆಟ್ಟ ಹೆಸರನ್ನು ಈ ಮೂಲಕ ಅಳಿಸಿ ಹಾಕಿದೆ. ಜನವರಿ 11 ರಂದೇ ಚಿಕಾಗೋದಲ್ಲಿ ಯುದ್ಧ-ವಿರೋಧಿ ಚಳುವಳಿಯನ್ನು ಸಂಘಟಿಸಲು 60 ಯೂನಿಯನ್‌ಗಳ ಪ್ರತಿನಿಧಿಗಳು ಸಭೆ ಸೇರಿ uslaw (us labour against) wav - ಯುದ್ಧಕ್ಕೆ ವಿರೋಧಿಯಾದ ಅಮೇರಿಕನ್ ಕಾರ್ಮಿಕರು) ಎಂಬ ಸಂಘಟನೆ ಕಟ್ಟಿದರು. ಚುಟಿಘುಢಫೆಬ್ರುವರಿ 15 ರ ಮಹಾನ್ ಕಾರ್ಯಾಚರಣೆಯ ಪ್ರಮುಖ ಸಂಘಟಕರಲ್ಲಿ ಒಂದಾಗಿತ್ತು.

50 ಲಕ್ಷಕ್ಕೂ ಹೆಚ್ಚು ಕಾರ್ಮಿಕರನ್ನು ಪ್ರತಿನಿಧಿಸುವ 400 ಕ್ಕೂ ಹೆಚ್ಚು ಯೂನಿಯನ್‌ಗಳು ಅದೇ ಸಮಯದಲ್ಲಿ ಅಮೇರಿಕನ್ ಸರ್ಕಾರದ ಇರಾಕ್ ಮೇಲೆ ದಾಳಿ ಪ್ರಯತ್ನಗಳನ್ನು ವಿರೋಧಿಸಿ ನಿರ್ಣಯವೊಂದನ್ನು ಅಂಗೀಕರಿಸಿವೆ. ಅಮೇರಿಕ ಸರ್ಕಾರದ ಯುದ್ಧ ಪ್ರಯತ್ನಗಳನ್ನು ಸಕ್ರಿಯವಾಗಿ ವಿರೋಧಿಸುವಂತೆ ಕರೆ ನೀಡಿವೆ. ಇರಾಕ್ ಮತ್ತು ಅಮೆರಿಕಾದ ನಡುವೆ ಯಾವುದೇ ರೀತಿ ಸಂಬಂಧ ಇಲ್ಲ. ಇರಾಕ್ ಸರ್ಕಾರವಾಗಲಿ, ಜನತೆಯಾಗಲಿ ಅಮೇರಿಕನ್ ಜನತೆಗೆ ಯಾವುದೇ ಬೆದರಿಕೆ ಒಡ್ಡಿಲ್ಲ. ಈ ಯುದ್ಧದಿಂದ ಹಾನಿಗೊಳಗಾಗುವುದು ಅಮೇರಿಕನ್ ಕಾರ್ಮಿಕರ ಮಕ್ಕಳು, ಕುಟುಂಬಗಳು ಇರಾಕ್ ಜನತೆ. ಶಿಕ್ಷಣ, ವೈದ್ಯಕೀಯ ಸೇವೆ ಮುಂತಾದ ಸಾಮಾಜಿಕ ಕಲ್ಯಾಣ ಯೋಜನೆಗೆ ಬೇಕಾದ ಹಣವನ್ನು ಮಿಲಿಟರಿ ವೆಚ್ಚಕ್ಕೆ ತಿರುಗಿಸುವುದಲ್ಲದೆ, ಯುದ್ಧ ಅಮೇರಿಕನ್ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿಗೆ ನೆಪವಾಗುತ್ತದೆ ಎಂದು ನಿರ್ಣಯ ಕಟುವಾಗಿ ಟೀಕಿಸಿದೆ.

ನೊಬೆಲ್ ವಿಜೇತರ ಯುದ್ಧ - ವಿರೋಧ

ಪುಟ 12 ಕ್ಕೆ


ಬಾಗ್ದಾದ್‌ದಲ್ಲಿ ನಡೆದ ಯುದ್ಧ-ವಿರೋಧಿ ರ್‍ಯಾಲಿಯಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದರು.

ಅಚ್ಚರಿ, ವಿವಾದ, ಹೊಸತನಗಳ ನಡುವೆ ವಿಶ್ವಕಪ್ ಕ್ರಿಕೆಟ್

ಎಲ್ಲರ ನಿರೀಕ್ಷೆ, ಕಾತುರ, ಸಂಭ್ರಮ ಮತ್ತು ಆಘಾತಗಳೊಂದಿಗೆ 8ನೇ ವಿಶ್ವಕಪ್ ಕ್ರಿಕೆಟ್ ಟೂರ್ನಿ ಆರಂಭಗೊಂಡಿದೆ. ಈ ಬಾರಿ ನಮೀಬಿಯಾ ಮತ್ತು ಕೆನಡಾ ಒಳಗೊಂಡು 14 ತಂಡಗಳು ಭಾಗವಹಿಸಿವೆ.

ಹೊಸ ಶತಮಾನದ ಮೊದಲ ವಿಶ್ವಕಪ್‌ನ ಈ ಕ್ರಿಕೆಟ್ ಸರಣಿ ಹಲವು ವಿಶಿಷ್ಟ, ಆಡಂಬರ, ಹಲವಾರು ಏಳು - ಬೀಳುಗಳ ನಡುವೆ ಸಾಗಿದೆ. ಈ ಟೂರ್ನಿಯಲ್ಲಿ ಕ್ರೀಡಾಂಗಣಕ್ಕಿಂತ ಅದರ ಹೊರಗಿನ ಕಾವೇ ಹೆಚ್ಚಾಗಿದೆ.



ಭದ್ರತೆಯ ನೆಪವೊಡ್ಡಿ ಜಿಂಬಾಬ್ವೆ ಮತ್ತು ಕೀನ್ಯಾಗಳಲ್ಲಿ ಆಡಲು ನಿರಾಕರಿಸಿರುವ ಇಂಗ್ಲೆಂಡ್ ನ್ಯೂಜಿಲ್ಯಾಂಡ್ ಮತ್ತು ಆಸ್ಟ್ರೇಲಿಯಾ, ಉದ್ದೀಪನಾ ಔಷಧಿ ಸೇವನೆ ಆಪಾದನೆ ಮೇಲೆ ಶೇನ್‌ವಾರ್ನ್‌ಗೆ ಒಂದು ವರ್ಷದ ನಿಷಿದ್ಧ. ಜಿಂಬಾಬ್ವೆ ಆಟಗಾರರಾದ ಆ್ಯಂಡಿ ಫ್ಲವರ್, ಹೆನ್ರಿ ಒಲಾಂಗೊ ದೇಶದ ಆಂತರಿಕ ವಿಷಯಗಳ ವಿರುದ್ಧ ಪ್ರತಿಭಟನೆ. ಹೀಗೆ ಹೊರಗಿನ ವಿಷಯಗಳೇ ಹೆಚ್ಚು ಪ್ರಾಶಸ್ತ್ಯ ಪಡೆದಿವೆ.

ಇಂಗ್ಲೆಂಡ್ ಜಿಂಬಾಬ್ವೆಯಲ್ಲಿ ಪಂದ್ಯವಾಡಲು ನಿರಾಕರಿಸಿ ಜಿಂಬಾಬ್ವೆಗೆ ನಾಲ್ಕು ಅಂಕಗಳನ್ನು ಬಿಟ್ಟುಕೊಟ್ಟಿದೆ. ನ್ಯೂಜಿಲ್ಯಾಂಡ್ ಕೀನ್ಯಾದಲ್ಲಿ ಆಡದೆ ಅಂಕಕ್ಕಾಗಿ ಚೌಕಾಸಿ ನಡೆಸಿತು. ಆದರೆ ಐಸಿಸಿಯ ಬಿಗಿ ನಿಲುವಿನಿಂದಾಗಿ ಕೀನ್ಯಾಕ್ಕೆ ನಾಲ್ಕು ಅಂಕಗಳು ಲಭಿಸಿದೆ. ಈ ಎಲ್ಲಾ ಬೆಳವಣಿಗೆಗಳು ಈಗ ರಾಜಕೀಯ ಬಣ್ಣ ಪಡೆದಿರುವುದು ಜಗಜ್ಜಾಹೀರಾಗಿದೆ.

ಇನ್ನೂ ಕ್ರೀಡಾಂಗಣದ ಒಳಗೆ. ಉದ್ಘಾಟನಾ ಪಂದ್ಯದಲ್ಲಿ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡಗಳಲ್ಲೊಂದಾದ ದಕ್ಷಿಣ ಆಫ್ರಿಕಾ, ಬ್ರಿಯಾನ್ ಲಾರಾರ ಅರ್ಭಟದ ಬ್ಯಾಟಿಂಗ್‌ನಿಂದಾಗಿ ವೆಸ್ಟ್ ಇಂಡೀಸ್‌ಗೆ ಮಣಿದು ಅಚ್ಚರಿ ಮೂಡಿಸಿದೆ. ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತನ್ನ ಖ್ಯಾತಿಗೆ ತಕ್ಕಂತೆ ಆಟ ಮುಂದುವರಿಸಿದೆ. 'ಬಿ' ಗುಂಪಿನಲ್ಲಿ ಶ್ರೀಲಂಕಾ ಅಜೇಯ ಮುನ್ನಡೆ ಸಾಧಿಸಿದೆ. ಎಳೆಯ ಕೆನಡಾ ತಂಡ ತನಗಿಂತ ಅನುಭವಿ ಬಾಂಗ್ಲಾವನ್ನು ಸೋಲಿಸಿ ಐತಿಹಾಸಿಕ ವಿಜಯ ದಾಖಲಿಸಿದೆ.

ಈ ಮಧ್ಯೆ ಭಾರೀ ಭರವಸೆಗಳೊಂದಿಗೆ, ದ.ಆಫ್ರಿಕಾಕ್ಕೆ ತೆರಳಿದ ಭಾರತದ ಬ್ಯಾಟ್ಸ್‌ಮನ್ ಪಡೆ ಕಳಪೆ ಪ್ರದರ್ಶನದೊಂದಿಗೆ ಕ್ರಿಕೆಟ್ ಪಂಡಿತರ ಟೀಕೆಗೆ ಒಳಗಾಗಿದೆ. ಜೊತೆಗೆ ದೇಶದ ಅಭಿಮಾನಿಗಳ ಆಕ್ರೋಶಕ್ಕೆ ಗುರಿಯಾಗಿದೆ. ತನ್ನ ಪ್ರಥಮ ಪಂದ್ಯದಲ್ಲಿ ಎಳೆಗೂಸು ಹಾಲೆಂಡು ವಿರುದ್ಧ ರನ್ ಗಳಿಸಲು ತಿಣುಗಾಡಿದ್ದು ಮತ್ತು ಆಸ್ಟ್ರೇಲಿಯಾ ವಿರುದ್ಧದ ಹೀನಾಯ ಸೋಲು, ಇಡೀ ದೇಶದಾದ್ಯಂತ ಆಟಗಾರರ ಮನೆ ಮೇಲೆ ದಾಳಿ ಹಾಗೂ ಛಾಯಾ ಚಿತ್ರಗಳಿಗೆ ಬೆಂಕಿ ಹಚ್ಚಿದ್ದಾರೆ.

ಇಂದಿನ ಯುವ ಜನಾಂಗ ದೇಶ ಎದುರಿಸುತ್ತಿರುವ ನಿರುದ್ಯೋಗ, ಭ್ರಷ್ಟಾಚಾರ ಉದ್ಯೋಗಕಡಿತ, ಬೆಲೆ ಏರಿಕೆ, ಕೋಮುದಳ್ಳುರಿ ಇವುಗಳಿಗೆ ಭಾರತ ಕ್ರಿಕೆಟ್ ತಂಡದ ಕಳಪೆ ಪ್ರದರ್ಶನವೇ ಕಾರಣವೆಂಬಂತೆ ಇವರ ಗೆಲುವಿನಿಂದ ಆ ಕೊರತೆ ತುಂಬಬಹುದು ಎಂಬಂತೆ ವರ್ತಿಸುತ್ತಿರುವುದು ತೀರಾ ವಿಷಾದನೀಯ ಸಂಗತಿ. ಇಂತಹ ಮನಸ್ಥಿತಿ ಕ್ರೀಡಾ ಮನೋಭಾವವನ್ನು ಇಲ್ಲದಾಗಿಸುತ್ತದೆ.

ಹಲವು ಸಾಧನೆಗಳು

ಭಾರತದ ಖ್ಯಾತ ಆರಂಭಿಕ ಬ್ಯಾಟ್ಸ್‌ಮನ್ ಸಚಿನ್ ತೆಂಡೂಲ್ಕರ್ ಹಾಲೆಂಡ್ ವಿರುದ್ಧದ ಪಂದ್ಯದಲ್ಲಿ ವಿಶ್ವಕಪ್‌ನಲ್ಲಿ (23 ಪಂದ್ಯ) ಹೆಚ್ಚು ರನ್ ಮಾಡಿದ ದಾಖಲೆಗೆ ಪಾತ್ರರಾಗಿದ್ದಾರೆ. ಈ ಹಿಂದೆ ಪಾಕಿಸ್ಥಾನದ ಜಾವೆದ್ ಮಿಯಾಂದಾದ್ (33 ಪಂದ್ಯ) ಹೆಸರಿನಲ್ಲಿದ್ದ 1083 ರನ್ ಅಧಿಕರನ್ ಆಗಿತ್ತು. ಭಾರತದ ಆರಂಭಿಕ ದಾಳಿಗಾರ ಜಾವಗಲ್ ಶ್ರೀನಾಥ್ ಹಾಲೆಂಡ್ ಪಂದ್ಯದಲ್ಲಿ ಮೊದಲು ವಿಕೇಟ್ ಪಡೆಯುವುದರ ಮೂಲಕ ಏಕದಿನ ಕ್ರಿಕೆಟ್‌ನಲ್ಲಿ 300 ವಿಕೆಟ್ ಪಡೆದ ಎರಡನೇ ಭಾರತೀಯ ಬೌಲರ್ ಆಗಿದ್ದಾರೆ.

ಇನ್ನು ಪಾಕಿಸ್ತಾನದ. ವಾಸಿಂ ಅಕ್ರಂ ವಿಶ್ವಕಪ್‌ನಲ್ಲಿ ಹೆಚ್ಚು ಪಂದ್ಯವಾಡಿದ ಗೌರವಕ್ಕೆ ಪಾತ್ರರಾಗಿದ್ದಾರೆ. ಶ್ರೀಲಂಕಾದ ತಂಡದ ವೇಗದ ಬೌಲರ್ ಚಮಿಂದಾ ವಾಸ್ ಬಾಂಗ್ಲಾ ಮೇಲಿನ ಪಂದ್ಯದಲ್ಲಿ ಹ್ಯಾಟ್ರಿಕ್ ಸಾಧನೆಗೈದಿದ್ದಾರೆ.

ಇನ್ನೂ ಹೊಸ ತಂಡ ನಮೀಬಿಯಾ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ವಿರುದ್ಧ ಗಮನಾರ್ಹ ಪ್ರದರ್ಶನ ನೀಡಿದರೆ ಹಾಲೆಂಡ್ ಅನುಭವಿ ಭಾರತ ಮತ್ತು ಪಾಕಿಸ್ತಾನವನ್ನು ಕಾಡಿದೆ.

ವಿಶ್ವಕಪ್ ಪಂದ್ಯಾವಳಿ ಆರಂಭದಿಂದಲೂ ಹಲವು ಕರಾಳ ಮುಖಗಳು ಸುತ್ತುವರಿಯ ತೊಡಗಿವೆ. ಆಸ್ಟ್ರೇಲಿಯಾದ ಲೆಗ್‌ಸ್ಪಿನ್ನರ್ ಶೇನ್‌ವಾರ್ನ್ ಉದ್ದೀಪನಾ ಔಷಧಿ ಸೇವನೆ ಆಪಾದನೆಗೆ ಒಳಗಾಗಿ ಒಂದು ವರ್ಷದ ನಿಷೇಧಕ್ಕೆ ಒಳಗಾಗಿದ್ದಾರೆ. ಇದು ಕ್ರಿಕೆಟ್ ರಂಗಕ್ಕೆ ತಟ್ಟಿದ ಮತ್ತೊಂದು ಕಳಂಕವಾಗಿದೆ.

ಭದ್ರತೆ ಕಾರಣವೊಡ್ಡಿ ಇಂಗ್ಲೆಂಡ್ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ತಂಡಗಳು ಜಿಂಬಾಬ್ವೆ ಮತ್ತು ಕೀನ್ಯಾಗಳಲ್ಲಿ ಪಂದ್ಯವಾಡಲು ನಿರಾಕರಿಸಿ, ಪಂದ್ಯ ಸ್ಥಳಾಂತರಿಸುವಂತೆ ಅಂಕಗಳ ಹಂಚಿಕೆಗೆ ಸಂಬಂಧಿಸಿ ತೀವ್ರ ಒತ್ತಡ ತಂದರು. ಐಸಿಸಿ ಕೊನೆಗೂ ನಿಯಮಾವಳಿಗೆ ಬದ್ಧವಾಗಿ ಎದುರು ತಂಡಗಳಿಗೆ ಅಂಕ ನೀಡಿರುವುದು ಮೆಚ್ಚುವ ಸಂಗತಿ. ಇದರ ಮಧ್ಯೆ ಆಸ್ಟ್ರೇಲಿಯಾ ಮತ್ತೆ ಜಿಂಬಾಬ್ವೆ ಪ್ರವಾಸ ಕುರಿತು ತನ್ನ ರಾಜಕೀಯ ಮುಂದುವರೆಸಿದೆ. ಆಸ್ಟ್ರೇಲಿಯಾ ಪ್ರಧಾನಿ ಜಾನ್‌ಹೊವರ್ಡ್ ಮತ್ತೊಮ್ಮೆ ಜಿಂಬಾಬ್ವೆ ಪಂದ್ಯ ರದ್ದುಗೊಳಿಸುವಂತೆ ಅಂತರ ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಮೇಲೆ ಒತ್ತಡ ಹೇರಿರುವುದು ಖಂಡನೀಯ.

ತಮ್ಮ ದೇಶದೊಳಗಿನ ಆಂತರಿಕ ಹೋರಾಟಗಳನ್ನು ರಾಜಕೀಯಗೊಳಿಸಲು ದೇಶದಲ್ಲಿ ಬಡತನ, ನಿರುದ್ಯೋಗ ತಾಂಡವ ವಾಡುತ್ತಿದೆ. ಜನ ಹಸಿವಿನಿಂದ ಸಾಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮೈದಾನದಲ್ಲಿ ನೆಮ್ಮದಿಯಿಂದ ಪಾಲ್ಗೊಳ್ಳಲು ಸಾಧ್ಯವಿಲ್ಲ ಎಂದಿರುವ ಜಿಂಬಾಬ್ವೆಯ ಆ್ಯಂಡಿ ಫ್ಲವರ್ ಹಾಗೂ ಹೆನ್ರಿ ಒಲಾಂಗೋ ತಮ್ಮ ತೋಳುಗಳಿಗೆ ಕಪ್ಪು ಪಟ್ಟಿ ಧರಿಸಿ ಮೊದಲೆರಡು ಪಂದ್ಯಗಳಲ್ಲಿ ಆಟಕ್ಕಿಳಿದಿದ್ದಾರೆ. ಇದು ರಾಜಕೀಯವನ್ನು ಕ್ರೀಡೆಗೆ ಸೇರಿಸುವ ಆಟವಷ್ಟೆ ಎಂದಿರುವ ಅಲ್ಲಿನ ಮಾಧ್ಯಮಗಳು ಈ ಇಬ್ಬರು ಆಟಗಾರರನ್ನು ತೀವ್ರ ಟೀಕೆಗೆ ಗುರಿ ಮಾಡಿವೆ. ಈ ನಡುವೆ ಹೆನ್ರಿ ಒಲಾಂಗೋರನ್ನು ಆತ ಪ್ರತಿನಿಧಿಸುವ ಹರಾರೆ ಕ್ರಿಕೆಟ್ ಕ್ಲಬ್‌ನಿಂದ ಉಚ್ಚಾಟಿಸಲಾಗಿದೆ. ಇದರಿಂದಾಗಿ ಐಸಿಸಿ ಪಟ್ಟಿಯಲ್ಲೂ ಆತ ಸ್ಥಾನ ಕಳೆದುಕೊಂಡಿದ್ದಾರೆ.

ಪಾಕಿಸ್ತಾನಿ ತಂಡದ ನಾಯಕ ವಾಕರ್ ಯೂನಸ್ ಆಸ್ಟ್ರೇಲಿಯಾದ ಬ್ಯಾಟ್ಸ್‌ಮನ್ ಸೈಮಂಡ್ಸ್ ಮೈಮೇಲೆ ಚೆಂಡು ಎಸೆದುದ್ದಕ್ಕೆ ಆ ಪಂದ್ಯದಲ್ಲಿ ಬೌಲಿಂಗ್ ಕಳೆದುಕೊಳ್ಳಬೇಕಾಯಿತು. ಇದು ತಂಡದ ನಾಯಕನಿಗೆ ತಕ್ಕುದಾಗಿರಲಿಲ್ಲ. ಇದು ಕ್ರೀಡಾ ಸ್ಫೂರ್ತಿಗೂ ಸಲ್ಲದ್ದು. ಒಟ 8ನೇ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ಹ ಏಳು-ಬೀಳು ಸಾಧನೆ-ಸ್ಫೂರ್ತಿ ಮತ್ತು ವಿವಾದ ನಡುವೆ ಮುನ್ನಡೆಯುತ್ತಿದೆ.

- ಜಯರಾಮು

ಜಿಂಬಾಬ್ವೆ ವಿರುದ್ಧ ಪ್ರತಿಭಟನೆ ಏಕೆ?

ಜಿಂಬಾಬ್ವೆ ದಕ್ಷಿಣ ಆಫ್ರಿಕಾ ಖಂಡ ದೇಶ. ಇದು ಸ್ವಾತಂತ್ರ್ಯ ಗಳಿಸಿದ್ದು 2 ವರ್ಷಗಳ ಹಿಂದೆ ಆ ಮೊದಲು ಇದ ಬ್ರಿಟೀಷ್ ಆಡಳಿತಕ್ಕೆ ಒಳಪಟ್ಟಿತು. ಹಿಂ ಅದಕ್ಕೆ ರೋಡೇಶಿಯಾ ಎಂಬ ಹೆಸರಿತ್ತು ಸಿಸಿಲ್ ರೋಡ್ಸ್ ಎಂಬ ಬ್ರಿಟೀಷ್ ತ ಕಂಪನಿಗಾಗಿ ಈಗಿನ ಜಿಂಬಾಬ್ವೆ, ಭೂಮಿ ಯನ್ನು ಭಾರೀ ಮೋಸ ಮತ್ತು ವಂಚನೆಗ ಮೂಲಕ ಕಬಳಿಸಿ ನಂತರ ಯುರೋಪಿನಿಂ ಬಿಳಿಯರ ವಲಸೆ ಹೆಚ್ಚಾಗಿ ಅವರ ಪ್ರಾಬ ಬೆಳೆಯಿತು. ಆಗಿನ ಬ್ರಿಟೀಷ್ ಸಾಮ್ರಾಜ್ಯಶಾ ಆಡಳಿತ ಇದಕ್ಕೆ ಕುಮ್ಮಕ್ಕು ನೀಡಿತು. ನಂತ ಅಲ್ಲಿನ ಮೂಲ ನಿವಾಸಿ ಗಳಾದ ಕಪ್ಪು ಜನ ಮೇಲೆ ವಲಸೆ ಬಂದ ಬಿಳಿಯರು ಮತ್ತು ಅವ ಕಂಪನಿಗಳು ಹಾಡುಹಗಲೇ ದಾಳಿ ಹಲ್ಲೆ, ಹ ನಡೆಸಿ ಅವರ ಭೂಮಿಯನ್ನು ಕಬಳಿಸಿದರು ಹೀಗೆ ಅಲ್ಲಿನ ಮೂಲನಿವಾಸಿಗಳ ಭೂಹೀನರಾದರು.

ಇತ್ತೀಚೆಗೆ ಅಧಿಕಾರಕ್ಕೆ ಬಂದ ಅಧ್ಯ ಮುಗಾಬೆಯವರ ನೇತೃತ್ವದ ಝುಮಾ ಪಿ ಎಫ ಪಕ್ಷ ಆರ್ಥಿಕ ವರ್ಣಬೇಧ ಕೊನೆಗಾಣಿಸು ದೇಶದ ಹದಗೆಟ್ಟ ಆರ್ಥಿಕತೆ ಸುಧಾರಿಸು ನಿಟ್ಟಿನಲ್ಲಿ ಭೂಸುಧಾರಣೆಗೆ ಮುಂದಾಗಿದ ಇದನ್ನು ಸಹಿಸದ ಅಲ್ಲಿನ ಭೂಮಾಲಿ ಬಿಳಿಯರು ಅಲ್ಲಿನ ಸರ್ಕಾರದ ವಿರು ಅಪಪ್ರಚಾರ ಆರಂಭಿಸಿ ದೇಶದಲ್ಲಿ ಪ್ರಜಾಸ ನಾಶಗೊಂಡಿದೆ ಎಂಬ ಅಪಪ್ರಚಾ ಕೈಗೊಂಡಿದ್ದಾರೆ. ಇದಕ್ಕೆ ಧ್ವನಿಯಾ ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ ನ್ಯೂಜಿಲ್ಯಾಂಡ್‌ಗಳು ತಮ್ಮ ಹಳೆಯ ಸಂಬಂಧಿಕರ ಭೂಮಿ, ಭೂಹೀನ ಕಪ್ಪು ಜನ ಪಾಲಾಗುತ್ತಿರುವುದನ್ನು ಸಹಿಸಲಾಗುತ್ತಿ ಆದ್ದರಿಂದಲೇ ಜಿಂಬಾಬ್ವೆಯ ಕೆಲ ಭೂಮಾಲ ಬಿಳಿ ಆಟಗಾರರ ಭೂಮಿಯು ಈ ಭೂ ಸುಧಾರಣೆಯಿಂದ ಕೈ ತಪ್ಪಲಿದೆ. ಹಾಗಾಗಿಯೆ ಕೆಲ ಆಟಗಾರರ ಪ್ರತಿಭಟನ ತಂತ್ರ.ವರ್ಣಬೇದ ನೀತಿಗೆ ಬದ್ಧವಾಗಿ ಅದಕ್ಕನುಗುಣವಾಗಿ ಈ ವಿರೋಧ.

'ಇರಾಕ್ ಮೇಲೆ ಯುದ್ಧ ಬೇಡ'

ಪುಟ 11 ರಿಂದ

ಹತ್ತಕ್ಕೂ ಹೆಚ್ಚು ನೊಬೆಲ್ ಪ್ರಶಸ್ತಿ ವಿಜೇತರು ಅಮೇರಿಕದ ಯುದ್ದ ಪ್ರಯತ್ನಗಳನ್ನು ವಿರೋಧಿಸಿ ಹೇಳಿಕೆ ನೀಡಿದ್ದಾರೆ. ಅಮೇರಿಕ ಮತ್ತು ಯುರೋಪುಗಳ ಗೌರವಾನ್ವಿತ ಬುದ್ಧಿಜೀವಿಗಳು, ಕಲಾವಿದರು, ವಿಜ್ಞಾನಿಗಳು, ಧಾರ್ಮಿಕ ನಾಯಕರು ಯುದ್ಧವನ್ನು ಖಂಡಿಸಿದ್ದು ಮಾತ್ರವಲ್ಲದೆ ಫೆಬ್ರುವರಿ 15 ರ ಮಹಾನ್ ಕಾರ್ಯಾಚರಣೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ದಕ್ಷಿಣ ಆಫ್ರಿಕಾದ ಡೆಸ್‌ಮೆಂಡ್ ಟುಟು, ಅಮೇರಿಕದ ಜೆಸ್ಸಿ ಜ್ಯಾಕ್ಸನ್, ಅನುಕ್ರಮವಾಗಿ ನ್ಯೂಯಾರ್ಕ್ ಮತ್ತು ಲಂಡನ್ ರ್‍ಯಾಲಿಗಳಲ್ಲಿ ಭಾಗವಹಿಸಿದರು.

ನೂರು ಕವಿಗಳ ಕಾವ್ಯ ಪ್ರತಿಭಟನೆ


ಸಾಹಿತಿಗಳು, ಕಲಾವಿದರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದರು. ಜಗತ್ತಿನಾದ್ಯಂತ ನೂರು ಕವಿಗಳು ಇಂಟರ್‌ನೆಟ್ ಮೂಲಕವೇ ಸಂಪಾದಿಸಲಾದ ಕವನ ಸಂಕಲನದ ಮೂರು ಆವೃತ್ತಿಗಳನ್ನು ಎರಡೇ ವಾರಗಳಲ್ಲಿ ತಂದರು. ಇದನ್ನು ಇಂಟರ್‌ನೆಟ್ ಮೂಲಕ ವ್ಯಾಪಕವಾಗಿ ಪ್ರಸಾರ ಮಾಡಲಾಯಿತು. ಅಲ್ಲದೆ ಹೆಚ್ಚಿನ ರ್‍ಯಾಲಿಗಳಲ್ಲಿ ಈ ಕವನಗಳನ್ನು ಓದಲಾಯಿತು.

ತೈಲ- ರಕ್ತದ ಬಕೆಟ್ ಹಿಡಿದ ಬುಶ್

ತೈಲಕ್ಕೂ ಯುದ್ಧಕ್ಕೂ ಇರುವ ಸಂಬಂಧವನ್ನು ಇಡೀ ಚಳುವಳಿ ಚೆನ್ನಾಗೇ ಗುರುತಿಸಿತ್ತು. ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆ ಮುಖ್ಯ ಕಛೇರಿ ಬಳಿ ನಡೆದ 5 ಲಕ್ಷ ಜನ ಭಾಗವಹಿಸಿದ ಪ್ರಮುಖ ರ್‍ಯಾಲಿಯಲ್ಲಿ ಸೋರುತ್ತಿರುವ ತೈಲ ಮತ್ತು ರಕ್ತದ ಬಕೆಟ್ ಹಿಡಿದ ಬುಶ್‌ನ ದೊಡ್ಡ ಕಟೌಟ್ ಇದರ ಪ್ರತೀಕವಾಗಿತ್ತು. 'ತೈಲಕ್ಕಾಗಿ ರಕ್ತ ಸುರಿಸುವುದು ಬೇಡ' ಇಡೀ ಚಳುವಳಿಯ ಘೋಷಣೆಯಾಗಿತ್ತು.

ಇಸ್ರೇಲಿ ಪ್ಯಾಲೆಸ್ಟೈನ್ನಿಯನ್ನರ ಜಂಟಿ ರ್‍ಯಾಲಿ

ಇಸ್ರೇಲಿನ ಟೆಲ್ ಲಿವಿಟ್‌ನಲ್ಲಿ ಇಸ್ರೇಲಿ ಜ್ಯೂಗಳು ಮತ್ತು ಪ್ಯಾಲಿಸ್ಟೇನಿ ಯನ್ನರು ಸಮಾನ ಸಂಖ್ಯೆಯಲ್ಲಿ ಇದ್ದ ಇರಾಕ್ ಯುದ್ದ ವಿರೋಧಿ ರ್‍ಯಾಲಿ ನಡೆದದ್ದು ಇನ್ನೊಂದು ವಿಶೇಷ. ಈ ಗಮನಾರ್ಹ ಪ್ರದರ್ಶನವೂ ಮೂರು ಸಾವಿರ ಜನ ಇಸ್ರೇಲಿ- ಪ್ಯಾಲೆಸ್ಟೇನಿಯನ್ನರ ಜತೆ ಜ ಭಾಗವಹಿಸಿದ್ದರು. ಇದೇ ರೀತಿ ಬೊಸ್ನಿಯ ಕೋರಿಯಾಗಳಲ್ಲಿ ಅಮೇರಿಕನ್ ಪಿತೂರಿಯ ಈಜಾಡುತ್ತಿರುವ ಜನಾಂಗಗಳು ಯುದ್ಧ-ವಿರೋಧಿ ಚಳುವಳಿಯಲ್ಲಿ ಜ ಭಾಗವಹಿಸಿದರು.



ಲಂಡನ್ ರ್‍ಯಾಲಿಯಲ್ಲಿ ಬುಶ್, ಬ್ಲೇರ್‌ರ ಮುಖವಾಡ ತೊಟ್ಟ ಪ್ರತಿಭಟನಾಕಾರರು

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH